ಕೊಡಗು ಸಂಗಾತಿ

ಆಗಸ್ಟ್ 1 ರಿಂದ 31, 2001 ಪಾಕ್ಷಿಕ ಪತ್ರಿಕೆ (ಆಟಿ 16-31 - ಸೋಣ 1-15)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೬ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 15-16 ಪುಟಗಳು : 24 ಬೆಲೆ ರೂ. : 6-00



ಬಾಳೆ ಕೃಷಿಯಲ್ಲಿ ಭಾರತಕ್ಕೆ ವಿಶ್ವ ಮಾರುಕಟ್ಟೆಯಲ್ಲಿ ದ್ವಿತೀಯ ಸ್ಥಾನ

ಚಿತ್ರ : ಸದಾನಂದ ಗೌಡ, *ನಾಪೋಕ್ಲು*

ಲೇಖನ : ಒಳಪುಟದಲ್ಲಿ

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.)

ಒಂದನೇ 'ಸಿ' ಮುಖ್ಯ ರಸ್ತೆ, ಗಂಗಾನಗರ, ಬೆಂಗಳೂರು - 32 ☎ : 3433014

ವಾರ್ಷಿಕ ಮಹಾಸಭೆ ಮತ್ತು ಕ್ರೀಡಾ ಮಹೋತ್ಸವ ಸರ್ವರಿಗೂ ಸ್ವಾಗತ

ಕ್ರೀಡಾ ಪಂದ್ಯಾಟಗಳು : *ದಿನಾಂಕ* 5-8-2001 *ಸಮಯ ಬೆಳಿಗ್ಗೆ* 8-00 *ಗಂಟೆಗೆ*

ವಾರ್ಷಿಕ ಕ್ರೀಡಾ ಕೂಟ : *ದಿನಾಂಕ* 26-8-2001 *ಸಮಯ ಬೆಳಿಗ್ಗೆ* 8-00 *ಗಂಟೆಗೆ*

ಸ್ಥಳ : *ಬಿ. ಇ. ಎಲ್ ಅಂಬೇಡ್ಕರ್ ಕ್ರೀಡಾಂಗಣ, ಜಾಲಹಳ್ಳಿ, ಬೆಂಗಳೂರು* - 13

ಸಾಂಸ್ಕೃತಿಕ ಸ್ಪರ್ಧೆಗಳು : *ದಿನಾಂಕ* 19-8-2001 *ಸಮಯ ಮಧ್ಯಾಹ್ನ* 1-00 *ಗಂಟೆಗೆ*

ಸ್ಥಳ : *ಯವನಿಕ, ನೃಪತುಂಗ ರಸ್ತೆ, ರಿಸರ್ವ್ ಬ್ಯಾಂಕಿನ ಹತ್ತಿರ, ಬೆಂಗಳೂರು* - 01 ☎ : 2214911

ಸಾಂಸ್ಕೃತಿಕ ಸಂಜೆ : *ದಿನಾಂಕ* 1-9-2001 *ಸಮಯ ಮಧ್ಯಾಹ್ನ* 3-00 *ಗಂಟೆಗೆ*

ಸ್ಥಳ : *ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ, ಬೆಂಗಳೂರು*

ಮೇಲಿನ ಸಮಾಜವು ಪ್ರತಿಭಾವಂತ ಗೌಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದು ಈ ವರ್ಷದ ಅಂದರೆ 2000-2001 *ರ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದವರಿಗೆ ಪ್ರೋತ್ಸಾಹ ಧನವನ್ನು ನೀಡಲಿದೆ. ಆಸಕ್ತರು ತಮ್ಮ ಜೆರಾಕ್ಸ್ ಅಂಕಪ್ರತಿಯೊಂದಿಗೆ* 10-9-2001 *ರ ಒಳಗೆ ಸಮಾಜಕ್ಕೆ ಕಳುಹಿಸಲು ಕೋರಿದೆ.*

ವಾರ್ಷಿಕ ಮಹಾಸಭೆ ಮತ್ತು ಕೈಲ್ ಮುಹೂರ್ತ ಹಬ್ಬದ ಮಮತೆಯ ಕರೆಯೋಲೆ

ದಿನಾಂಕ : 16-9-2001 **ಸಮಯ :** *ಪೂರ್ವಾಹ್ನ* 9-00 *ಗಂಟೆಗೆ*

ಸ್ಥಳ : *ಜಸ್ಮಾ ಭವನ, ಕ್ವೀನ್ಸ್ ರಸ್ತೆ, ವಸಂತ ನಗರ, ಬೆಂಗಳೂರು* - 52

ಮುಖ್ಯ ಅತಿಥಿಗಳಾಗಿ : *ಶ್ರೀಮಾನ್* **ಡಿ. ವಿ. ಸದಾನಂದ ಗೌಡ,** (*ಹಾಲಿ ಎಂ. ಎಲ್.ಎ, ಪುತ್ತೂರು*)
ಮತ್ತು ಶ್ರೀಮತಿ **ಚಂದ್ರಕಲಾ,** (*ಕೊಡಗು ಜಿಲ್ಲಾ ಪರಿಷತ್ ಅಧ್ಯಕ್ಷೆ*) *ಭಾಗವಹಿಸುವರು.*

ಕೊಡಗಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸರ್ವ ಗೌಡ ಬಾಂಧವರು ಇದನ್ನೇ ಆಮಂತ್ರಣವೆಂದು ಭಾವಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ನಂಗಾರು ನಿಂಗರಾಜು, *ಗೌರವ ಜಂಟಿ ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಪರವಾಗಿ*

ಕೊಡಗು ಗೌಡ ವಿದ್ಯಾ ಸಂಘದ ವತಿಯಿಂದ ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಭಾಷಣ ಸ್ಪರ್ಧೆ

19-8-2001 *ರಂದು ಕೊಡಗು ಗೌಡ ವಿದ್ಯಾ ಸಂಘದ ವತಿಯಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ಸಾಧನೆಮಾಡಿರುವ ಜನಾಂಗದ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಲು ತೀರ್ಮಾನಿಸಲಾಗಿದೆ. ಅಲ್ಲದೆ ಅಂದು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.*

ಕಳೆದ ಶೈಕ್ಷಣಿಕ ಸಾಲಿನಲ್ಲಿ 7 *ನೇ ತರಗತಿ,* 10 *ನೇ ತರಗತಿ, ದ್ವಿತೀಯ ಪಿ.ಯು.ಸಿ. ಅಂತಿಮ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉನ್ನತ ನಿರ್ವಹಣೆ ತೋರಿರುವ ಜನಾಂಗದ ವಿದ್ಯಾರ್ಥಿಗಳು ತಾ.* 10-8-2001 *ರ ಒಳಗಾಗಿ ಸಂಬಂಧಿಸಿದ ಅಂಕಪಟ್ಟಿಯನ್ನು ಕೊಡಗು ಗೌಡ ವಿದ್ಯಾ ಸಂಘದ ಕಚೇರಿಗೆ ತಲುಪಿಸುವುದು.*

ಅಲ್ಲದೆ, ತಾ. 19 *ರ ಬೆಳಿಗ್ಗೆ* 9-30 *ಗಂಟೆಗೆ ಸಂಘದ ಆವರಣದಲ್ಲಿ ಜನಾಂಗದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ,* 3 *ನೇ ತರಗತಿಯೊಳಗಿನ ಮತ್ತು* 4 *ರಿಂದ* 7 *ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಅಥವಾ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಭಯೋತ್ಪಾದನೆ, ಆಗ್ರಾ ಶೃಂಗಸಭೆ ಎಂಬ ವಿಷಯದ ಯಾವುದಾದರೊಂದು ಆಯ್ಕೆ ವಿಷಯದ ಕುರಿತು ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ತಾ.* 10-8-2001 *ರ ಒಳಗೆ* **ಅಧ್ಯಕ್ಷರು, ಗೌಡ ವಿದ್ಯಾ ಸಂಘ, ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ** *ಈ ವಿಳಾಸಕ್ಕೆ ಬರೆದುಕೊಳ್ಳುವಂತೆ ಸಂಘದ ಪ್ರಕಟಣೆಯೊಂದು ತಿಳಿಸಿದೆ.*

☎ : 08272 - 29906

2001, ಆಗಸ್ಟ್ 1 ರಿಂದ 31 ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	**ಕೊಡಗು ಸಂಗಾತಿ,** 35, "ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 95821/516771**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047**
ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ	ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್, ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ,
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್ :** 08276/73370
ಬೆಂಗಳೂರು ಮಹಾನಗರ	ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, **ಫೋನ್ :** 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಸಂಸ್ಕೃತಿಗಳ ಸಮ್ಮಿಲನ

ಮನುಷ್ಯ ಆದಿಮಾನವನ ಕಾಲದಲ್ಲಿ ಮಾತ್ರ ಯಾವುದೇ ಭೇದವಿಲ್ಲದೆ ಮನುಷ್ಯ ಜಾತಿಯಾಗಿದ್ದ. ಆದರೆ ನಾಗರೀಕತೆ ಬಂದಂತೆಲ್ಲಾ ಭೇದಭಾವ ಪ್ರಾರಂಭವಾಯಿತು. ಗುಂಪುಗಳಾದವು ಗುಂಪುಘರ್ಷಣೆ ಪ್ರಾರಂಭವಾಯಿತು. ಬಲಾಢ್ಯವಾದ ಗುಂಪು ಬಲಹೀನವಾದ ಗುಂಪನ್ನು ತನ್ನ ಆಧೀನದಲ್ಲಿಟ್ಟುಕೊಂಡು ಗುಲಾಮರನ್ನಾಗಿಮಾಡಿ ದಬ್ಬಾಳಿಕೆ ಪ್ರಾರಂಭವಾಯಿತು. ಬಲಾಢ್ಯ ಗುಂಪಿನ ಬಲಾಢ್ಯ ವ್ಯಕ್ತಿ ಗುಂಪಿನ ನಾಯಕನಾದ. ನಂತರ ರಾಜ್ಯಗಳನ್ನು ಸ್ಥಾಪಸಿ ರಾಜನಾದ. ಒಂದೊಂದು ಗುಂಪು ಒಂದೊಂದು ವಿಧದ ದೇವರ ಆರಾಧನೆಯನ್ನು ಮಾಡತೊಡಗಿ ಅವುಗಳೇ ನಂತರ ಮತಸ್ಥಾಪನೆಗೆ ಕಾರಣವಾಯಿತು. ಈ ರೀತಿ ಗುಂಪು ಘರ್ಷಣೆಗಳಿಂದಾಗಿ ಒಂದು ಪಂಗಡಕ್ಕೆ ಇನ್ನೊಂದು ಪಂಗಡಕ್ಕೆ ಜಗಳಗಳು ಪ್ರಾರಂಭವಾಗಿ ಅದನ್ನು ಯುದ್ಧಗಳೆಂದು ಕರೆದರು. ಕೆಲವರು ರಾಜ್ಯವಿಸ್ತಾರಕ್ಕಾಗಿ ಯುದ್ಧ ಮಾಡಿದರು. ಇನ್ನು ಕೆಲವರು ತಮ್ಮ ಧರ್ಮವನ್ನು ಬೇರೆಕಡೆ ಹರಡುವುದಕ್ಕಾಗಿ ಯುದ್ಧ ಮಾಡಿದರು. ಮನುಷ್ಯ ಹಕ್ಕಿಯಂತೆ ಆಕಾಶದಲ್ಲಿ ಹಾರುವುದಕ್ಕೂ, ಬೇರೆ ಗ್ರಹಗಳಿಗೂ ಹೋಗಿ ಬರಲೂ, ಮೀನಿನಂತೆ ನೀರಿನಲ್ಲಿ ಹೋಗಲು ಕಲಿತರೂ ರಾಜ್ಯಗಳ ರಾಷ್ಟ್ರಗಳಲ್ಲಿ ಇರುವ ಭೇದ ಭಾವಗಳು ಹೋಗಲಿಲ್ಲ. ಜಾತಿ ಜಾತಿಗಳ ಭೇದಭಾವ ಕಡಿಮೆಯಾಗಲಿಲ್ಲ. ಧರ್ಮಾಧರ್ಮಗಳ ಕಲಹ ತಪ್ಪಿಲ್ಲ. ಎಲ್ಲರೂ ವಿಶ್ವ ಭ್ರಾತೃತ್ವದ ತತ್ವವನ್ನು ಭೋಧಿಸುತ್ತಾರೆ. ಈ ತತ್ವಗಳು ಸಾವಿರಾರು ವರ್ಷಗಳಿಂದ ಈ ಪ್ರಪಂಚದಲ್ಲಿದ್ದರೂ ಅದರ ಅನುಷ್ಠಾನವಾಗದಿರಲು ಕಾರಣವೇನು? ಮನುಷ್ಯ ನಾಗರೀಕನಾದಷ್ಟೂ ಸ್ವಾರ್ಥಿಯಾಗಿದ್ದಾನೆಯೋ? ಇದಕ್ಕೆ ಅಂತ್ಯವೇ ಇಲ್ಲವೇ? ಆದಿಮಾನವ ಸತ್ಯಯುಗದಲ್ಲಿದ್ದ ಅವನಿಗೆ ಈಗಿನ ರೀತಿಯ ಸ್ವಾರ್ಥತೆ ಇರಲಿಲ್ಲ. ನವನಾಗರೀಕ ಮಾನವನು ಆದಿಮಾನವನಿಗಿಂತ ಕೀಳು ಮಟ್ಟದವನೇ? ಇದಕ್ಕೆಲ್ಲಾ ಈ ಎಲ್ಲಾ ಸಂಸ್ಕೃತಿಗಳ ಸಮ್ಮಿಲನ ಅವಶ್ಯವೆಂದು ಸಂಗಾತಿಯ ಅಭಿಪ್ರಾಯ.

ರಾಷ್ಟ್ರೀಯ ಕಿರಿಯರ ಹಾಕಿ ತಂಡಕ್ಕೆ ಜಿಲ್ಲೆಯ ಕಾಳೇರಮ್ಮನ ಪಿ. ರಾಯ್ ಆಯ್ಕೆ



ರಾಷ್ಟ್ರೀಯ ಕಿರಿಯರ ಹಾಕಿ ತಂಡಕ್ಕೆ ಕೊಡಗು ಜಿಲ್ಲೆಯ ಕಾಳೇರಮ್ಮನ ಪಿ. ರಾಯ್ ಅವರು ಆಯ್ಕೆಯಾಗುವ ಮೂಲಕ ಕೊಡಗಿನ ಸೋಮವಾರಪೇಟೆ ತಾಲೂಕಿನ ಕಾಜೂರು ಗ್ರಾಮದ ಕಾಳೇರಮ್ಮನ ಪಾಲಾಕ್ಷ ಸಾವಿತ್ರಿ ದಂಪತಿಗಳ ಪುತ್ರರಾದ ಕೆ. ಪಿ. ರಾಯ್ ಅವರು ತಮ್ಮ ಅಸಾಧಾರಣ ಪ್ರತಿಭೆ ನಿರಂತರ ಪರಿಶ್ರಮದ ಫಲ ಸ್ವರೂಪವಾಗಿ ಇದೀಗ ರಾಷ್ಟ್ರೀಯ ಕಿರಿಯರ ಹಾಕಿ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ.

ಪ್ರಸ್ತುತ ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಭಾರತೀಯ ಕ್ರೀಡಾ ಪ್ರಾಧಿಕಾರದ ಪರವಾಗಿ ರಾಜ್ಯಮಟ್ಟದ ಹಾಕಿಯಲ್ಲಿ ಪಾಲ್ಗೊಂಡಿರುವ ರಾಯ್ ಅವರು ಐ. ಹೆಚ್. ಎಫ್ ತಂಡಕ್ಕೆ ಆಯ್ಕೆಯಾಗಿರುವುದಲ್ಲದೆ ಮಲೇಷಿಯಾದ ಇಪೋನಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಭಾಗವಹಿಸಿ ಇವರ ತಂಡ ಏಷ್ಯಾ ಕಪ್‌ಗೆಲ್ಲುವುದರಲ್ಲಿ ಯಶಸ್ವಿಯಾಗಿ ಹಿಂದಿರುಗಿದ್ದಾರೆ. ಇತ್ತೀಚೆಗೆ ನಡೆದ ಇಟಗಿ ಸ್ಮಾರಕ ಹಾಕಿ ಪಂದ್ಯಾವಳಿಗಳಲ್ಲಿ ಅತ್ಯುತ್ತಮ ಪ್ರದರ್ಶನ ರಾಯ್ ನೀಡಿದ್ದಾರೆ. ಅಲ್ಲದೆ ಬೆಳಗಾಂನ M.L.I.R.C. ತಂಡದಿಂದ ಸಬ್‌ಜೂನಿಯರ್ ನೆಹರು ಗೋಲ್ಡ್ ಕಪ್ - ದೆಹಲಿಯಲ್ಲಿಯೂ,
S.A.I. ಜೂನಿಯರ್‌ಕಪ್ - ದೆಹಲಿಯಲ್ಲಿಯೂ,
ಆಲ್ ಇಂಡಿಯಾ ಟ್ರೇಡರ್ಸ್ ಕಪ್ - ನೈನಿತಾಲ್‌ನಲ್ಲಿಯೂ,
ಮುರುಗಪ್ಪ ಗೋಲ್ಡ್ ಕಪ್ ಮದರಾಸ್‌ನಲ್ಲಿಯೂ,
ಸೀನಿಯರ್ ನೆಹರು ಕಪ್ - ದೆಹಲಿಯಲ್ಲಿಯೂ,
31 ನೇ ಜೂನಿಯರ್ ನ್ಯಾಷನಲ್ಸ್ - ಬೆಂಗಳೂರಿನಲ್ಲಿಯೂ,
32 ನೇ ಜೂನಿಯರ್ ನ್ಯಾಷನಲ್ಸ್ - ಮದರಾಸ್‌ನಲ್ಲಿಯೂ,
ಬೆಂಗಳೂರಿನಲ್ಲಿ ನಡೆದ ಕಾರ್ಯಪ್ಪ ಮೆಮೋರಿಯಲ್ ಕಪ್‌ನಲ್ಲಿಯೂ ಬೆಸ್ಟ್ ಫುಲ್‌ಬ್ಯಾಕ್ ಪ್ರಶಸ್ತಿ ಪಡೆದಿರುತ್ತಾರೆ.

ಇತರ ಹಲವಾರು ಪಂದ್ಯಗಳಲ್ಲಿ ಅತ್ಯುತ್ತಮವಾಗಿ ಆಡಿರುತ್ತಾರೆ. ಇವರು ಹತ್ತು ಕುಟುಂಬ ಹದಿನೆಂಟುಗೋತ್ರದ ಅರೆಭಾಷಿಕ ಗೌಡರಲ್ಲಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಪ್ರಪ್ರಥಮ ಹಾಕಿ ಆಟಗಾರನೆಂಬ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ. ಇವರು ಚಿಕ್ಕಂದಿನಿಂದಲೇ ತಮ್ಮ ಸ್ವಂತ ಆಸಕ್ತಿಯಿಂದ ಹಾಕಿ ಆಟದ ಹವ್ಯಾಸ ಬೆಳೆಸಿಕೊಂಡಿರುತ್ತಾರೆ.

ಶ್ರೀಯುತರ ಪ್ರತಿಭೆಯು ವಿಶ್ವ ಮಟ್ಟದಲ್ಲಿ ಮೆರೆಯುವುದಲ್ಲದೆ ಕುಲದೇವರು ವೆಂಕಟರಮಣ ಮತ್ತು ತಾಯಿ ಶಾರದಾಂಬೆಯ ಕೃಪಾಕಟಾಕ್ಷ ಸದಾ ಇರಲೆಂಬುದಾಗಿ ಸಂಗಾತಿ ಈ ಸಂದರ್ಭದಲ್ಲಿ ಶುಭವನ್ನು ಹಾರೈಸುತ್ತದೆ.

— ಸಂಗಾತಿ.

ಕೊಡಗು ಸಂಗಾತಿಯನ್ನು ಕೊಂಡು ಓದಿರಿ.

ನಾಟಕೀಯ ಬೆಳವಣಿಗೆಯೊಂದರಲ್ಲಿ ಮಡಿಕೇರಿ ಎ.ಪಿ.ಎಂ.ಸಿ. ಅಧ್ಯಕ್ಷರಾಗಿ ಶ್ರೀ ಅರಂಬೂರು ವಸಂತ ಕುಮಾರ್ ಆಯ್ಕೆ.



ಮಡಿಕೇರಿಯಲ್ಲಿ ಜೂನ್ 17ರಂದು ನಡೆದ ಮಡಿಕೇರಿ ಎಪಿಎಂಸಿ ಅಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡುವುದರೊಂದಿಗೆ ನಾಟಕೀಯ ಬೆಳವಣಿಗೆಯಲ್ಲಿ ಬಿಜೆಪಿಯ ಸದಸ್ಯ ಅರಂಬೂರು ವಸಂತ್‌ಕುಮಾರ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರು. ಚುನಾವಣೆಯು ಏಕಪಕ್ಷೀಯ ಮತದಾನ ನಡೆದು 8-0 ಅಂತರದಲ್ಲಿ ಅಧ್ಯಕ್ಷರ ಆಯ್ಕೆ ನಡೆಯಿತು.

ಕೆಲ ದಿನಗಳ ಹಿಂದೆ ಎಪಿಎಂಸಿಯ ಅಧ್ಯಕ್ಷರಾಗಿದ್ದ ಜಯಂತಿ ಶೆಟ್ಟಿ ಅವರನ್ನು ಅವಿಶ್ವಾಸದ ಮೂಲಕ ಅಧಿಕಾರದಿಂದ ಕೆಳಗಿಳಿಸಿದ ಬಳಿಕ ಇತ್ತೀಚೆಗೆ ಅಧ್ಯಕ್ಷರ ಆಯ್ಕೆಗೆ ಚುನಾವಣೆ ಪ್ರಕಟಿಸಲಾಗಿತ್ತು.

ನಿಗದಿತ ಕಾಂಗ್ರೆಸ್ ಅಭ್ಯರ್ಥಿಯಾಗಿ ಜಯಂತಿ ಶೆಟ್ಟಿ ಅವರು ನಾಮಪತ್ರ ಸಲ್ಲಿಸಿದ್ದರು. ಉಳಿದಂತೆ ಜಾತ್ಯತೀತ ದಳದಿಂದ ತುಂತಜೆ ಗಣೇಶ್, ಬಿಜೆಪಿಯಿಂದ ಅರಂಬೂರು ವಸಂತ್‌ಕುಮಾರ್, ಚೇನಂಡ ಸುರೇಶ್‌ನಾಣಯ್ಯ ಹಾಗೂ ಶಂಭು ಮುತ್ತಪ್ಪ ನಾಮಪತ್ರ ಸಲ್ಲಿಸಿದ್ದರು. ಇವರಾರು ನಾಮಪತ್ರ ಹಿಂತೆಗೆದುಕೊಳ್ಳದ ಹಿನ್ನೆಲೆಯಲ್ಲಿ ಕಾನೂನಿನಂತೆ ಮತದಾನ ನಡೆಸುವದಾಗಿ ಚುನಾವಣಾಧಿಕಾರಿ ಹೆಗಡೆ ಪ್ರಕಟಿಸಿದ್ದರು. ಅಂತಿಮ ಕ್ಷಣದಲ್ಲಿ ಶಂಭು ಮುತ್ತಪ್ಪ ಅವರು ಕಣದಿಂದ ನಿವೃತ್ತಿಯಾದರು. ಮತದಾನ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಪದಚ್ಯುತ ಅಧ್ಯಕ್ಷೆ ಜಯಂತಿ ಶೆಟ್ಟಿ ಅವರು ಚುನಾವಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ, ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಸದಸ್ಯ ಸುಬ್ಬ ಅವರನ್ನು ಅಪಹರಿಸಲಾಗಿದೆ. ಈ ಕುರಿತು ಈ ಹಿಂದೆಯೇ ಅವರು ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಚುನಾವಣೆಯನ್ನು ಅಸಿಂಧು ಎಂದು ಘೋಷಿಸುವಂತೆ ಕೋರಿದರು. ಅಲ್ಲದೆ ತಾನು ಸೇರಿದಂತೆ ಇತರ ಸದಸ್ಯರುಗಳಾದ ನಾಟೋಳಂಡ ಪೊನ್ನಪ್ಪ, ಅಹ್ಮದ್‌ಭಾಷ, ಪಾಲೆ ಕೇಪು, ಪೂವಮ್ಮ, ಕಾವೇರಪ್ಪ, ಮಹಾಬಲೇಶ್ವರ ಭಟ್ ಅವರೊಂದಿಗೆ ಸಭಾತ್ಯಾಗ ಮಾಡಿದರು. ಆದರೆ, ಮತದಾನ ಪ್ರಕ್ರಿಯೆ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಚುನಾವಣೆಯನ್ನು ಅಸಿಂಧು ಎಂದು ಘೋಷಿಸಲಾಗುವುದಿಲ್ಲ ಎಂದು ಪ್ರತಿಕ್ರಿಯಿಸಿದ ಚುನಾವಣಾಧಿಕಾರಿ ಮತದಾನ ಪ್ರಕ್ರಿಯೆಯನ್ನು ಮುಂದುವರಿಸಿದರು. ಅಂತಿಮವಾಗಿ ಮತದಾನ ನಡೆದು, ಎಣಿಕೆ ಮಾಡಿದಾಗ ಅಭ್ಯರ್ಥಿ ಅರಂಬೂರು ವಸಂತ್ ಅವರು 8-0 ಮತಗಳಿಂದ ಜಯಗಳಿಸಿದರು. ಬಳಿಕ ಚುನಾವಣಾಧಿಕಾರಿ ಅರಂಬೂರು ವಸಂತ್ ಅವರು ಅಧ್ಯಕ್ಷರಾಗಿ ಜಯಗಳಿಸಿರುವದಾಗಿ ಘೋಷಿಸಿದರು. ಸದಸ್ಯರಾದ ಚೇನಂಡ ಸುರೇಶ್, ರವಿ ತಮ್ಮಯ್ಯ, ತುಂತಜೆ ಗಣೇಶ್, ಕೊಡಪಾಲು ಗಣಪತಿ, ಹರೀಶ್ ಪೂವಯ್ಯ, ಅಪ್ಪಚ್ಚನಾಯ್ಕ, ಶಂಭು ಮುತ್ತಪ್ಪ ಹಾಗೂ ಅರಂಬೂರು ವಸಂತ್ ಅವರುಗಳು ಮತದಾನ ಮಾಡಿದ್ದರು. ಒಟ್ಟು 16 ಮಂದಿ ಸದಸ್ಯರಲ್ಲಿ ಒಬ್ಬರಾದ ಸುಬ್ಬ ಗೈರು ಹಾಜರಾಗಿದ್ದರೆ, 7 ಮಂದಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದ್ದರು. ಉಳಿದ ಸದಸ್ಯರ ಮತಗಳನ್ನು ಅರಂಬೂರು ವಸಂತ್ ಅವರು ಪಡೆದರು.

ಸಭಾತ್ಯಾಗ ನಡೆಸಿದ ಜಯಂತಿ ಶೆಟ್ಟಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಸ್ಪಷ್ಟ ಬಹುಮತ ಹೊಂದಿದ್ದ ಕಾಂಗ್ರೆಸ್‌ನ ಓರ್ವ ಸದಸ್ಯರನ್ನು ಅಪಹರಿಸಲಾಗಿದೆ. ಹಲವು ಸಮಯದಿಂದ ಇದೇ ರೀತಿಯ ವರ್ತನೆ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಎಪಿಎಂಸಿ ಆಡಳಿತ ಮಂಡಳಿಯನ್ನು ವಜಾಮಾಡುವುದು ಸೂಕ್ತ ಎಂದು ಪ್ರತಿಕ್ರಿಯಿಸಿದರು. ಕಾರ್ಯದರ್ಶಿ ಶ್ರೀನಿವಾಸ್ ಅವರ ಸಮ್ಮುಖದಲ್ಲಿ ಪ್ರಭಾರ ಅಧ್ಯಕ್ಷ ರವಿ ತಮ್ಮಯ್ಯ ಅವರಿಂದ ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ಅರಂಬೂರು ವಸಂತ್ ಅವರು ಮಾತನಾಡಿ, ತನ್ನ ಆಯ್ಕೆಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಅರ್ಪಿಸಿದರು. ಅಲ್ಲದೆ, ಹಿಂದಿನ ಅಧ್ಯಕ್ಷರ ಅಧಿಕಾರಾವಧಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದ್ದು, ಎಲ್ಲ ಸದಸ್ಯರ ಸಹಕಾರದೊಂದಿಗೆ ಈ ದುರುಪಯೋಗವನ್ನು ಬಯಲಿಗೆಳೆಯಲಾಗುವದು. ಅಲ್ಲದೆ, ಉಳಿದ ಅವಧಿಯಲ್ಲಿ ಎಪಿಎಂಸಿಯ ಪ್ರಗತಿಗಾಗಿ ಹಾಗೂ ರೈತರ ಕಲ್ಯಾಣಕ್ಕಾಗಿ ಶ್ರಮಿಸುವುದಾಗಿ ಭರವಸೆ ಇತ್ತರು.

— ಸಂಗಾತಿ.

ಚುಟುಕ : ಅಭಾವ

ಸಹೋದರತೆ
ಮಾನವೀಯತೆ
ಪರಿಶುದ್ಧ ಭಾವನೆ
ಎಲ್ಲ ಕಡೆನೂ
ನಾವ್ ಇಂದ್ ಎದ್‌ರಿಸ್ತ್ತಿರುವ
ನಿಜವಾದ ಅಭಾವ

— ಯಾಲದಾಳು ಈ. ಚಂದ್ರಕಲಾ ಮಡಿಕೇರಿ

ಕೊಡಗು ಗೌಡ ಎಜುಕೇಷನಲ್ ಅಕಾಡೆಮಿ - ಬೆಂಗಳೂರು (ರಿ.)

ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲಿನ ಉದ್ಘಾಟನ ಸಮಾರಂಭ ದಿನಾಂಕ 9-6-2001 ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಅಧ್ಯಕ್ಷ ಗುಡ್ಡೆಮನೆ ಚಿನ್ನಯ್ಯನವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷೆ ವಾಸಂತಿ ವಸಂತ್‌ಕುಮಾರ್‌ರವರ ಸ್ವಾಗತ ಭಾಷಣದ ಕಿರು ವಿವರ ಓದುಗರ ತಿಳುವಳಿಕೆಗಾಗಿ ಪ್ರಕಟಿಸಲಾಗಿದೆ.

- ಸಂಪಾದಕಿ.

ಸನ್ಮಾನ್ಯರೇ,

ಈ ಸಂಜೆಯ ಸುಂದರ ಸಮಾರಂಭದಲ್ಲಿ ಅಧ್ಯಕ್ಷರಾಗಿರಬೇಕಾಗಿದ್ದ ಡಾ|| ಗುಡ್ಡೇರ ಚಿನ್ನಯ್ಯನವರು ವಿದೇಶ ಪ್ರವಾಸದಲ್ಲಿರುವ ಕಾರಣ ಈ ಗೌರವಯುತವಾದ ಜವಾಬ್ದಾರಿಯನ್ನು ಕಿರಿಯಳಾದ ನನಗೆ ಹೊರಿಸಿರುತ್ತಾರೆ. ಇಂತಹ ಹಿರಿಯ ಜವಾಬ್ದಾರಿಯನ್ನು ನನ್ನ ಮೇಲೆ ವಿಶ್ವಾಸವಿಟ್ಟು, ಹೊರಿಸಿರುವ ನನ್ನ ಸಮಾಜ ಬಂಧುಗಳಿಗೆ, ಈ ಸಂಸ್ಥೆಯ ಪದಾಧಿಕಾರಿಗಳಿಗೆ ಮೊಟ್ಟ ಮೊದಲು ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾ ನನ್ನ ಇಂದಿನ ಭಾಷಣವನ್ನು ಪ್ರಾರಂಭಿಸುತ್ತೇನೆ.

ನಾನು ನಿಮ್ಮೆಲ್ಲರನ್ನೂ ಸ್ವಾಗತಿಸುವುದಕ್ಕೆ ಮೊದಲು ನನ್ನ ಅಧ್ಯಕ್ಷಣೀಯ ಸ್ಥಾನಕ್ಕೆ ಪೂರಕವಾಗಿ 2 ಮಾತುಗಳನ್ನಾಡ ಬಯಸುತ್ತೇನೆ.

ಮೂರು ದಶಕಗಳ ಹಿಂದೆ ಕೊಡಗು ಗೌಡ ಸಮಾಜವು ಬೆರಳೆಣಿಕೆಯಷ್ಟು ಜನರಿಂದ ಸ್ಥಾಪನೆಗೊಂಡು ಇಂದು ಬೃಹದಾಕಾರವಾಗಿ ಬೆಳೆದಿದೆ. ಅಂದು 30 ಜನ ಬಲವಿದ್ದ ನಮ್ಮ ಸಮಾಜ ಇಂದು 500ಕ್ಕೂ ಹೆಚ್ಚು ಸದಸ್ಯತ್ವನ್ನು ಹೊಂದಿರುವುದರ ಜೊತೆಗೆ ತಮ್ಮದೇ ಆದ ಭವನವನ್ನು ಹೊಂದಿಕೊಂಡು ಈಗ ವಿದ್ಯಾಸಂಸ್ಥೆಯನ್ನು ಕಟ್ಟುವುದರ ಕಡೆಗೆ ಗಮನ ಹರಿಸಿದ್ದೇವೆ.

ಕೆಲವು ತಿಂಗಳುಗಳ ಹಿಂದೆ ಕೆಲವೇ ಜನರ ಕನಸಾಗಿದ್ದ ಈ ವಿದ್ಯಾಸಂಸ್ಥೆ ಇಂದು ನನಸಾಗುವ ಮೊದಲ ಹೆಜ್ಜೆಯನ್ನಿಟ್ಟಿದೆ. ಈ ದಿಸೆಯಲ್ಲಿ ಪ್ರಾರಂಭಿಸಿದ ಪ್ರತಿಕ್ರಿಯೆಯ ಒಂದು ಪ್ರಮುಖ ಬೆಳವಣಿಗೆಯಾಗಿ ಈ 'Cauvery Public Nataional School' ಒಂದು ಉತ್ತಮ ವಿದ್ಯಾಸಂಸ್ಥೆಯಾಗಿ ಹೊರ ಹೊಮ್ಮ ಬೇಕಾಗಿದೆ. ವ್ಯಕ್ತಿಯ ಸರ್ವತೋಮುಖ ಪ್ರಗತಿಗೆ ತನ್ನ ಶಿಕ್ಷಣ ಹಾಗೂ ಪರಿಸರ ತುಂಬಾ ಮಹತ್ವವಾದುದು.

"ವಿದ್ಯೆ ಇರುವವನ ಮುಖವು ಮುದ್ದು ಬರುವಂತಕ್ಕು, ವಿದ್ಯೆ ಇಲ್ಲದವನ ಮುಖವು ಹಾಳೂರ ಹತ್ತಿನಂತಕ್ಕು ಸರ್ವಜ್ಞ", ಈ ಹಿನ್ನೆಲೆಯಲ್ಲಿ ಕೈಗೊಳ್ಳುವ ಯಾವುದೇ ಶೈಕ್ಷಣಿಕ ಯೋಜನೆ, ತೀರ್ಮಾನ ಅಥವಾ ನಡೆಸುವ ಪ್ರಯತ್ನಗಳು ಸಾಮಾಜಿಕರೆಲ್ಲರ ಅಭ್ಯುದಯದ ಉದ್ದೇಶವಾಗಿದೆ ಎಂಬುವುದನ್ನು ಒತ್ತಿ ಹೇಳಬೇಕಾಗಿಲ್ಲ. ಸತತ ಪ್ರಾಮಾಣಿಕ ಪ್ರಯತ್ನ, ವ್ಯವಸ್ಥಿತ ನಿಯೋಜನೆ, ಹೊಸ ಆಶಯ ಮತ್ತು ಕಾಲ ಧರ್ಮಕ್ಕೆ ಹೊಂದಿಕೊಂಡ ವೈಜ್ಞಾನಿಕ ಕ್ರಮ ವ್ಯಕ್ತಿತ್ವ ವಿಕಸನಕ್ಕೆ ಸಾಕ್ಷಿ. ಶಿಕ್ಷಣ ಕ್ರಮ ವ್ಯಕ್ತಿತ್ವ ವಿಕಸನಕ್ಕೆ ಸಾಕ್ಷಿ

"Education is a possesion that none can steal Money can buy anything but not knowledge"

ಜ್ಞಾನ ಶಾಖೆಗಳಲ್ಲಿ ಒಂದಾದ ಶಿಕ್ಷಣ ಇಂದು ನಮ್ಮ, ನಿಮ್ಮೆಲ್ಲರ ಪ್ರಗತಿಗೆ ಅವಶ್ಯ. ಜ್ಞಾನ ಕ್ರಾಂತಿಯ ಬಹುಮುಖ ಸಿದ್ಧಿ ಸಾಫಲ್ಯ ಶಿಕ್ಷಣದಿಂದ ಮಾತ್ರವೇ ಎಂದರೆ ಅತಿಶಯೋಕ್ತಿಯಾಗಲಾರದು. ಜ್ಞಾನ ಸಂಪಾದನೆ ಸುಸಂಸ್ಕೃತ ಜೀವನದ ಸೋಪಾನ" ದಾನ ದಾನಗಳಲ್ಲಿ ವಿದ್ಯಾ ದಾನವೇ ಮೇಲು" ನೋವು ನಲಿವುಗಳನ್ನು ಇತರರೊಡನೆ ಹಂಚಿಕೊಂಡಾಗ ಮನಸ್ಸು ಹಗುರವಾಗುತ್ತದೆ. ಒತ್ತಡ ಕರಗುತ್ತದೆ. ಹಾಗೆ ವಿದ್ಯೆಯನ್ನು ಹಂಚಿಕೊಂಡಾಗ ಇಮ್ಮಡಿ, ಮುಮ್ಮಡಿ, ನೂರ್ಮಡಿಯಾಗಿ ನಮ್ಮ ಮನಸ್ಥೈರ್ಯವನ್ನು ಹೆಚ್ಚಿಸುತ್ತದೆ.

ಕೆಲವು ದಶಕಗಳ ಹಿಂದಿನವರೆಗೆ ಹಿರಿಯರು ನಡೆಸುತ್ತಿದ್ದ ವೃತ್ತಿಯನ್ನೇ ಬಹುತೇಕ ಕಿರಿಯರು ಮುಂದುವರೆಸಿಕೊಂಡು ಹೋಗುವ ಪದ್ಧತಿ ಇತ್ತು. ವಿದ್ಯಾಭ್ಯಾಸವೆಂದರೆ ಓದು, ಬರಹ ಮತ್ತು ಧಾರ್ಮಿಕ ಸಾಹಿತ್ಯಕ್ಕೆ ಸೀಮಿತವಾಗಿರುತ್ತಿತ್ತು. ಈಗ ತೀರಾ ಬದಲಾಗಿದೆ. ಶಾಲಾ ಕಾಲೇಜುಗಳು ಪದವಿ ಪಡೆಯುವ ಹಾಗೂ ಕೆಲಸ ಪೂರೈಸುವ ರಹದಾರಿ ಕೇಂದ್ರಗಳಾಗಿವೆ. ವಿದ್ಯೆ ವೃತ್ತಿಗಾಗಿ ಮತ್ತು ಹೊಟ್ಟೆ ಪಾಡಿಗಾಗಿ ಎಂಬಂತಾಗಿದೆ. ಹಾಗೂ ವಿದ್ಯೆ ನೀಡಿಕೆ ಲಾಭದಾಯಕ ಉದ್ಯಮವಾಗಿದೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹೇಳಿದ - "ಏಳಿ, ಎದ್ದೇಳಿ, ಎಚ್ಚರಗೊಳ್ಳಿ, ಗುರಿಮುಟ್ಟುವ ತನಕ ಮುನ್ನಡೆಯಿರಿ" ಉಕ್ತಿಯನ್ನು ಸ್ಮರಿಸಲೇಬೇಕು.

ನಮ್ಮ ಸಂಸ್ಕೃತಿಗೆ ಹಿರಿದಾದ ಅಂತಸತ್ವವಿದೆ. ಭವ್ಯ ಪರಂಪರೆಯಿದೆ. ಅನೇಕ ಶತಮಾನಗಳ ಅವಧಿಯಲ್ಲಿ ಸುಂದರವಾದುದನ್ನು, ಸತ್ಯವಾದುದನ್ನು ಮೈಗೂಡಿಸಿಕೊಂಡ ಈ ಸಂಸ್ಕೃತಿ ಇಂದು ಸೊಂಪಾಗಿ ಬೆಳೆದಿದೆ. ಹಳೆಯದನ್ನು ಮರೆಯದೇ, ಹೊಸದನ್ನು ಆಲಕ್ಷಿಸದೇ ಉತ್ತಮ ಅಂಶಗಳನ್ನು ತನ್ನದಾಗಿಸಿಕೊಂಡು ಕೊಡಗು ಗೌಡರ ಸಂಸ್ಕೃತಿ ವಿಶಿಷ್ಟ ಘನತೆಯನ್ನು ಔನ್ನತ್ಯವನ್ನು ಹೊಂದುತ್ತಾ ಬಂದಿದೆ. ನಮ್ಮ ಜನ ಬಾಳಿದ ಬಗೆ, ನಂಬಿದ ಮೌಲ್ಯಗಳು, ಅನುಸರಿಸಿದ ಆಚಾರ ವಿಚಾರ ನಮ್ಮ ಸಾಹಿತ್ಯ, ಕಲಾ ಪ್ರಕಾರಗಳಲ್ಲಿ, ಅಚ್ಚಳಿಯದೆ ಪ್ರತಿಬಿಂಬಿಸಿದೆ. ಅಂದು ಕಲೆ, ಸಾಹಿತ್ಯ, ಸಂಸ್ಕೃತಿ ವರ್ಧನೆಗೆ ರಾಜರು ಆಶ್ರಯ ನೀಡಿದ್ದರು ಇಂದು ಸಮಾಜ ಈ ಹೊಣೆಯನ್ನು ಹೊತ್ತಿದೆ.

ಶಾಲೆ ಅಂದ ಕೂಡಲೆ, ಅಲ್ಲಿಯ ಕಟ್ಟಡ, ಶಿಕ್ಷಕ ವೃಂದ, ಆಟದ ಮೈದಾನ ಮತ್ತು ಗ್ರಂಥಾಲಯದ ಚಿತ್ರ ನಮ್ಮ ಮನದಲ್ಲಿ ಮೂಡುತ್ತದೆ. ಮಕ್ಕಳಲ್ಲಿ ಆಟವಾಡುವ ಅಭ್ಯಾಸ ಬೆಳೆಯುವಷ್ಟು ಸಹಜವಾಗಿ ಪುಸ್ತಕ ಓದುವ ಹವ್ಯಾಸವು ಬೆಳೆಯಬೇಕು. ಶಾರೀರಿಕ ಶಿಕ್ಷಣವೂ ಅಷ್ಟೇ ಮುಖ್ಯ ಅವರವರ ಭವಿಷ್ಯಗಳನ್ನು ರೂಪಿಸುವುದು ಅವರವರೇ ಎನ್ನುವ ಮಾತು ನಿಜವೇ ಆದರೂ ವಿದ್ಯಾರ್ಥಿಯ ವ್ಯಕ್ತಿತ್ವದ ರಚನೆಯಲ್ಲಿ ಶಿಕ್ಷಕನೇ ಶಿಲ್ಪಿ.

ಯಶಸ್ಸು ಮತ್ತು ಸಂತೃಪ್ತಿ ನಮ್ಮ ಗುರಿಗಳಾಗಬೇಕು. ಯಾವ ಕೆಲಸ ಮಾಡಿದರೂ ಉತ್ಕೃಷ್ಟ ಗುಣ ಮಟ್ಟದಲ್ಲೇ ಮಾಡುವ ನಿರ್ಧಾರದೊಂದಿಗೆ ಶಿಸ್ತು. ಸಂಯಮಗಳಿಗೆ, ನೀತಿ ನಿಯಮಗಳಿಗೆ ಸದಾ ಬದ್ಧರಾಗಿ ಸಹನೆ, ತಾಳ್ಮೆ, ಸಂತೋಷ, ಅನ್ಯೋನ್ಯತೆ ಸಹಕಾರ ಆದರ್ಶಗಳನ್ನು ಉನ್ನತ ಜೀವನ ಮೌಲ್ಯಗಳೊಂದಿಗೆ ಅದ್ಭುತ ಕನಸುಗಳನ್ನು ಕಟ್ಟುತ್ತಾ ಹೋಗಿ, ಅಸಾಧ್ಯವಾದುದನ್ನು ಸಾಧ್ಯಮಾಡುತ್ತಾ, ಸಂಭ್ರಮ ಸಡಗರ ಸೌಹಾರ್ದತೆಯ ಪರಿಸರವನ್ನು ಸೃಷ್ಟಿಸಿ ಮುನ್ನಡೆಯಬೇಕು. "ಜಾಗೃತಿ ಮನಸ್ಸೇ ಜ್ಞಾನದ ಮೆಟ್ಟಿಲು, ಕಳೆದು ಹೋದ ನಿನ್ನೆಗಿಂತಲೂ, ಬಾರದಿರುವ ನಾಳೆಗಿಂತಲೂ ನಮ್ಮ ಕಣ್ಮುಂದಿರುವ ಇಂದು ಈ ದಿನ ಬಹಳ ಮಹತ್ವದ್ದು. ಧೈರ್ಯ ಕರ್ತವ್ಯ ಪ್ರಜ್ಞೆ ಇರುವವರೆಲ್ಲಾ ಯಶಸ್ಸಿನದಡ ಸೇರಿಯೇ ಸೇರುತ್ತಾರೆ. good ideas and innovations must be driven into existence by courage and patience.

ಉದಾ : 27 ವರ್ಷಗಳ ಕಾಲ ಸೆರೆಮನೆಯಲ್ಲಿದ್ದ ನೆಲ್ಸನ್ ಮಂಡೇಲಾ ಮಣಿಯದಿರುವ ಮನಸ್ಸು, ಸಾಧಿಸುವ ಛಲ, ಆತ್ಮ ವಿಶ್ವಾಸದಿಂದ ಒಂದು ಜನಾಂಗಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಉದಾಹರಣೆ ನಮ್ಮ ಕಣ್ಮುಂದಿದೆ.

ಪ್ರತಿಯೊಂದು ಮಗುವು ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅಲ್ಪಮಾನವ ನನ್ನಾಗಿ ಮಾಡುತ್ತೇವೆ. ಮತ್ತೆ ವಿಶ್ವ ಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗ ಬೇಕು. ಹುಟ್ಟುವಾಗಿನ ವಿಶ್ವಮಾನವನನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿಸಿ ಅವನನ್ನು ಬುದ್ಧನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆ.

ಪ್ರಪಂಚದ ಮಕ್ಕಳೆಲ್ಲ ಅನಿಕೇತನರಾಗಬೇಕು. ಲೋಕ ಉಳಿದು ಬಾಳಿ ಬದುಕಬೇಕಾದ ಈ ಎಳೇ ಯುವಶಕ್ತಿಗಳಿಗೆ ಉಚ್ಚ ಮಟ್ಟದ ಶಿಕ್ಷಣವು ಸಿಗುವಂತಾಗಲಿ ಎಂದು ಶುಭ ಕೋರುತ್ತೇನೆ.

ಹಾಗೂ ಇಂದಿನ ಶುಭ ಸಮಾರಂಭಕ್ಕೆ ಆಗಮಿಸಿರುವ ತಮ್ಮೆಲ್ಲರನ್ನೂ ಹಾರ್ಧಿಕವಾಗಿ ಬರಮಾಡಿಕೊಳ್ಳುವ ಸಾಂಪ್ರದಾಯಕವಾದ ಕೆಲಸ ನನ್ನ ಪಾಲಿಗೆ ಬಂದಿರುವುದು ನನ್ನ ಸೌಭಾಗ್ಯ ಹಾಗೂ ನನಗೆ ಹೆಮ್ಮೆ ಎನಿಸಿದೆ.

ಜೈ ಗೌಡ ಬಾಂಧವರೇ

— ವರದಿ : ಸಂಗಾತಿ

ವಿಶ್ವಕಪ್ ಹಾಕಿ : ಭಾರತ ತಂಡಕ್ಕೆ ಕೊಡಗಿನ ಅರ್ಜುನ್ ಹಾಲಪ್ಪ ಆಯ್ಕೆ



ಇದೇ ಜುಲೈ ತಿಂಗಳು ಲಂಡನ್‌ನಲ್ಲಿ ನಡೆಯ ಲಿರುವ ವಿಶ್ವಕಪ್ ಹಾಕಿ ಪಂದ್ಯಾಟದ ಭಾರತ ತಂಡಕ್ಕೆ ಕೊಡಗಿನ ಯುವ ಹಾಕಿ ಪಟು ಅರ್ಜುನ್ ಹಾಲಪ್ಪ ಆಯ್ಕೆ ಯಾಗಿದ್ದು, ಅಭ್ಯಾಸ ಪಂದ್ಯಗಳಿಗಾಗಿ ಅರ್ಜುನ್ ದೆಹಲಿ ಮೂಲಕ ಲಂಡನ್‌ಗೆ ತೆರಳಿದ್ದಾರೆ.

ಬಲ್ಜಿತ್‌ಸಿಂಗ್‌ದಿಲ್ಲಾನ್ ನಾಯಕತ್ವದಲ್ಲಿ ಆಡಲಿರುವ ಭಾರತ ಹಾಕಿ ತಂಡಕ್ಕೆ ಅರ್ಜುನ್ ಸೇರಿದಂತೆ 7 ಮಂದಿ ಯುವ ಹಾಗೂ ಉದಯೋನ್ಮುಖ ಆಟಗಾರರಿಗೆ ಅವಕಾಶ ನೀಡಲಾಗಿದೆ. ಈ ಪ್ರವಾಸ ಸಂದರ್ಭ ತಾ. 18 ರಂದು ವೇಲ್ಸ್, 19 ರಂದು ನ್ಯೂಜಿಲೆಂಡ್ ಹಾಗೂ 21 ರಂದು ಈಜಿಪ್ಟ್ ದೇಶಗಳ ತಂಡಗಳ ವಿರುದ್ಧ ಭಾರತ ಆಡಿದೆ. ಈ ಪ್ರತಿಷ್ಠಿತ ಪಂದ್ಯಾಟಕ್ಕೆ ಆಯ್ಕೆಯಾಗಿ ಆಡಿದ ಸೋಮವಾರಪೇಟೆಯ ಅರ್ಜುನ್ ಹಾಲಪ್ಪ ಅವರು ಹಾಕಿಪಟು ಬಿ.ಕೆ. ಹಾಲಪ್ಪ ಅವರ ಪುತ್ರ.

— ಸಂಗಾತಿ.

ನೀತಿಯ ಮಾತುಗಳು

ಗುರುಗಳನೆಂದು ಮರೆಯಲು ಬೇಡ
ಭಂಡರ ಸಂಗವ ಮಾಡಲು ಬೇಡ
ಸ್ನೇಹವನೆಂದೂ ಮರೆಯಲು ಬೇಡ.

ಮೂರ್ಖನ ಸಂಗಡವಾದಿಸಬೇಡ
ಮಾತಿಗೆ ತಪ್ಪಿ ನಡೆಯಲೂ ಬೇಡ
ಭಾಗವ ಮಾಡದೇ ತಿನ್ನಲೂ ಬೇಡ,

ರೋಗವನ್ನರಿಯದೇ ಔಷಧಿ ಬೇಡ
ರಾಗವನ್ನರಿಯದೇ ಹಾಡಲೂ ಬೇಡ
ವಂಚನೆ ಜೀವನ ನಿನಗದು ಬೇಡ

ಸುಳ್ಳನ್ನು ಹೇಳಿ ಜೀವಿಸಲೂ ಬೇಡ
ಹೆತ್ತಕರುಳನು ಮರೆಯಲು ಬೇಡ
ಜಗಳಕ್ಕೆ ನಿಂತಲ್ಲಿ ಹೆದರಲೂ ಬೇಡ

ಬಡವರನೆಂದೂ ಹೀಯ್ಯಾಳಿಸಬೇಡ
ಮನೆಯವರನೆಂದೂ ದ್ವೇಷಿಸಬೇಡ
ಹೇಳಿದ ಕೆಲಸವ ಮರೆಯಲು ಬೇಡ
ಧರ್ಮಕ್ಕೆ ತಪ್ಪಿ ಹೋಗಲೂ ಬೇಡ.

— ರಚನೆ : ಹುಲಿಮನೆ ಸಹದೇವ.ಕೇಶವಯ್ಯ, ಮದೆ ಗ್ರಾಮ.

ಕಾಗದ, ಬಟ್ಟೆ ಆಗಬಲ್ಲ ಬಾಳೆ

ನಿತ್ಯ ಜೀವನದಲ್ಲಿ ಬಾಳೆಹಣ್ಣಿನಷ್ಟು, ಹಾಸು ಹೊಕ್ಕಾಗಿ ಹೊಂದಿಕೊಂಡಿರುವ ಫಲ ಇನ್ನೊಂದಿಲ್ಲ. ಭಾರತದಲ್ಲಿ ಸುಮಾರು10ಲಕ್ಷ ಎಕರೆಗಳಲ್ಲಿ ಬಾಳೆ ಕೃಷಿ ಸಾಗುತ್ತಿದೆ. ವರ್ಷಕ್ಕೆ 50ಲಕ್ಷ ಟನ್ನುಗಳಷ್ಟು ಬಾಳೆಹಣ್ಣನ್ನು ಉತ್ಪಾದಿಸಲಾಗುತ್ತಿದೆ, ಬ್ರೆಜಿಲ್ ಬಿಟ್ಟರೆ ಭಾರತಕ್ಕೆ ಬಾಳೆ ಕೃಷ್ಪಿಯಲ್ಲಿ ಪ್ರಥಮ ಸ್ಥಾನ. ಇದು ಮುಸಾಸಿಯೇ (ಮುಸಾಸಿಯಕ್) ಎಂಬ ಸಸ್ಯ ವರ್ಗಕ್ಕೆ ಸೇರಿದ್ದು. ರಷ್ಯಾ, ಜಪಾನ್, ಕುವೈತ್, ಬಹರಿನ್ ಮುಂತಾದ ದೇಶಗಳಿಗೆ ಬಾಳೆಹಣ್ಣು ಭಾರತದಿಂದ ರಫ್ತಾಗುತ್ತದೆ. ಬಾಳೆಹಣ್ಣುಗಳಲ್ಲಿ ಅನೇಕ ಬಗೆಗಳಿವೆ. ನೇಂದ್ರ ಬಾಳೆ, ಮರಬಾಳೆ, ಕದಳಿಬಾಳೆ, ಆನೆಬಾಳೆ, ಮಂಗಬಾಳೆ, ಕಾಡುಬಾಳೆ, ರಸಬಾಳೆ, ಪಚ್ಚೆಬಾಳೆ, ಚಂದ್ರಬಾಳೆ ಎಂಬ ಏಳು ತಳಿಗಳಿವೆ. ಆನೆಬಾಳೆ, ಕಾಡುಬಾಳೆಗಳನ್ನು ಉತ್ತರ ಕರ್ನಾಟದಲ್ಲಿ ಬೇಯಿಸಿ ತಿನ್ನುವವರೇ ಹೆಚ್ಚು. ಬಜ್ಜಿಕಾಯಿ ಹುಳಿಗಾಗಿಯೂ ಅದರ ಬಳಕೆಯಿದೆ. ನೇಂದ್ರಬಾಳೆಕಾಯಿಯಿಂದ ತಯಾರಾಗುವ ಚಿಪ್ಸ್ ಕೈಗಾರಿಕೆ ಕೇರಳದಲ್ಲಿ ಜನಪ್ರಿಯ, ಅಲ್ಲಿ ಚಿಪ್ಸ್ ಕೈಗಾರಿಕೆಗಳು ಕೆಲವರಿಗೆ ಜೀವನೋಪಾಯ ಕಲ್ಪಿಸಿವೆ.

ಕೆಲ ಜಾತಿಯ ಬಾಳೆಕಾಯಿಗಳನ್ನು ಹೋಳು ಮಾಡಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಅವುಗಳಿಂದ ಹಿಟ್ಟನ್ನು ತಯಾರಿಸಲಾಗುತ್ತದೆ. ಈ ಹಿಟ್ಟಿಗೆ ಬನಾನಾ ಮೀಲ್ ಎನ್ನುತ್ತಾರೆ. ಉತ್ತಮ ಪೌಷ್ಠಿಕ ಗುಣಗಳುಳ್ಳ ಈ ಹಿಟ್ಟು ಸುಲಭವಾಗಿ ಜೀರ್ಣವಾಗುವ ಆಹಾರ. ಹಿಟ್ಟಿನಿಂದ ತಯಾರಾಗುವ ಗಂಜಿಯನ್ನು ತಮಿಳುನಾಡು, ಕೇರಳಗಳಲ್ಲಿ ವಿಶೇಷವಾಗಿ ಸೇವಿಸುತ್ತಾರೆ. ಮುಂಬಯಿಯಲ್ಲಿ ಈ ಹಿಟ್ಟನ್ನು ತಯಾರಿಸುವ ಬೃಹತ್ ಕೈಗಾರಿಕೆಗಳು ಇವೆ. ಮಲೆನಾಡು ಬಾಳೆದಿಂಡಿನ ಸಾರು, ಬಾಳೆಕಾಯಿ ಹಪ್ಪಳಕ್ಕೆ ಹೆಸರುವಾಸಿ. ಬಾಳೆ ಹೂವಿನ ಪಲ್ಯ ರುಚಿಕರ. ರೋಗ ನಿವಾರಕವೂ ಹೌದು.

ಮೈಸೂರಿನ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯ ತಜ್ಞರು ಈ ಕೆಳಕಂಡ ಪ್ರಮಾಣದಲ್ಲಿ ಪೌಷ್ಠಿಕಾಂಶಗಳು ಬಾಳೆ ದಿಂಡಿನಲ್ಲಿವೆ ಎಂದು ಹೇಳಿದ್ದಾರೆ. ನೀರು ಶೇ. 95.12, ಖನಿಜಗಳು ಶೇ. .04, ಆಮ್ಲ ಶೇ. 0.04, ಹಿಟ್ಟು (ಸ್ಟಾರ್ಚ್) ಶೇ. 0.95, ಸಕ್ಕರೆ ಶೇ. 0.27 ನಾರು ಶೇ. 0.68, ದಿಂಡಿನಲ್ಲಿ ಔಷಧೀಯ ಗುಣವಿದೆ.

ವಾಂತಿ, ರಕ್ತಬೇಧಿಗಳನ್ನು ಅದು ತಡೆಗಟ್ಟಬಲ್ಲದೆಂದು ಆಯುರ್ವೇದ ಹೇಳುತ್ತದೆ. ಬಾಳೆ ಎಲೆಯಿಂದ ತಯಾರಾಗುವ ದೊನ್ನೆಗಳಿಗೆ ವಿದೇಶಗಳಿಂದಲೂ ಅಪಾರ ಬೇಡಿಕೆಯಿದೆ.

ಪ್ರತಿ ಬಾಳೆಯ ಗಿಡದಿಂದ ಅರ್ಧ ಕಿಲೋ ಗ್ರಾಂ ಉದ್ದನೆಯ ನಾರುಗಳು ಹಾಗೂ ಅರ್ಧ ಕಿ. ಗ್ರಾ. ಚೂರು ನಾರುಗಳು ಲಭ್ಯವಿದೆ. ನಾರನ್ನು ಹಗ್ಗ, ಗೋಣಿಚೀಲಕ್ಕೆ, ಹುರಿ ಮೊದಲಾದುವುಗಳ ತಯಾರಿಕೆಗೆ ಬಳಸಲಾಗುವುದು. ಕಾಗದ ಕೈಗಾರಿಕೆಗಳಲ್ಲಿ ನಾರನ್ನು ಉಪಯೋಗಿಸಲಾಗುತ್ತದೆ. ಇಂಗ್ಲೆಂಡಿನಲ್ಲಿ ಬಾಳೆಯ ನಾರಿನಿಂದ ಕಾಗದವನ್ನು ಉತ್ಪಾದಿಸುವ ಕಾರ್ಖಾನೆಗಳಿವೆ.

ಭಾರತದಲ್ಲಿ ಇಂದು ಉಲ್ಬಣವಾಗುತ್ತಿರುವ ಕಾಗದದ ಅಭಾವವನ್ನು ನೀಗಿಸಲು ಪ್ರಯತ್ನ ನಡೆಸುವುದು ಅಗತ್ಯ. ತಜ್ಞರ ಅಭಿಪ್ರಾಯದಲ್ಲಿ ನಮ್ಮಲ್ಲಿ ವರ್ಷಕ್ಕೆ ಮೂರು ಟನ್ನಿನಷ್ಟು ನಾರನ್ನು ಕೊಡಬಲ್ಲ ಬಾಳೆಯ ಗಿಡಗಳು ವ್ಯರ್ಥವಾಗುತ್ತಿವೆ. ಇವುಗಳಿಂದ ಕಾಗದವನ್ನು ಉತ್ಪಾದಿಸಿದ್ದೇ ಆದರೆ ವರ್ಷಕ್ಕೆ ಒಂದು ಟನ್ನಿಗಿಂತಲೂ ಹೆಚ್ಚಿನ ಕಾಗದವನ್ನು ಪಡೆಯಬಹುದು.

ಗೊನೆಯನ್ನು ಕಿತ್ತು ಕೊಂಡ ನಂತರ ಉಳಿದ ಕಂಬವನ್ನು ಸೂಕ್ತ ರೀತಿಯಲ್ಲಿ ಸಾಗಿಸಿ ಸಂರಕ್ಷಿಸಿ ನಾರು ದಿಂಡು ಇತ್ಯಾದಿಗಳನ್ನು ದೊರಕಿಸಿಕೊಳ್ಳಬೇಕು. ಹಾಗೆಯೇ ಬಿಟ್ಟಲ್ಲಿ ಕಂಬ ನಿಷ್ಪ್ರಯೋಜಕವಾಗುವುದಲ್ಲದೇ ಕೊಳೆತು ಕ್ರಿಮಿ ಕೀಟ ಸೇರಿ ಅನಾರೋಗ್ಯಕ್ಕೆ ಕಾರಣವಾಗಬಹುದು. ಇಂದಿನ ದಿನಗಳಲ್ಲಿ ಸ್ಪಿನ್ನಿಂಗ್ ಸುಧಾರಿತ ವಿಧಾನಗಳಿಂದ ಬಾಳೆ ಕಂಬದಿಂದ ನಾರುಗಳನ್ನು ಸುಲಭವಾಗಿ ನೂಲಬಹುದು. ಜಪಾನಿನಲ್ಲಿ ಬನಾನಾಕ್ಲಾತ್ ಎಂಬ ನೇಯ್ಗೆಯ ವಸ್ತ್ರಗಳನ್ನು ತಯಾರಿಸುತ್ತಾರೆ. ಡಾ|| ಸಾಮಂಡ್ಸ್ ಎಂಬ ವಿಜ್ಞಾನಿ ಬಾಳೆಯ ಬೊಡ್ಡೆಗಳು ದನ, ಹಂದಿ, ಎಮ್ಮೆಗಳಿಗೆ ಉತ್ತಮ ಆಹಾರ ಎಂದಿದ್ದಾನೆ. ಬಾಳೆಯ ಬೇರಿಗೆ ಹಾಲನ್ನು ಸೇರಿಸಿ ಕುಡಿಯುವುದರಿಂದ ತಲೆ ತಿರುಗುವಿಕೆ, ಪಿತ್ತ ನಿವಾರಣೆಯಾಗುತ್ತದೆ. ಬಾಳೆ ಎಲೆಯನ್ನು ಊಟ ಮಾಡಲು ಬಳಸುತ್ತಾರೆ.

ಕೆಲವೆಡೆ ಹಣ್ಣುಗಳನ್ನು ಕತ್ತರಿಸಿ ಉಗಿಯಲ್ಲಿ ಬೇಯಿಸಿ ಮಾರುವುದೂ ಉಂಟು. ಬಾಳೆಯಹಣ್ಣಿನ ಸಿಪ್ಪೆ ದನಕರುಗಳಿಗೆ ಅಪ್ಯಾಯಮಾನವಾದ ತಿನಿಸು, ಸಿಪ್ಪೆಯಲ್ಲಿ ಶರ್ಕರ ವಸ್ತುಗಳಿರುವುದರಿಂದ ಆಲ್ಕೋಹಾಲನ್ನು ತಯಾರಿಸಬಹುದು. ಚೆನ್ನಾಗಿ ಮಾಗಿದ ಬಾಳೆಹಣ್ಣು ಎಳೆಯ ಮಕ್ಕಳಿಗೂ ಯೋಗ್ಯ ಆಹಾರ, ಅದರಲ್ಲಿ ಎ, ಬಿ, ಬಿ2 ಹಾಗೂ ಜೀವಸತ್ವಗಳು ಯೋಗ್ಯ ಪ್ರಮಾಣದಲ್ಲಿದ್ದು ಪಚನಕ್ರಿಯೆಗೆ ಉತ್ತಮವಾಗಿದೆ.

– ಕೆ. ಎನ್. ರಾಮು, ಮೈಸೂರು

ಶುಭ ವಿವಾಹ

ಮಡಿಕೇರಿ ನಿವಾಸಿ ಅಂಬೆಕಲ್ಲು ಕುಶಾಲಪ್ಪ ಮತ್ತು ಸುಶೀಲ ದಂಪತಿಗಳ ಮಗ ನವೀನ್(Shyam)ಗೂ ಮತ್ತು ಸುಳ್ಯ ತಾಲೂಕು ಪಂಜ ದೊಡ್ಡಿ ಪಿತ್ಲು ತಾರ ಹಾಗೂ ನಾರಾಯಣ ಗೌಡ ಇವರ ಪುತ್ರಿ ಪ್ರಿಯಾಳಿಗೂ ದಿನಾಂಕ12-7-2001 ರಲ್ಲಿ ಪಂಜ ಪರಿವಾರ ಪಂಚಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯಿತು. ಆ ಪ್ರಯುಕ್ತ ದಿನಾಂಕ 15-7-2001 ರಲ್ಲಿ ಮಡಿಕೇರಿ ಮೇಲಿನ ಕೊಡವ ಸಮಾಜದಲ್ಲಿ ಔತಣಕೂಟವನ್ನು ಏರ್ಪಡಿಸಲಾಗಿತ್ತು.

— ಸಂಗಾತಿ.

ಆಗ್ನೇಯದ ಜಾಗವನ್ನು ಸೇರಿಸಿಕೊಳ್ಳಬೇಡ - ಆಪತ್ತನ್ನು ಬಳಿಗೆ ಕರೆಯಬೇಡ.

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಬಾಚರಣೆಯಂಡ ಅಪ್ಪಣ್ಣ ಆಯ್ಕೆ.



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಗೆ ಸಾಹಿತಿ ಬಾಚರಣೆಯಂಡ ಅಪ್ಪಣ್ಣ ಅವರನ್ನು ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿದೆ.

ಪ್ರತ್ಯೇಕತಾ ವಾದಕ್ಕೆ ಬಹುತೇಕ ಎಲ್ಲಾ ಕೊಡವರು ಹೋರಾಟ ಮಾಡಿದ್ದರು. ಅದರಲ್ಲಿ ಅಪ್ಪಣ್ಣ ಕೂಡ ಸಕ್ರಿಯವಾಗಿ ಭಾಗಿಯಾಗಿ ಅಗ್ರ ಲೇಕನಗಳನ್ನು ಬರೆದಿದ್ದರೂ ಸಹಾ ಎಲ್ಲವನ್ನು ಗಮನಕ್ಕೆ ತೆಗೆದುಕೊಂಡೇ ಇಂಥಹ ಭರವಸೆ ಮೇಲೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಪತ್ರಿಕಾ ಗೋಷ್ಠಿಯಲ್ಲಿ ಸಚಿವೆ ರಾಣಿ ಸತೀಶ್ ಇತ್ತೀಚೆಗೆ ಸ್ಪಷ್ಟಪಡಿಸಿದ್ದಾರೆ.

ಅಪ್ಪಣ್ಣ ಒಬ್ಬ ಸಂಭಾವಿತ, ಮೇಧಾವಿ, ಎಲ್ಲದಕ್ಕಿಂತಲೂ ಉಪನ್ಯಾಸಕರಾಗಿ ಜನಮನ್ನಣೆ ಗಳಿಸಿದ್ದಾರೆ. ಅದನ್ನು ಗಮನಕ್ಕೆ ತೆಗೆದುಕೊಂಡು ಅಕಾಡೆಮಿಗೆ ನೇಮಕ ಮಾಡಲಾಯಿತು. ಅವರ ಧೋರಣೆ ಇದೀಗ ಸಂಪೂರ್ಣ ಬದಲಾಗಿದೆ. ಈಗ ಪ್ರತ್ಯೇಕತಾ ಕೂಗು ಸಹಾ ದೂರ ಉಳಿದಿದೆ. ಅದನ್ನು ಮರೆತಿರುವ ಸಂದರ್ಭದಲ್ಲಿ ಅನಾವಶ್ಯಕ ಗೊಂದಲಗಳಿಗೆ ಎಡೆಮಾಡಿಕೊಡುವ ಅಗತ್ಯ ಇಲ್ಲ ಎಂದು ಅವರು ಸ್ಪಷ್ಟೀಕರಿಸಿದ್ದಾರೆ.

ಅಕಾಡೆಮಿಯನ್ನು ರಚನೆ ಮಾಡುವ ಸಂದರ್ಭದಲ್ಲಿ ಸಮರ್ಥರನ್ನು ಆಯ್ಕೆ ಮಾಡುವ ಸಂಬಂಧ ತೀವ್ರ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಬಹುತೇಕ ಸಾಹಿತ್ಯ ಹಾಗೂ ಸಮಾಜ ಸೇವೆಯಲ್ಲಿ ತೊಡಗಿದ ಬಹುತೇಕ ಕೊಡವರು ಚಳುವಳಿಯಲ್ಲಿ ಭಾಗವಹಿಸಿದ್ದರು.

ಪರಿಸ್ಥಿತಿ ಹೀಗಿರುವಾಗ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಆಯ್ಕೆ ಮಾಡುವುದು ತೀರಾ ಕ್ಲಿಷ್ಟಕರ ವಾಗಿತ್ತು. ಪ್ರತ್ಯೇಕತಾ ಹೋರಾಟಕ್ಕೆ ಬೆಂಬಲ ನೀಡವುದಿಲ್ಲ ಎಂಬ ಭರವಸೆ ಮೇಲೆ ಇವರನ್ನು ನೇಮಕ ಮಾಡಲಾಗಿದೆ ಎಂದು ಸರ್ಕಾರದ ಉವಾಚ.

ವ್ಯಕ್ತಿ ಪರಿಚಯ :

ಕೊಡವ ಸಾಹಿತ್ಯ ಅಕಾಡೆಮಿಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಅಪ್ಪಣ್ಣ ಅವರು ೧೯೩೫ರ ಏಪ್ರಿಲ್ 12ರಂದು ಬಾಚರಣೆಯಂಡ ಪೊನ್ನಪ್ಪ ಅವರ ಪುತ್ರರಾಗಿ ಜನ್ಮವೆತ್ತಿದರು. ಕೊಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಪ್ರೌಢಶಿಕ್ಷಣ, ಧಾರವಾಡ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಮೂಲಕ ಎಂ. ಎ.ಬಿ.ಎಡ್ ಶಿಕ್ಷಣವನ್ನು ಪೂರೈಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಬೇಕೆಂಬ ಬಯಕೆಯನ್ನು ಹೊಂದಿದ್ದ ಅಪ್ಪಣ್ಣ ಅವರು ೧೯೫೩ರಿಂದ ೬೬ರ ವರೆಗೆ ಪ್ರಾಥಮಿಕ ಶಾಲೆಗಳಲ್ಲಿಯೂ, 1966ರಿಂದ ೭೦ರವರೆಗೆ ಪ್ರೌಢಶಾಲೆಗಳಲ್ಲಿಯೂ ಸೇವೆ ಸಲ್ಲಿಸಿದ್ದರು.

ಕೊಡಿಗೆಯ ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ೧೯೭೦ರಿಂದ ೮೪ರವರೆಗೆ ಮತ್ತು ೧೯೮೪ರಿಂದ ೯೩ರವರೆಗೆ ಸೋಮವಾರಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು.

ಸತತ ೪೦ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದ ಅಪ್ಪಣ್ಣ ಅವರು ನಿವೃತ್ತಿಯ ಬಳಿಕ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ದೃಷ್ಟಿಯನ್ನು ಹರಿಸಿ ಹಲವಾರು ಕೃತಿಗಳನ್ನು ರಚಿಸಿದ್ದರು.

ಈ ಪೈಕಿ ಕೊಡವ ಜನಪದ ಕಥೆಗಳು, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಅವರ ಜೀವನಗಾಥೆ, ಕನ್ನಡ ಮತ್ತು ಕೊಡವ ಭಾಷೆಗಳಲ್ಲಿ ಕಥೆಗಳು, ಕವನ, ಹಾಸ್ಯ ಲೇಖನಗಳು, ಚುಟುಕಗಳು, ಪ್ರಬಂಧಗಳನ್ನು ರಚಿಸಿ ತಮ್ಮದೆ ಆದ ಓದುಗ ಬಳಗವನ್ನು ಸೃಷ್ಟಿಸಿಕೊಂಡಿದ್ದಾರೆ.

ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಕೃತಿಗಳನ್ನು ಕೊಡವ ಭಾಷೆಗೆ ತರ್ಜುಮೆ ಮಾಡಿದ್ದು ಅಲ್ಲದೇ ಅಪ್ಪಣ್ಣ ತಾತ ಕಂಡ ಅಮೇರಿಕೆ ಎಂಬ ಪ್ರವಾಸ ಕಥನವನ್ನು ಧಾರಾವಾಹಿಯಾಗಿ ಹೊರ ತರುತ್ತಿದ್ದಾರೆ.

ಕೃತಿ ರಚನೆಯೊಟ್ಟಿಗೆ ಪ್ರವಾಸ, ಚರಣ, ಬಡಜನರ ಸೇವೆ, ಓದುವ ಹವ್ಯಾಸ ಬೆಳೆಸಿಕೊಂಡಿರುವ ಅಪ್ಪಣ್ಣ ಅವರು, "ದೇಶ ಸುತ್ತು ಕೋಶ ಓದು" ಎಂಬ ನಾಣ್ಣುಡಿಯಂತೆ ಅಮೇರಿಕ ಪ್ರವಾಸ ಮಾಡಿ ತಮ್ಮ ಜ್ಞಾನದ ಆಳವನ್ನು ವೃದ್ಧಿಸಿಕೊಂಡಿದ್ದಲ್ಲದೆ ಕುಶಾಲನಗರದಲ್ಲಿ ಸ್ಥಾಪಿಸಿರುವ ಕೊಡಗು ಅಧ್ಯಯನ ಕೇಂದ್ರಕ್ಕೆ ಪುಸ್ತಕ ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ

ಮಾದರಿ ಅಕಾಡೆಮಿ :

ಕರ್ನಾಟಕ ಕೊಡವ ಸಾಹಿತ್ಯ ಕಾಡೆಮಿಯನ್ನು ಇತರೆ ಅಕಾಡೆಮಿಗಳಿಗೆ ಮಾದರಿಯಾಗುವಂತೆ ರೂಪಿಸುವುದರೊಟ್ಟಿಗೆ ಕೊಡವ ಸಾಹಿತ್ಯ ಸಂಸ್ಕೃತಿಯನ್ನು ಉತ್ತುಂಗಕ್ಕೇರಿಸುವ ಹೆಬ್ಬಯಕೆಯನ್ನು ಹೊಂದಿರುವುದಾಗಿ ನೂತನ ಅಧ್ಯಕ್ಷ ಬಾಚರಣೆಯಂಡ ಪಿ. ಅಪ್ಪಣ್ಣ ಅವರು ತಮ್ಮ ಮನದಾಳದ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಅಕಾಡೆಮಿಗೆ ನೂತನ ಅಧ್ಯಕ್ಷರಾಗಿ ಆಯ್ಕೆ ಆಗಿ ತಮ್ಮ ಉದ್ದೇಶಿತ ಯೋಜನೆಗಳನ್ನು ಹಂಚಿಕೊಂಡ ಅವರು ಕೊಡವ ಸಾಹಿತ್ಯ ಅಕಾಡೆಮಿಯನ್ನು ಉತ್ತುಂಗಕ್ಕೇರಿಸುವ ನಿಟ್ಟಿನಲ್ಲಿ ಮಾಸಿಕ, ತ್ರೈಮಾಸಿಕ ಮತ್ತು ವಾರ್ಷಿಕವಾಗಿ ಸಾಹಿತ್ಯದ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ. ಅಲ್ಲದೆ ಇತರ ಅಕಾಡೆಮಿಗಳು ಹಮ್ಮಿಕೊಳ್ಳುತ್ತಿರುವ ಯೋಜನೆಗಳ ಕುರಿತು ಅಧ್ಯಯನ ಮಾಡುವ ಬಯಕೆ ತಮ್ಮದಾಗಿವೆ ಎಂದು ತಿಳಿಸಿರುತ್ತಾರೆ. ಉತ್ಕೃಷ್ಟವಾದ ಉದ್ದೇಶದಿಂದ ಸ್ಥಾಪಿತವಾಗಿರುವ ಅಕಾಡೆಮಿಗೆ ಕಾಯಕಲ್ಪ ಒದಗಿಸುವ ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟ, ಅಪ್ಪಣ್ಣ ಅವರು ಜನರ ಸಹಕಾರದಿಂದ ತನಗೆ ಒದಗಿಸಿರುವ ಸ್ಥಾನವನ್ನು ಶ್ರದ್ಧೆ ಮತ್ತು

ಸಂಘಟನಾತ್ಮಕವಾಗಿ ನಿರ್ವಹಿಸಲು ಬದ್ಧವಾಗಿರುವುದಾಗಿ ಭರವಸೆಯಿತ್ತಿದ್ದಾರೆ. ಕೊಡಗಿನ ಸಂಸ್ಕೃತಿ, ಸಾಹಿತ್ಯ ಮತ್ತು ಜನಪದೀಯ ಕಲೆಗಳಿಗೆ ಭದ್ರಬುನಾದಿ ಹಾಕುವ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿಯೂ ಅಪ್ಪಣ್ಣ ಅವರು ಆಶ್ವಾಸನೆ ನೀಡಿದ್ದಾರೆ.

ಎಲ್ಲರ ಮನೆಯಂಗಳಕ್ಕೆ ಕೊಂಡೊಯ್ಯುವೆ. :

'ಕೊಡವ ಭಾಷೆಯನ್ನು ಕೊಡಗು ಜಿಲ್ಲೆಯ ಪ್ರತೀ ಮನೆಯಲ್ಲಿ ಮಾತನಾಡುವಂತೆ ಮಾಡುತ್ತೇನೆ ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯೊಂದಿಗೆ ಕೊಡವ ಭಾಷೆಯ ಬೆಳವಣಿಗೆಗೆ ಹೆಚ್ಚಿನ ಆಧ್ಯತೆಯನ್ನು ನೀಡುತ್ತೇನೆ. ಕೊಡವ ಭಾಷೆ, ಸಾಹಿತ್ಯ ಕಲೆ ಹಾಗೂ ಸಂಸ್ಕೃತಿಗಳು ಕೊಡಗು ಜಿಲ್ಲೆಯಲ್ಲಿ ಪ್ರತಿಯೊಬ್ಬರ ಮನೆ-ಮನಗಳಲ್ಲಿ ನಲಿದಾಡುವಂತೆ ಮಾಡುತ್ತೇನೆ ಎಂದಿದ್ದಾರೆ.

ಕೊಡಗು ಪ್ರತ್ಯೇಕ ರಾಜ್ಯಕ್ಕೆ ಹೋರಾಟ ಮಾಡುತ್ತಿರುವವರಿಗೆ ನೀವು ಬೆಂಬಲ ನೀಡುತ್ತಿರುವ ಕುರಿತು ಪ್ರಕಟವಾಗಿರುವ ವರದಿ ಕುರಿತು ಪ್ರಶ್ನಿಸಿದಾಗ ಇಲ್ಲ... ಇಲ್ಲ... ಇದು ಕೆಲವರು ನನ್ನ ಮೇಲೆ ಗೂಬೆಕೂರಿಸಲು ಮಾಡಿದ ಯತ್ನವೆಂದು ಪ್ರತಿಕ್ರಿಯೆ ನೀಡಿದ್ದಾರೆ.

ಕೆಲವರು ತಮ್ಮ ಸ್ವಾರ್ಥ ಸಾಧನೆಗಾಗಿ ನನ್ನ ಮೇಲೆ ಪ್ರತ್ಯೇಕ ರಾಜ್ಯ ಪರವಾಗಿದ್ದೇನೆ ಎಂಬ ರೀತಿಯಲ್ಲಿ ಬಿಂಬಿಸಿದ್ದಾರೆ. ನಾನು ಈ ಕುರಿತು ಹೆಚ್ಚಿನ ಗಮನ ಹರಿಸುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟ ಪಡಿಸಿದ್ದಾರೆ.

ಕೊಡವ ಭಾಷೆಯ ಬೆಳವಣಿಗೆಯ ಉದ್ದೇಶದಿಂದ ಜಿಲ್ಲೆಯ ಜನತೆಯ ಸಹಕಾರದೊಂದಿಗೆ, ಸಲಹೆ ಸೂಚನೆಗಳೊಂದಿಗೆ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಅಪ್ಪಣ್ಣ ಮಾಸ್ಟರ್ ಎಂದೇ ಖ್ಯಾತಿವೆತ್ತಿರುವ ಅಪ್ಪಣ್ಣ ಅವರ ಸೇವೆ ಅಕಾಡೆಮಿಯ ಮೂಲಕ ಕೊಡವ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂದಾಯವಾಗಲಿ. ಅಲ್ಲದೆ ಕೊಡವ, ತುಳು ಕೊಂಕಣಿ, ಬ್ಯಾರಿ, ಅರೆಭಾಷೆ ಇತ್ಯಾದಿ ಭಾಷೆಗಳ ಸಂಯುಕ್ತ ಅಕಾಡೆಮಿ ರಚನೆಯಾಗುವುದಕ್ಕೆ ಸಹಮತವಿರುವುದು ಸಂತಸದ ಬೆಳವಣಿಗೆ. ಕೊಡಗು ಸಂಗಾತಿಯ ಲೇಖಕರಾಗಿ, ಸ್ನೇಹಿತರಾಗಿ, ಅರೆಭಾಷೆಯ ಬಗ್ಗೆ ಹೆಮ್ಮೆ ಪಡುವ, ಪೂರ್ಣ ಪ್ರಮಾಣದ ಅರೆಭಾಷೆಯ ಪತ್ರಿಕೆಗೆ ಒಲವುನೀಡಿರುವ, ಶ್ರೀ ಬಾಚರಣಿಯಂಡ ಅಪ್ಪಣ್ಣ ಅವರು ಭವಿಷ್ಯದಲ್ಲಿ ಯಶಸ್ಸನ್ನು ಕಾಣಲೆಂಬುದಾಗಿ ಸಂಗಾತಿಯು ಈ ಸಂದರ್ಭದಲ್ಲಿ ಶುಭ ಹಾರೈಸುತ್ತದೆ.

_ ಸಂಗಾತಿ.

ಹಿತ್ತಲ ಮದ್ದು

ಅಮೃತಬಳ್ಳಿ : ಇದರ ಸಸ್ಯಶಾಸ್ತ್ರೀಯ ಹೆಸರು Tinsispora Cordifolia. ಅಮೃತಬಳ್ಳಿಯ ಉಪಯೋಗಗಳು ಅನಂತ. ಗುಣದಲ್ಲಿ ಅಮೃತ ಸಮಾನ, ರುಚಿಯಲ್ಲಿ ಕಹಿ ಮತ್ತು ಒಗರು. ಬಳ್ಳಿಯ ಸೇವನೆ ಶರೀರಕ್ಕೆ ಬಲವನ್ನು ನೀಡುತ್ತದೆ. ಚರ್ಮದ ತೊಂದರೆಯನ್ನು ನಿವಾರಿಸುತ್ತದೆ. ಜ್ವರವನ್ನು ನೀಗಿ ರಕ್ತ ಹೀನತೆಯನ್ನು ಹೋಗಲಾಡಿಸುತ್ತದೆ. ಕಾಮಾಲೆಗೆ ಇದು ದಿವ್ಯೌಷಧವಾದರೆ ಮಧುಮೇಹ ರೋಗಿಗಳಿಗೆ ಹಿತಕರ.

2ರಿಂದ3 ತಿಂಗಳ ಕಾಲ ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ 2 ಚಮಚ ಕಾಂಡದ ರಸವನ್ನು 2ಚಮಚ ಜೇನುತುಪ್ಪದೊಡನೆ ಆಹಾರಕ್ಕೆ ಮುಂಚೆ ಸೇವಿಸುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

4 ಚಮಚ ರಸಕ್ಕೆ ಅಷ್ಟೇ ಪ್ರಮಾಣದಲ್ಲಿ ಜೇನುತುಪ್ಪ ಸೇರಿಸಿ ದಿನದಲ್ಲಿ 3ಬಾರಿ ಸೇವಿಸುವುದರಿಂದ ಶೀತ, ಜ್ವರ, ಕೆಮ್ಮು 2-3 ದಿನಗಳಲ್ಲಿ ಕಡಿಮೆಯಾಗುತ್ತದೆ. ಮಕ್ಕಳಿಗೆ ಕೊಡಬೇಕಾದಲ್ಲಿ ಇದರಲ್ಲಿ ಕಾಲು ಅರ್ಧ ಪ್ರಮಾಣ ಸಾಕಾಗುವುದು.

ಮಧುಮೇಹ ರೋಗಿಗಳು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ 1ಗೇಣು ಉದ್ದ ಅಮೃತಬಳ್ಳಿಯ ಕಾಂಡವನ್ನು ಚೆನ್ನಾಗಿ ಜಗಿದು ರಸವನ್ನು ಮಾತ್ರ ನುಂಗಬೇಕು. ಇದರಿಂದ ಸಕ್ಕರೆಯ ಅಂಶ ಇಳಿದು, ಕೈಕಾಲು ಉರಿ, ಸುಸ್ತು, ದೌರ್ಬಲ್ಯಗಳು ಕಡಿಮೆಯಾಗುತ್ತವೆ. ಇದರಿಂದ ಚರ್ಮರೋಗಗಳು ಸಹ ಕಣ್ಮರೆಯಾಗುತ್ತವೆ.

ಮೂಲವ್ಯಾಧಿ ಅಥವಾ ಮೊಳಕೆರೋಗದಲ್ಲಿ ಇದರ 3 ಚಮಚ ರಸಕ್ಕೆ 1 ಲೋಟ ಮಜ್ಜಿಗೆ ಸೇರಿಸಿ ದಿನದಲ್ಲಿ 2-3 ಬಾರಿಕುಡಿಯುವುದರಿಂದ ರಕ್ತಸ್ರಾವ ನಿಲ್ಲುತ್ತದೆ. ಮಲಬದ್ಧತೆ ನಿವಾರಣೆಯಾಗುತ್ತದೆ. ಕಾಮಾಲೆಗೆ ಈ ಬಳ್ಳಿಯ 4 ಚಮಚ ರಸಕ್ಕೆ 1ಚಮಚ ಜೇನುತುಪ್ಪ ಸೇರಿಸಿ, ಬೆಳಿಗ್ಗೆ ಆಹಾರಕ್ಕೆ ಮೊದಲು ಸೇವಿಸಬೇಕು. ಸಪ್ಪೆ ಹಾಗೂ ದ್ರವಾಹಾರವನ್ನು ಬಳಸಬೇಕು. ವಿಶ್ರಾಂತಿ ತೆಗೆದುಕೊಳ್ಳಬೇಕು. 5 ರಿಂದ 7 ದಿನಗಳಲ್ಲಿ ರೋಗ ಗುಣ ಮುಖವಾಗುವುದು. ಇದರ ಸೇವನೆಗೆ ಮೊದಲು ವೈದ್ಯರ ಸಲಹೆ ಪಡೆಯುವುದು ಅವಶ್ಯಕ.

ಸಂಗ್ರಹ : **ಹೊಸೂರು ತುಳಸಿಮಾಲ,** ಚೇರಂಗಾಲ.

ಶೃಂಗಾರ

ಬಾನಿಗೆ ನಕ್ಷತ್ರ ಶೃಂಗಾರ
ನೀರಿಗೆ ನೈದಿಲೆ ಶೃಂಗಾರ
ಕಡಲಿಗೆ ಅಲೆಯೇ ಶೃಂಗಾರ
ಅರಳಿದ ಹೂವಿಗೆ ದುಂಬಿಯೇ ಶೃಂಗಾರ
ಹೆಣ್ಣಿಗೆ ಶೀಲವೆ ಶೃಂಗಾರ
ಗೌಡರಿಗೆ ಸಂಗಾತಿಯೇ ಶೃಂಗಾರ

– **ತೋಟಂಬೈಲು ಕಾವೇರಮ್ಮ ಅಪ್ಪಚು,** ನರಿಯಂದಡ

ಬಿಟ್ಟಿ ಬಂದರೂ ನೈರುತ್ಯ ಜಾಗವನ್ನು ಸೇರಿಸಿಕೊಳ್ಳಬೇಡ - ಕಷ್ಟವನ್ನು ಪಡಬೇಡ.

ಸ್ತ್ರೀ ಶಕ್ತಿ

ಗೌಡ ದೇಶದ ಅಳಿವಿನೊಂದಿಗೆ ಇತಿಹಾಸದ ಗರ್ಭದಲ್ಲಿ ಸೇರಿ ಹೋಗಿರುವ ಗೌಡ ಸಂಸ್ಕೃತಿಯನ್ನು ಹೊರಗೆಳೆದು, " ಕೊಡಗು ಸಂಗಾತಿ" ಎಂಬ ವಿಜಯ ಪತಾಕೆಯು ಮೇರುಗಿರಿಯ ಮೇಲೆ ಹಾರುತ್ತಾ ಇಡೀ ಪ್ರಪಂಚಕ್ಕೇ ಸಾರಲು ಹೊರಟಿದೆ. ಮತ್ತೊಂದು ಕಡೆ ಈ ಶತಮಾನದ ಮೇರು ವ್ಯಕ್ತಿ ಕುರುಂಜಿ ವೆಂಕಟರಮಣ ಗೌಡರು ಅಜ್ಞಾನವೆಂಬ ಕಗ್ಗತ್ತಲೆಯನ್ನು ನೂಕಿ ಜ್ಞಾನ ಜ್ಯೋತಿಯನ್ನು ಬೆಳಗಿಸುವಲ್ಲಿ ಸಫಲತೆಯನ್ನು ಪಡೆದಿದ್ದಾರೆ. ಮಗದೊಂದು ಕಡೆ ಜನಾಂಗದ ಗಣ್ಯರೆಲ್ಲಾ ಸೇರಿ ಕೊಡಗು ಎಜ್ಯುಕೇಶನಲ್ ಅಕಾಡೆಮಿಯನ್ನು ಬೆಂಗಳೂರಿನಂತಹ ಮಹಾನಗರದಲ್ಲಿ ಸ್ಥಾಪಿಸಿ, ಕಾವೇರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ್ನು ಹುಟ್ಟುಹಾಕಿದೆ. ಇನ್ನೊಂದು ಕಡೆ ದೇಶಾದ್ಯಂತ ಹುಟ್ಟಿಕೊಂಡಿರುವ ಗೌಡ ಸಂಘ ಸಂಸ್ಥೆಗಳು ಗೌಡ ಸಂಸ್ಕೃತಿಯನ್ನು ಎತ್ತಿ ಹಿಡಿದಿರುವ ಪತಾಕೆಗೆ ಬೆಳಕು ಬೀರುವ ದೀವಟಿಗೆಗಳಂತಿವೆ. ಇದು ಗೌಡರ ಪರ್ವ (ಉತ್ಕರ್ಷ) ಕಾಲ ಎಂದರೆ ತಪ್ಪಾಗಲಾರದು.

"ಅಯಂ ನಿಜಃ ಪರೋವೇತಿ ಗಣನಾ ಲಘುಚೇತಸಾಮ್ ಉದಾರ ಚರಿತಾನಾಂ ತು ವಸುದೈವ ಕುಟುಂಬಕಂ" (ಇವನು ನಮ್ಮವ, ಇವನು ಬೇರೆಯವ ಎಂಬ ಸಣ್ಣ ಬುದ್ಧಿ ಸಣ್ಣ ಜನರದು ಉದಾರ ಮನಸ್ಸಿನವರಿಗೆ ಇಡೀ ವಿಶ್ವವದೇ ತಮ್ಮ ಕುಟುಂಬವು) ಇಂತಹ ಉತ್ತಮ ಅರ್ಥಗರ್ಭಿತವಾದ ನುಡಿಗಳು ನಮ್ಮ ವೇದೋಪನಿಷತ್ತಿನಲ್ಲಿ ಅಡಕವಾಗಿದೆ. " ಸತ್ಯಂ ವಧ, ಧರ್ಮಂ ಚರ" (ಸತ್ಯವನ್ನೇ ನುಡಿ, ಧರ್ಮವನ್ನಾಚರಿಸು) ತೈತೀರಿಯ ಉಪನಿಷತ್ತಿನಲ್ಲಿ ಬರುವ ಲೋಕ ಪ್ರಸಿದ್ಧವಾದ ಮಾತುಗಳಿವು. ಇಂತಹ ಉತ್ತಮ ಧರ್ಮವನ್ನು ಹೊಂದಿರುವ ಸನಾತನ ಧರ್ಮಕ್ಕೆ ಪಾಶ್ಚಾತ್ಯರೂ ಮಾರು ಹೋಗಿ ಸನಾತನ ಧರ್ಮದ ತತ್ವಗಳನ್ನರಿತು ಪಾವನರಾಗುತ್ತಿದ್ದಾರೆ. ಹೀಗಿರುವಾಗ ಈ ಸನಾತನ ಧರ್ಮ ಮೆರೆದ ನಾಡಿನಲ್ಲಿ ಜನಿಸಿದ ನಾವು ಎಷ್ಟು ವಿಶಾಲ ಮನೋಭಾವದವರಾಗಿರಬೇಡ.

ನಾನು ನನ್ನದು ಎಂಬುದು ಮಾನವ ಜನಾಂಗಕ್ಕೆ ಅಂಟಿದ ಅಂಟುಜಾಡ್ಯ, ಇದು ಎಷ್ಟರ ಮಟ್ಟಿಗೆ ಮನುಷ್ಯನನ್ನು ಅಂದರನ್ನಾಗಿ ಮಾಡಿದೆ ಎಂದರೆ, ಅಣ್ಣ, ತಮ್ಮ, ಕೊನೆಗೆ ತಂದೆ ತಾಯಿ ಎಂದೂ ಸಹ ನೋಡದೆ, ಅಂಗೈ ಅಗಲ ಜಾಗಕ್ಕಾಗಿ ದಾಯಾದಿಗಳಿರಲಿ, ಅಣ್ಣ ತಮ್ಮನನ್ನೂ ತಮ್ಮ ಅಣ್ಣನನ್ನೂ ಹೆಚ್ಚೇಕೆ ತಂದೆ ಮಗನನ್ನೂ ಮಗ ತಂದೆಯನ್ನೂ ಕೊಲೆ ಮಾಡುತ್ತಿದ್ದಾರೆ. ದಿನೇ ದಿನೇ ಮನುಷ್ಯನ ಆಯಸ್ಸು ಕಡಿಮೆಯಾಗಿ ಸರಾಸರಿ 60 ವರುಷಗಳಿಗೆ ಸೀಮಿತಗೊಳ್ಳುತ್ತಿದೆ. ಇಂತಹ ತನ್ನ ಅಲ್ಪಾಯುಷ್ಯದಲ್ಲಿ ಮನುಷ್ಯ ನೆಮ್ಮದಿ ಇಲ್ಲದೆ ತೊಳಲಾಡುತಿದ್ದಾನೆ. ತಾನು ಬಾಳಲಾರೆ ಇನ್ನೊಬ್ಬನನ್ನು ಬಾಳಿಸಲಾರೆನೆಂಬುವವರು ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಾರೆ. ಕೊಡಗಿನಲ್ಲಿಯೂ ಇಂತಹ ಬಡಬಾಗ್ನಿ ತನ್ನ ಕೆನ್ನಾಲಿಗೆಯನ್ನು ಚಾಚಿಕೊಂಡು ದಗದಗಿಸುತ್ತಿದೆ. ವಿಜ್ಞಾನ ವಿಕಸಿಸಿದಂತೆಲ್ಲಾ ಮಾನವನ ಮನಸ್ಸು ಸಂಕುಚಿತಗೊಳ್ಳುತ್ತಿದೆ. ಎಂದೋ ಬರೆದ ಪುರಾಣದ ಪುಟಗಳಲ್ಲಿನ ಕಲಿಯುಗದ ವರ್ಣನೆ ಇಂದು ಸಾಕಾರವಾಗಿ ನಿಂತಿದೆ.

"ಸದಯಂ ಹೃದಯಂ ಯಸ್ಯ ಭಾಷಿತಂ ಸತ್ಯ ಭೂಷಿತಂ ಕಾಯಃ ಪರಹಿತೇ ಯಸ್ಯ ಕಲಿಸ್ತಸ್ಯ. ಕರೋತಿ ಕಿಮ್"(ಯಾರ ಮನಸ್ಸು ಕರುಣೆಯಿಂದ ಕೂಡಿದೆಯೋ ಮಾತು ಸತ್ಯದಿಂದ ಶೃಂಗರಿಸಲ್ಪಟ್ಟಿದೆಯೋ ಶರೀರವು ಇನ್ನೊಬ್ಬರ ಉಪಕಾರಕ್ಕಾಗಿ ಇದೆಯೋ ಅವರನ್ನು ಕಲಿಪುರುಷನು ಸಹ ಏನು ತಾನೆ ಮಾಡಿಯಾನು?

ಇಂತಹ ಮನೋಭಾವನೆಯನ್ನು ಮೊದಲು ಸ್ತ್ರೀಯರು ಬೆಳೆಸಿಕೊಂಡು ತಮ್ಮ ಮಕ್ಕಳಲ್ಲಿ ಬೆಳೆಸಲು ಪ್ರಯತ್ನ ಪಟ್ಟರೆ ಭವಿಷ್ಯದಲ್ಲಿ ಫಲ ಕಾಣಬಹುದು. ಸ್ತ್ರೀ ಶಕ್ತಿ ಅಗಾಧವಾದದು ಮತ್ತು ಅಭಲವಾದದ್ದು, ಸ್ತ್ರೀ ಮನಸ್ಸು ಮಾಡಿದಳೆಂದರೆ, ಉತ್ತಮ ಜನಭರಿತ ರಾಜ್ಯವನ್ನು ಛಿದ್ರಮಾಡಿ ನಿರ್ಜನವನ್ನಾಗಿಯೂ, ನಿರ್ಜನ ಪ್ರದೇಶದಲ್ಲಿ ಉತ್ತಮ ರಾಜ್ಯವನ್ನೇ ಕಟ್ಟಿ, ಜನಭರಿತವಾಗಿಯೂ ಮಾಡಬಲ್ಲಳು.

ನನ್ನ ಆತ್ಮೀಯ ಸಂಗಾತಿ ಓದುಗರೇ, ಬಂಧುಗಳೇ, ಪರಿಸ್ಥಿತಿಯು ವಿನಾಶದ ಅಂಚಿಗೆ ಹೋಗುವ ಮೊದಲೇ ಎಚ್ಚೆತ್ತು ಕೊಳ್ಳಿರಿ, ಶಾಂತಿಯುತ, ಸ್ನೇಹಮಯ ವಾತಾವರಣವನ್ನು ಸೃಷ್ಟಿಸುವಲ್ಲಿ ನೀವು ಮುಂಚೂಣಿಯಲ್ಲಿ ನಿಲ್ಲಿ

– ಬಿಟ್ಟೀರ ಚೋಂದಮ್ಮ ಶಂಭು.

ನಗೆ ಹನಿ : ಅತ್ತೆ ಸೊಸೆ

ಅತ್ತೆ : ಲೇ ಪಾರ್ವತಿ, ಬಾಯಿ ಉಜ್ಜಿ 1 ಸೇರು ಅಕ್ಕಿ ಅನ್ನಕ್ಕೆ ಹಾಕು

ಸೊಸೆ : ಮಧ್ಯಾಹ್ನದ ಅನ್ನಕ್ಕೆ 1 ಸೇರು ಅಕ್ಕಿ ಹಾಕಿದಳು ತನ್ನ ಬಾಯಿಯನ್ನುಜ್ಜಿ.

ಅತ್ತೆ : ಸಂಜೆ ಅನ್ನದ ಪಾತ್ರೆ ನೋಡುತ್ತಾಳೆ ಅನ್ನಕ್ಕೆ ಅಕ್ಕಿ ಹಾಕಿ ಇಡಲಾಗಿದೆ, ನೋಡಿದ ಅತ್ತೆ ಸೊಸೆಯನ್ನು ಕರೆದು "ರಾಣಿ" ಅನ್ನಕ್ಕೆ ಅಕ್ಕಿ ಹಾಕಿಟ್ಟಿದ್ದಿಯಾ?

"ಹೌದತ್ತೆ ನೀವಲ್ಲವಾ ಅನ್ನಕ್ಕೆ ಅಕ್ಕಿ ಹಾಕು ಅಂತ ಹೇಳಿದ್ದು.

"ನಿನ್ನ ತಲೆ, ಅನ್ನ ಮಾಡಲು ಪಾತ್ರಕ್ಕೆ ಅಕ್ಕಿ ಅಳೆದು ಹಾಕು ಎಂದರೆ ತಿಳಿಯದ ಹುಡುಗಿ" ಯಾಕೆ ಇವಳು Collegeಗೆ ಹೋದ್ದು? ಎಂದು ಅತ್ತೆ ಗೊಣಗಿಕೊಂಡಳು. ಹೇಗಿದೆ College ಹೋದ ಹುಡಗಿಯರ ಅಡಿಗೆ ಕೆಲಸ?

– ಕೊಟ್ಟಕೇರಿಯನ, ಆರ್ ಲೀಲಾವತಿ, ಬಲಮುರಿ

ಪಶ್ಚಿಮದ ಜಾಗವನ್ನು ಸೇರಿಸಿಕೊಳ್ಳುವುದು - ಉತ್ತಮಾರೋಗ್ಯಕ್ಕೆ ಕೊಚ್ಚು ಹತ್ತಿಸಿಕೊಳ್ಳುವುದು.

ಭಾರತ ಕ್ರಿಕೇಟಿನ ಧ್ರುವತಾರೆ - ಸಚಿನ್ ತೆಂಡೂಲ್ಕರ್

" ಹುಟ್ಟಿದರೆ ಇಂತಹ ಮಗ ಹುಟ್ಟಬೇಕು, ಇದ್ದರೆ ದೇಶಕ್ಕೆ ಇಂತಹ ಕ್ರಿಕೇಟಿಗ ಇರಬೇಕು" ಎಂದು ಕ್ರಿಕೇಟ್ ಪ್ರೇಮಿಗಳು ಆಗ್ಗಿಂದಾಗ್ಗೆ ನುಡಿಯುವ ಕ್ರಿಕೇಟಿಗನೆಂದರೆ ಸಚಿನ್ ರಮೇಶ ತೆಂಡೂಲ್ಕರ್ ಈತ ಬಹುಶಃ ಪ್ರಪಂಚ ಕಂಡ ಅತ್ಯಂತ ಶ್ರೇಷ್ಠ ಕ್ರಿಕೇಟಿಗ ಎಂಬುದು ನಿರ್ವಿವಾದ. ಇತ್ತೀಚೆಗೆ ತಾನೆ ಭಾರತದಲ್ಲಿ ಪ್ರವಾಸ ಮಾಡಿ ಹಿಂದಿರುಗಿದ ಆಸ್ಟ್ರೇಲಿಯಾ ತಂಡದ ಯಶಸ್ವಿ ದಾಂಡಿಗ ಮ್ಯಾಥ್ಯು ಹೇಡನ್ ಪ್ರಕಾರ ಸಚಿನ್ ಭಾರತೀಯರಿಗೆ ಆರಾಧ್ಯ ದೈವವಿದ್ದಂತೆ, ಇಂದು ಹಾಕಿ ಭಾರತದ ರಾಷ್ಟ್ರೀಯ ಆಟವಾದರೂ ಕ್ರಿಕೇಟ್ ಅನಧಿಕೃತ ರಾಷ್ಟ್ರೀಯ ಆಟ. ಈ ಕ್ರಿಕೆಟ್ ಸಾಮ್ರಾಜ್ಯ ಸಚಿನ್ ಅನಭಿಶಕ್ತ ದೊರೆ. ಈಗ ಭಾರತೀಯರಿಗೆ ಕ್ರಿಕೇಟ್ ಒಂದು ಧರ್ಮವಿದ್ದಂತೆ.

ಯಾವುದೇ ಒಂದು ಕ್ರಿಕೇಟ್ ಟೆಸ್ಟ್ ಮತ್ತು ಒಂದು ದಿನದ ಕ್ರಿಕೇಟ್ ಪಂದ್ಯಗಳು ಪ್ರಾರಂಭವಾಯಿತೆಂದರೆ, ಸಚಿನ್ ಕಣದಲ್ಲಿ ಇರುವವರೆಗೆ ಮಾತ್ರ ಜನರು ದೂರದರ್ಶಕವನ್ನು ವೀಕ್ಷಿಸುವ ಪರಿಪಾಠ ಭಾರತದಲ್ಲಿ ಬೆಳೆದು ಬಂದಿದೆ. ಇದರ ಅರ್ಥ ಏನೆಂದರೆ ಸಚಿನ್ ಅಂಕಣದಲ್ಲಿ ಇರುವನೋ ಅಲ್ಲಿಯವರೆಗೆ ಭಾರತ ಗೆಲ್ಲುವ ಸಾಧ್ಯತೆಗಳು ಇದೆ ಎಂದು, ಸಚಿನ್‌ನದು ಒಂದು ತರಹದ 'ಒನ್ ಮ್ಯಾನ್ ಆರ್ಮಿ. ವಿಶ್ವ ಕ್ರಿಕೆಟ್ ರಂಗದಲ್ಲಿ ಮನೆಮಾತಾಗಿರುವ ಸಚಿನ್‌ನನ್ನು ಕಂಡರೆ ಪ್ರತಿಯೊಬ್ಬ ಭಾರತೀಯನಿಗೆ ಎಲ್ಲಿಲ್ಲದ ಪ್ರೀತಿ, ವಿಶ್ವಾಸ, ಗೌರವ, ಆಧರ, ಭಾರಿ ಬರವಸೆ, ಈ ಕ್ರಿಕೆಟ್ ಪ್ರೇಮಿಗಳ ಭರವಸೆಯನ್ನು ಈ ಲಿಟ್ಲ್ ಮಾಸ್ಟರ್, ದಾಂಡಿಗ ಎಂದೂ ಹುಸಿ ಮಾಡಿಸಿಲ್ಲ. ಯಾವುದೇ ಬೌಲರ್‌ಗೆ ಸಿಂಹಸ್ವಪ್ಪನಾಗಿರುವ ಸಚಿನ್‌ಗೆ ದೇಶಕ್ಕಾಗಿ ಆಡುವುದೆಂದರೆ, ದೇಶವನ್ನು ಗೆಲ್ಲುವ ನಡೆಗೆ ಕೊಂಡೊಯ್ಯುವುದೆಂದರೆ ಒಂದು ಪವಿತ್ರವಾದ ಕೆಲಸವೆಂದು ಭಾವಿಸುವವರ ಅಪ್ಪಟ ದೇಶಪ್ರೇಮಿ! ಈ ವಿಷಯದಲ್ಲಿ ಆತ ಯಾವುದೇ ಸಂಧಿಗೆ ಒಳಗಾಗಿಲ್ಲ. ಹಾಗೂ ಆತನ ಪ್ರಾಮಾಣಿಕತೆ ನಿರ್ವಿವಾದ.

ಈಗ ಪ್ರಪಂಚದಲ್ಲಿಯೇ ಶ್ರೇಷ್ಠ ದಾಂಡಿಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸಚಿನ್ ದಶಕಹಿಂದೆ ಪಾಕಿಸ್ತಾನ ವಿರುದ್ಧ ಕರಾಚಿಯಲ್ಲಿ ತಮ್ಮ ಅಂತರರಾಷ್ಟ್ರೀಯ ಕ್ರಿಕೇಟ್ ಜೀವನವನ್ನು ಪ್ರಾರಂಭಿಸಿದಾಗ ಮೊದಲ ಪಾಳಿಯಲ್ಲಿ ಗಳಿಸಿದ ಓಟಗಳ ಸಂಖ್ಯೆ ಎಷ್ಟು, ಗೊತ್ತೆ? ಕೆವಲ 5 ! ಈ ಹದಿಹರೆಯದ 16 ವರ್ಷದ ಎಳಸು ಹುಡುಗ ಏನು ಆಡ್ಯಾನು ಎಂದು ಹಲವರು ಅಂದುಕೊಂಡಿರಬೇಕು. ಏಕೆಂದರೆ ಆಗ ಅವನು ಭಾರತದ ಟೆಸ್ಟ್ ಕ್ರಿಕೇಟ್ ಇತಿಹಾಸದಲ್ಲಿ ಆಡಿದ ಅತ್ಯಂತ ಕಿರಿಯ ಆಟಗಾರ ಮೊದಲ ಟೆಸ್ಟ್‌ನಲ್ಲಿ ಅಪಯಶಗಳಿಸಿದ ಸಚಿನ್ ಎಲ್ಲರನ್ನೂ ಬೆರಗುಗೊಳಿಸುವಂತೆ ಎರಡನೇ ಟೆಸ್ಟ್‌ನಲ್ಲಿ 59 ಉತ್ತಮ ಓಟಗಳನ್ನು ಸೇರಿಸಿ ಆಡಿದ, ಅಂದಿನಿಂದ ಇಲ್ಲಿಯವರೆಗೆ ಹಿಂದಿರುಗಿ ನೋಡಲಿಲ್ಲ.

ಆರನೇ ಕ್ರಮಾಂಕದಿಂದ ಮೂರನೇ ಕ್ರಮಾಂಕಕ್ಕೆ ಇಳಿದ ಸಚಿನ್ ಒಂದು ದಿನದ ಪಂದ್ಯಗಳಲ್ಲಿಯೂ ಸೈಯೆನಿಸಿ, ಆರಂಭಿಕ ಆಟಗಾರನಾಗಿ ಪರಿವರ್ತನೆಗೊಂಡು ಕ್ರಿಕೇಟ್ ಸಾರ್ವಭೌಮನೆಂದೆನಿಸಿದ್ದಾನೆ. ಈ ಒಂದು ದಿನಗಳ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಇದುವರೆಗೆಗಳಿಸಿದ ಒಟ್ಟು ಓಟಗಳು 10,000 ಕ್ಕೂ ಹೆಚ್ಚು! ಹಾಗೇ 10,000 ಓಟಗಳನ್ನು ಗಡಿದಾಟಿದ ಮೊದಲ ದಾಂಡಿಗ! ಓಟಗಳ ಸುರಿಮಳೆ ಜೊತೆಗೆ ಶತಕದ ಸುರಿಮಳೆಯೂ ಕೂಡ, 28 ಶತಕದೊಂದಿಗೆ (ಆಸ್ಟ್ರೇಲಿಯಾ ಪ್ರವಾಸದವರೆಗೆ) ಸಚಿನ್ ಅತಿ ಹೆಚ್ಚು ಶತಕಗಳು ಹೊಡೆದಿರುವ ವಿವರ.

ದಾಖಲೆಗಳೆಂದರೆ ಈತನಿಗೆ ಹೊಸದೇನಲ್ಲ. ತನ್ನ ಶಾಲೆಯ ದಿನಗಳಿಂದ ಇದುವರೆಗೆ ಅನಿರ್ಬಂಧಿತವಾಗಿ ಒಂದಲ್ಲ ಒಂದು ದಾಖಲೆಯನ್ನು ಮಾಡುತ್ತಲೇ ಇದ್ದಾನೆ. ತನ್ನ ಶಾಲೆಯ ಸಹಪಾಠಿ ಮತ್ತು ಮೆಚ್ಚಿನ ಸ್ನೇಹಿತ ವಿನೋದ ಕಾಂಬ್ಳೆಯ ಜೊತೆಗೆ ಕಿರಿಯರ ಶಾಲೆ ವಿಭಾಗದಲ್ಲಿ ದಾಖಲೆಯ ಜೊತೆ ಆಟವನ್ನು ಇದುವರೆಗೆ ಮುರಿದವರಿಲ್ಲ. ಸಚಿನ್ ರಣಜಿ ಇರಾನಿ ಹಾಗೂ ದುಲೀಪ್ ಟ್ರೋಫಿಗಳಲ್ಲಿ ಮೊದಲ ಪಂದ್ಯಗಳಲ್ಲಿ ಶತಕಗಳನ್ನು ಹೊಡೆದ ಭಾರತದ ಮೊಟ್ಟ ಮೊದಲಿಗ. ಈ ವರೆಗೆ ಈ ದಾಖಲೆಗಳನ್ನು ಸರಿಗಟ್ಟಿದವರಿಲ್ಲ. ಒಂದು ದಿನಗಳ ಪಂದ್ಯಗಳಲ್ಲಿ ಮೇಲೆ ಹೇಳಿದಂತೆ 10,000 ಓಟಗಳು ಈ ಪಂದ್ಯಗಳಲ್ಲಿ 38 ಭಾರಿ ಪಂದ್ಯ ಪುರುಷೋತ್ತಮ ಪ್ರಶಸ್ತಿಯನ್ನು ಪಡೆದು ದಾಖಲೆಯನ್ನು ಬಹುಶಃ ಮುಂದಿನ ಒಂದು ದಶಕಗಳಲ್ಲಿ ಸರಿಗಟ್ಟುವ ವೀರ ಕಾಣುತ್ತಿಲ್ಲ! ಇದರ ಜೊತೆಗೆ ಟೆಸ್ಟ್ ಪಂದ್ಯಗಳಲ್ಲಿ 25 ಶತಕಗಳು ಹಾಗೂ 8 ಬಾರಿ ಪಂದ್ಯ ಪುರುಷೋತ್ತಮ, ಬ್ಯಾಟಿಂಗ್‌ನಲ್ಲಿ ತನ್ನ ಕೌಶಲ್ಯವನ್ನು ಮಾತ್ರ ಮೆರೆಯದೆ ಬೌಲಿಂಗ್‌ನಲ್ಲಿ ತನ್ನ ಕೈ ಚಳಕವನ್ನು ತೋರಿಸಿರುವ ಸಚಿನ್ ಇದುವರೆಗೆ 100 ಕ್ಕಿಂತಲೂ ವಿಕೆಟ್‌ಗಳನ್ನು ಉರುಳಿಸಿದ್ದಾರೆ. ದೂರದರ್ಶನ ಮೂರನೇ ಬಲಿಯಾದ ಮೊದಲ ಆಟಗಾರ ಸಚಿನ್ ಎಂದು ಅನೇಕ ಜನರಿಗೆ ಗೊತ್ತಿಲ್ಲ!

Master blaster ಎಂದೇ ಪ್ರಖ್ಯಾತಿಯಾಗಿರುವ ಸಚಿನ್ ಯಾವುದೇ ಬೌಲರ್‌ಗಳನ್ನು ಚಚ್ಚಿ ರನ್ನುಗಳನ್ನು ಕೊಳ್ಳೆ ಹೊಡೆಯುವ ಶಕ್ತಿ ಸಾಮರ್ಥ್ಯ ಪಡೆದುಕೊಂಡಿರುವುದು ಒಂದು ವಿಶೇಷ. ಮ್ಯಾಗಾರ್ದ ಆಗಿರಲ್ಲಿ, ಶೆನವಾನ್ ಆಗಿರಲಿ, ಒಲೋಂಗೂ ಆಗಿರಲಿ, ವೇಗ ಮತ್ತು ಸ್ಪೀನ್ ದಾಳಿಯನ್ನು ಸರಿಸಮಾನವಾಗಿ ಎದುರಿಸಬಲ್ಲ ಗುಣವನ್ನು ಸಚಿನ್ ಮೈಗೂಡಿಸಿಕೊಂಡಿದ್ದಾನೆ. ಯಾವುದೇ ಬಾಲರ್‌ನ್ನು ಮೆಟ್ಟಿ ನಿಲ್ಲುವ ಪ್ರವರ್ತಿ ಅವನದು! ಇತ್ತೀಚೆಗೆ ಒಂದು ಸಂದರ್ಶನದಲ್ಲಿ ಈ ಪ್ರವೃತ್ತಿಯನ್ನು ತನ್ನ ಒಂದು ನ್ಯೂನ್ಯತೆ ಎಂದೇ ಹೇಳಿಕೊಂಡಿದ್ದಾನೆ.! ಈತನ ತಾಂತ್ರಿಕವಾಗಿ ಬಹಳ ಶ್ರೇಷ್ಟವಾದ ಬ್ಯಾಟವ್ಯಾನ್. ಇವನ ಮನೋಭಾವನೆ ಮತ್ತು ಮನೋಧರ್ಮದಲ್ಲಿಯೂ ಕೂಡ ಸರಿಸಮಾನತೆಯನ್ನು ಕಾಪಾಡಿಕೊಂಡಿದೆ.

ಸಚಿನ್ ಒಬ್ಬ ಮಧ್ಯಮ ಕುಟುಂಬರಿಂದ ಬಂದ ವ್ಯಕ್ತಿ. ಈತ ಶತಕಗಳ ವೀರ ಹಾಗೂ ರನ್ ಮಿಷನ್ ಎಂದೇ ಮಾತ್ರ

ಉತ್ತರದ ಜಾಗವನ್ನು ಸೇರಿಸಿಕೊ - ಉತ್ತಮ ಫಲವನ್ನು ತಂದುಕೊ.

ಖ್ಯಾತಿಯಾಗಿಲ್ಲ. ಈತನ ನಡವಳಿಕೆಗೆ ಕ್ರಿಕೇಟಿನ ಒಳಗೆ ಮತ್ತು ಹೊರಗೆ ಅನುಕರಣೆಯು ಈತನಲ್ಲಿ ಹುಂಬತನವಾಗಲಿ' ಅಹಂ ಆಗಲಿ ಎಳ್ಳಷ್ಟು ಕಾಣುವುದಿಲ್ಲ. ಹಣ, ಖ್ಯಾತಿ ಶ್ರೀಮಂತಿಕೆ ಎಲ್ಲಾ ಇದ್ದರೂ ಒಬ್ಬ ಸೌಮ್ಯಮೂರ್ತಿ, ಸಜ್ಜನಿಕೆ, ಪ್ರೀತಿ, ವಿಶ್ವಾಸ ಹಾಗೂ ಹೃದಯ ಶ್ರೀಮಂತಿಗೆಯ ಸಂಗಮ ದೇವರ ಮೇಲೆ ಈತನಿಗೆ ಅಪಾರಭಕ್ತಿ ಅರ್ಧಶತಕವನ್ನು ಅಥವಾ ಶತಕಗಳನ್ನು ಹೊಡೆದಾಗ ದೇವರಿಗೆ ವಂದಿಸಲು ಈತ ಎಂದೂ ಮರೆತಿಲ್ಲ. ಇತ್ತೀಚೆಗೆ ತಾನೇ ತನ್ನ ಕುಟುಂಬದೊಂದಿಗೆ ತಿರುಪತಿ ತಿಮ್ಮಪ್ಪನ ದರ್ಶನ ಮಾಡಿ ಹೋದ ಮೇಲೆ ಎಲ್ಲವೂ ದೈವ ಕೃಪೆ, ದೈವ ಇಚ್ಛೆ ಎಂದು ಹೇಳಿ ಸುಮ್ಮನಾಗುವ ಸರಳ ವ್ಯಕ್ತಿತ್ವವ ತುಂಬಿದ ಕೊಡ.

ಹಣ ಜೀವನದಲ್ಲಿ ಒಂದು ಭಾಗ ಮಾತ್ರ ಎನ್ನುವ ಈತ ಎಂ. ಆರ್. ಎಫ್ ಕಂಪನಿಯಿಂದ ತಾನು ಪಂದ್ಯಗಳಲ್ಲಿ ಉಪಯೋಗಿಸುವ ಬ್ಯಾಟಿನ ಮೇಲೆ ಆ ಹೆಸರನ್ನು ಉಪಯೋಗಿಸುವುದಕ್ಕಾಗಿ ಗಳಿಸುವ ಹಣ ಎಷ್ಟು ಗೊತ್ತೆ? 2 ಕೋಟಿ! ಕಳೆದ 5 ವರ್ಷಗಳಲ್ಲಿ World Tel ನೊಂದಿಗೆ 30 ಕೋಟಿ ಒಪ್ಪಂದ ಮಾಡಿಕೊಂಡ ಸಚಿನ್ ಮುಂದಿನ ಐದು ವರ್ಷಗಳಿಗೆ ಆ ಕಂಪನಿಯಿಂದ ಗಳಿಸುವ ಮೊತ್ತ ನಮ್ಮೆಲ್ಲರ ಊಹೆಗೂ ಮೀರಿದ್ದು. ಒಂದು ಬಿಲಿಯನ್ ಅಂದರೆ 100 ಕೋಟಿ ನಿಜವಾಗಿ ಭಾರತದ ಮೊದಲ ಬಿಲಿಯನರ್ ಆಟಗಾರ.

ಆದರೆ ಒಂದು ದಶಕದ ಕ್ರಿಕೆಟ್ ಜೀವನ ಸಚಿನ್‌ಗೆ ಬರೀ ಹೂವಿನ ಹಾಸಿಗೆಯೇ? ಈ ಪ್ರಶ್ನೆಗೆ ಇಲ್ಲವೆಂದೇ ಹೇಳಿ ಉತ್ತರ ಕೊಡಬೇಕಾಗುತ್ತದೆ. ಒಬ್ಬ ಆಟಗಾರನಾಗಿ ಗಳಿಸಿದ ಯಶಸ್ಸು ನಾಯಕನಾಗಿ ಗಳಿಸಲಿಲ್ಲ. ಎಂಬುದು ಕಟು ಸತ್ಯ. ಅದಕ್ಕೆ ಆತ ಒಬ್ಬನೇ ಕಾರಣನಲ್ಲ ಎಂಬುದು ಸರ್ವವಿಧಿತ. ಆತನ ಸಹ ಆಟಗಾರರು ಕಾರಣವಿರಬಹುದು. ಆಗಿನ ಹಿರಿಯ ಸಹಪಾಟಿಗಳ ಸಹಕಾರ ಆತನಿಗೆ ಸಿಗಲಿಲ್ಲ ಎಂಬುದು ಕೂಡ ದಿಟ. ಈತ ಭಾರತದ ನೆಲದಲ್ಲಿ 13 ವರ್ಷಗಳಲ್ಲಿ ಟೆಸ್ಟ್ ಸರಣಿಯೊಂದನ್ನು ಕಸಿದುಕೊಂಡ ನಾಯಕ ಎಂಬ ಅಪಖ್ಯಾತಿಗೆ ಒಳಗಾದನಲ್ಲದೆ, 5 ಟೆಸ್ಟ್‌ಗಳನ್ನು ಸತತವಾಗಿ ಸೋತ ಮೊಟ್ಟಮೊದಲ ಭಾರತೀಯ ನಾಯಕ ಎಂಬ ಅಪಹಾಸ್ಯಕ್ಕೆ ಈತ ಈಡಾದ. ಹಾಗೂ ನಾಯಕನಾಗಿದ್ದಾಗ ಸಚಿನ್ ಮಿಂಚಲಿಲ್ಲ ಎಂಬ ಕಟುಟೀಕೆಯೂ ಕೂಡ ಇದೆ. ಹಾಗಾಗಿ ನಾಯಕ ಪಟ್ಟವೆಂದರೆ ಎರಡು ಬಾಯಿಯ ಖಡ್ಗವೆಂದೇ ಪರಿಗಣಿಸಿರುವ ಸಚಿನ್ ಅದನ್ನು ಇಂದು ನೇರವಾಗಿ ನಿರಾಕರಿಸುತ್ತಾನೆ.

ಈ ಕ್ರಿಕೆಟ್ ಲೋಕದ ಸಾರ್ವಭೌಮ, ಮಿನುಗುತಾರೆಯ ಮುಂದಿನ ಭವಿಷ್ಯವೇನು ಎಂಬುದಕ್ಕೆ ಕಾಲವೇ ಹೇಳಬಹುದಾದರೂ ಕ್ರಿಕೆಟ್ ತಜ್ಞರ ಪ್ರಕಾರ ಈತ ಇನ್ನೂ ಒಂದು ದಶಕಗಳ ಕಾಲ ಆಟ ಆಡಬಲ್ಲ ನೈಪುಣ್ಯತೆ, ಕೌಶಲ್ಯ ಹಾಗೂ ಶಕ್ತಿ ಸಾಮರ್ಥ್ಯವಿದೆ. ಸಚಿನ್ ಸೊಂಟನೋವಿಗೆ ಒಳಗಾದಾಗ ದೇವರ ಮೊರೆ ಹೋದವರು ಅಸಂಖ್ಯಾತ ಭಾರತೀಯರು ವಿವಿಧ ದೇವರುಗಳಿಗೆ ಹರಕೆ ಹೊತ್ತು ತಮ್ಮ ಆರಾಧ್ಯ ದೈವ ಸಚಿನ್ ಬೇಗ ಗುಣ ಹೊಂದಲು ಬೇಡಿಕೊಂಡರು. ಅಗಣಿತ ಇತ್ತೀಚೆಗೆ ಲಂಡನ್‌ನಲ್ಲಿ ಕ್ರಿಕೇಟ್ ಸೆಮಿನಾರ್‌ನಲ್ಲಿ ಸಚಿನನೇ ಕೇಂದ್ರ ಬಿಂದು.! ಆತ ಬೌಲರ್‌ಗಳನ್ನು ಎದುರಿಸಿ ತನ್ನ ಇಚ್ಛಾಶಕ್ತಿಯಂತೆ ರನ್‌ಗಳಿಸುವಾಗಲೂ ತಲೆ ಅಷ್ಟೆ ನೆಟ್ಟಗೆ ಇರಿಸಿಕೊಳ್ಳಲು ಹೇಗೆ ಸಾಧ್ಯ ಎಂದು ತಮ್ಮ ಅತ್ಯಾಶ್ಚರ್ಯವನ್ನು ಕ್ರಿಕೆಟ್ ತಜ್ಞರು ವ್ಯಕ್ತಪಡಿಸಿದ್ದಾರೆ.

ಈತ ಮುಂದಿನ ಒಂದು ದಶಕದಲ್ಲಿ ಕ್ರಿಕೆಟ್ ಪುಸ್ತಕದಲ್ಲಿರುವ ಎಲ್ಲ ದಾಖಲೆಗಳನ್ನು ಮುರಿದು ಹೊಸ ಹೊಸ ದಾಖಲೆಗಳನ್ನು ಸೃಷ್ಟಿಸುತ್ತಾನೆ, ಎನ್ನುವುದರಲ್ಲಿ ಯಾವ ಸಂದೇಹವು ಇಲ್ಲ. ಸುನಿಲ್ ಗವಾಸ್ಕರ್‌ರವರ ಪ್ರಕಾರ ಟೆಸ್ಟ್ ಕ್ರಿಕೆಟ್‌ನಲ್ಲಿ 40 ಶತಗಳನ್ನು 15,000 ರನ್ನುಗಳನ್ನು ಹೊಡೆಯಬಲ್ಲ, ಹಾಗಾದರೆ ಅದಕ್ಕಿಂತಲೂ ಪ್ರಸಿದ್ಧಿಯಲ್ಲಿರುವ ಒಂದು ದಿನದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 20,000 ರನ್ನು 50 ಶತಗಳು ಎಂದರೆ ಅತಿಶಯೋಕ್ತಿಯಲ್ಲ. Wisdom cricketor ರ ಪ್ರಕಾರ ಈತ 38 ವರ್ಷಗಳ ಕಾಲ ಆಡಿದರೆ 81 ಶತಕಗಳನ್ನು 20ಸಾವಿರಕ್ಕೂ ಹೆಚ್ಚೂ ರನ್‌ಗಳನ್ನು ಹೊಡೆಯಬಲ್ಲ. 100 ಕೋಟಿ ಭಾರತೀಯ ಆರಾಧ್ಯ ದೈವನಾಗಿರುವ ಸಚಿನ್‌ಗೆ ಭಾರತ ಸರ್ಕಾರ ಇತ್ತೀಚೆಗೆ ಖೇಲ್‌ರತ್ನ ಪ್ರಶಸ್ತಿಯನ್ನು ಕೊಟ್ಟಿದೆ. ಆತ ಕ್ರಿಕೇಟ್ ರಂಗ ಕಂಡ ಒಂದು ಅಪರೂಪದ ಬೆಲೆ ಕಟ್ಟಲು ಅಸಾಧ್ಯವಾದ ರತ್ನವೇ ಸರಿ. ಬಹುಶಃ ಕ್ರೀಡಾ ಕ್ಷೇತ್ರದ ಮೊದಲ ಭಾರತ ರತ್ನ.

– ನಂಗಾರು ಆರ್. ನಿಂಗರಾಜು, ಯಲಹಂಕ, ಬೆಂಗಳೂರು

ಕವನ : ಕಾವೇರಿ ಮಾತೆ

ಪ್ರಕೃತಿಯ ಮಡಿಲಲ್ಲಿ ಜನಿಸಿ
ಕಷ್ಟ, ಸುಖಗಳನ್ನು ಭರಿಸಿ
ಕಾಡು ಮೇಡುಗಳನ್ನು ಅಲೆದು
ಎಲ್ಲೋ ಹೋಗಿ ಸೇರುವಳು ||

ತನ್ನನ್ನು ಸಂಪೂರ್ಣವಾಗಿ ಅರ್ಪಿಸಿ
ಸುಖ ಸಂಪತ್ತನ್ನು ಕರುಣಿಸಿ
ಬೇಕು ಬೇಡದವರ ಧಣಿಸಿ
ಎಲ್ಲೋ ಹೋಗಿ ಸೇರುವಳು ||

ಯಾವುದೇ ಭೇದ ತೋರದೆ ಇದ್ದರು
ಒಳಗೊಳಗೆ ಕೋಪ, ದ್ವೇಷ, ಅಸೂಯೆ
ಸುಡುವರು ಒಳ ಮತ್ತು ಹೊರ
ಕೊನೆಗೆ ಮುಕ್ತಿಯು ಅವಳಿಂದಲೇ ||

ಅಕೆಯೇ ಕನ್ನಡದ ಒಡನಾಡಿ ಕಾವೇರಿ ಮಾತೆ

– ಮುಕ್ಕಾಟಿರ ಎನ್. ರವಿಕುಮಾರ್, ಕೆ. ಆರ್. ನಗರ

ವೈಯಕ್ತಿಕ ದ್ವೇಷದಿಂದ ವಿನಾಶದತ್ತ ಹೆಜ್ಜೆ ಇರಿಸಿದ ಸಣ್ಣ ಪುಲಿಕೋಟ್‌ನ ಭಗವತಿ ದೇವಸ್ಥಾನದ ಜೀರ್ಣೋದ್ಧಾರ

1 ಉದಿಯನ ಕುಟುಂಬಸ್ತರಿಂದ ಶ್ರೀ ಭಗವತಿ ದೇವಸ್ಥಾನಕ್ಕೆ ಉದಾರವಾಗಿ ಜಾಗ ನೀಡುವಿಕೆ.

2 ದೇಗುಲದಲ್ಲಿ ನಿತ್ಯ ಪೂಜೆ ಆರಂಭ

ಸಣ್ಣ ಪುಲಿಕೋಟು : ಕೆಲವು ಜನರ ವೈಯಕ್ತಿಕ ದ್ವೇಷ ಸಾಧನೆಯ ಹಿನ್ನಲೆಯಲ್ಲಿ ಕಳೆದ 12 ವರ್ಷಗಳಿಂದ ಪೂಜೆ ಕೈಂಕಾರ್ಯಗಳು ಜರುಗದೆ ವಿನಾಶದ ಅಂಚಿನಲ್ಲಿದ್ದ ಬಾಗ ಮಂಡಲ ಸನಿಹದ ಸಣ್ಣ ಪುಲಿಕೋಟು ಶ್ರೀ ಭಗವತಿ (ಮಂದಿ ತಿರಿಕೆ) ದೇವಾಲಯವು ಕಳೆದ 2000ನೇ ಇಸವಿ ಮಾರ್ಚ್ 30ರಂದು ಜೀರ್ಣೋದ್ಧಾರಗೊಳ್ಳುವತ್ತ ಹೆಜ್ಜೆ ಇರಿಸಿತ್ತು.

ಕಳೆದ 99 ರ ಏಪ್ರಿಲ್ ತಿಂಗಳಲ್ಲಿ ಈ ದೇವಾಲಯದ ಕುರಿತು ಕೆಲವು ಗ್ರಾಮಸ್ತರು ಸ್ಪಂದಿಸಿ ದೇವರ ಕೆಲಸವನ್ನು ಕೈಗೊಳ್ಳುವ ನಿಟ್ಟಿನಲ್ಲಿ ಈ ದೇವಿಯ ದೇವಾಲಯದ ಜೀರ್ಣೋದ್ಧಾರ ಕೆಲಸವನ್ನು ಪ್ರಾರಂಬಿಸಿದರು. ಈ ಹಿಂದೆ ಜಿಲ್ಲೆಯ ಪ್ರಮುಖ ದೇವಾಲಯುಗಳಲ್ಲಿ ಒಂದಾಗಿ ಭಕ್ತವೃಂದವನ್ನು ತನ್ನತ್ತ ಸೆಳೆಯುತ್ತಿದ್ದ ಶ್ರೀ ಭಗವತಿ (ಮಂದಿ ತಿರಿಕೆ) ದೇವಸ್ತಾನ ಕೆಲವರ ವೈಯಕ್ತಿಕ ವಿವಾದಗಳಿಗೆ ತುತ್ತಾಗಿ ಇದು ನಶಿಸಿಹೋಗಿ ವಿನಾಶದತ್ತ ಸಾಗಿತ್ತು. ಈ ದೇವಸ್ಥಾನವು ಸ್ಥಳೀಯ ಉದಿಯನ ಕುಟುಂಬಸ್ತರ ಜಾಗದಲ್ಲಿ ದೇವಾಲಯ ಸ್ಥಾಪನೆಗೊಂಡ ಹಿನ್ನೆಲೆಯಲ್ಲಿ ತಕ್ಕ ಮುಖ್ಯಸ್ತರಲ್ಲಿ ವೈಮನಸ್ಸು ಉಂಟಾಗಿ ಈ ದೇವಿಯ ಉತ್ಸವ ನಿಲ್ಲುವಂತೆ ಆಯ್ತು. ಅಂದರೆ ೧೨. ವರುಷಗಳ ಕಾಲ ದೇವರಿಗೆ ದೀಪ ಹಚ್ಚುವ ಜನರೇ ಈ ಊರಿನಲ್ಲಿ ಇಲ್ಲದಂತೆ ಆಯ್ತು.

ಪ್ರಸ್ತುತ ಈ ದೇವಸ್ತಾನದ ಬಗ್ಗೆ ಚಿಂತನೆ ಹರಿಸಿದ ಗ್ರಾಮಸ್ತರು ಕಳೆದ ಮಾರ್ಚ್ 30ರಂದು ದೇವಾಲಯದ ಆವರಣದಲ್ಲಿ ಊರಿನ ಪ್ರಮುಖದವರನ್ನು ಪತ್ರಿಕೆಯವನ್ನು ಕರೆಯಿಸಿ ಪ್ರಥಮ ಹಂತದ ಶ್ರಮದಾನವನ್ನು ಕೈಗೊಂಡರು. ಆ ಸಂದರ್ಭದಲ್ಲಿ ದೇವಾ ಸನ್ನಿದಿಯ ಹೊರಾಂಗಣ ಹಾಗೂ ಒಳಾಂಗಣ ಶುಚಿಗೊಳಿಸಿದಲ್ಲದೆ ಕುಸಿದು ಬಿದ್ದಿದ್ದ ಹಂಚು, ಮರ ಮಟ್ಟುಗಳನ್ನು ಜೋಡಿಸಲಾಯ್ತು. ಆ ಸಂದರ್ಭದಲ್ಲಿ ಸರ್ವಜನರ ಸಹಕಾರದಿಂದ ಸಮಿತಿಯನ್ನು ರಚಿಸಲಾಯ್ತು.

ಕೂಡಲೆ ಈ ಸಮಿತಿಯವರು ದೇವಸ್ಥಾನದ ಹಿಂಬದಿಯಲ್ಲಿ ಬಿದ್ದು ಹೋಗಿದ್ದಂತಹ ಪೌಳಿಯನ್ನು ನೂತನವಾಗಿ ನಿರ್ಮಿಸಿದರು. ನಂತರ ಊರಿನವರ ಸಮ್ಮುಖದಲ್ಲಿ ಒಂದು ಸಭೆಯನ್ನು ಕರೆದು ಆದಿನ ತಾ: 15-03-2001ರಲ್ಲಿ ದೇವಸ್ಥಾನದ ಸುತ್ತಲೂ ಇರುವ ಜಾಗದಲ್ಲಿನ ಕಾಡುಗಳನ್ನು ಕಡಿದು ಶುಚಿಮಾಡಲಾಯ್ತು. ನಂತರ ಮರುದಿನ ಕೇರಳದ ತಂತ್ರಿಗಳಾದ ಶ್ರೀ ಎಂ. ಕೆ. ನಾಯರನ್ನು ಕರೆಯಿಸಿ "ರಾಶಿ" ಮಡಿಗಿಸಲಾಯ್ತು. ಅವರ ಸಲಹೆಯಂತೆ ಈಗ ಉಸ್ತುವಾರಿಯಾಗಿ ನಡೆಯುತ್ತಿರುವ ಸಮಿತಿಯ ಎಲ್ಲಾ ಸದಸ್ಯರುಗಳು ಒಮ್ಮತದಿಂದ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ನೀಡುವಂತೆ ಸಲಹೆ ಮಾಡಿದರು. ಶ್ರೀದೇವಿಗೆ ಪ್ರತೀದಿನ ದೀಪಹಚ್ಚುವ ವಿಷಯದಲ್ಲಿ ತಿಳಿದುಬಂದಂತೆ ಒಬ್ಬ ಅರ್ಚಕರನ್ನು ಗುರುತಿಸಿ ಏಪ್ರಿಲ್ ತಿಂಗಳ8ರಿಂದ ಚೇರಂಗಾಲದ ಅರ್ಚಕರೊಬ್ಬರಿಂದ ದೀಪ ಬೆಳಗಿಸಲ್ಪಾಯ್ತು.

ನಂತರ ಸಭೆನಡೆಯಿಸಿ ಏಪ್ರಿಲ್23ರಿಂದ ಅಷ್ಟಮಂಗಳ ಪ್ರಶ್ನೆ ಇಡುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಅದೇ ಸಂದರ್ಭದಲ್ಲಿ ದೇವಾಲಯದಲ್ಲಿ ಗಣಹೋಮ, ಕಳಸ ಪೂಜೆ, ಮಾಡಲಾಯಿತು.

ಹಿಂದೆ ಈ ದೇವಸ್ತಾನವು ಉದಿಯನ ಕುಟುಂಬಸ್ತರ ಜಾಗದಲ್ಲಿ ನೆಲೆಗೊಂಡಿದ್ದುದರಿಂದ ದೇವಾಲಯದ ಸಮಿತಿಯವರು ಉದಿಯನ ಕುಟುಂಬಸ್ತರ ಕೈಯಿಂದ ಉದಾರವಾಗಿ ಜಾಗವನ್ನು ಕೊಡುವಂತೆ ಕೇಳಿಕೊಂಡ ಮೇರೆಗೆ ಈ ಕುಟುಂಬಸ್ತರು ಸಂತೋಷದಿಂದ ಮರುದಿವಸವೇ ಈ ಮನೆಯ ಜನರು ಸರ್ವೇಯರನ್ನು ಕರೆಯಿಸಿ ದೇವಸ್ತಾನಕ್ಕೋಸ್ಕರ 1.55 ಎಕ್ರೆ ಜಾಗವನ್ನು ಅಳೆದು ಈ ದೇವಿಯ ದೇವಸ್ಥಾನಕ್ಕೋಸ್ಕರ ಉದಾರವಾಗಿ ನೀಡಿದರು.

ಗರ್ಭಗುಡಿಯು ಶಿತಿಲಾವಸ್ಥೆಯಲ್ಲಿ ಇದ್ದುದರಿಂದ ಅಕ್ಟೋಬರ್ ತಿಂಗಳು 25ರಂದು ದೇವಾಲಯದಲ್ಲಿ ಮಹಾ ಪೂಜೆ ನಡೆದನಂತರ ನೂತನ ಗರ್ಭಗುಡಿಯನ್ನು ಕಟ್ಟುವಂತೆ ಸಮಿತಿಯವರು ತೀರ್ಮಾನಿಸಿ ಇದರ ಖರ್ಚನ್ನು ಭರಿಸಲು ಆ ಊರಿನ ಭಕ್ತಾದಿಗಳ ಸಹಕಾರವನ್ನು ಕೋರಿರುತ್ತಾರೆ. ಅಲ್ಲದೆ ಈ ದೇವಾಲಯದಲ್ಲಿ ನಿತ್ಯ ಪೂಜೆ ನಡೆಯುತ್ತಿರುವುದು ಸಂತೋಷದ ಸುದ್ದಿ.

ಇದೀಗ ಸಮತಿಯ ಅಧ್ಯಕ್ಷರಾಗಿ ಕುಯ್ಯಮುಡಿ ಎಸ್. ಸೀತಾರಾಮ್ (ಪಂಚಾಯ್ತ್ ಸದಸ್ಯರು) ಉಪಾಧ್ಯಕ್ಷರಾಗಿ ಪಟ್ಟಮಾಡ ಪಿ. ಅಪ್ಪಣ್ಣನವರು, ಕಾರ್ಯದರ್ಶಿಯಾಗಿ ಕುಯ್ಯಮುಡಿ ಡಿ. ಸುನಿಲ್, ಉಪಕಾರ್ಯದರ್ಶಿಯಾಗಿ ಕುಂಡ್ಯನ ಗಿರೀಶ್ ಅಲ್ಲದೆ14 ಜನ ಸದಸ್ಯರುಗಳು ಮತ್ತು 5 ಜನ ಗೌರವ ಸದಸ್ಯರಾಗಿ ಈ ಸಮಿತಿಯಲ್ಲಿರುತ್ತಾರೆ.

ಈ ಭಗವತಿ ದೇವಿ(ಮಂದಿತಿರ್‌ಕೆ) ದೇವಿಯು ಸಮಸ್ತ ಭಕ್ತಾದಿಗಳಿಗೆ ಅಭಯ ನೀಡಿ ಹರಸುತ್ತಾ ಮುಂದೆ ಕೊಡಗಿನಲ್ಲಿಯೇ ಪ್ರಸಿದ್ಧಿಗೊಳ್ಳುವಳು ಎಂಬ ಅಭಿಲಾಷೆ ಯೊಂದಿಗೆ ಈ ಭಗವತಿ ದೇವಿಯಲ್ಲಿ ಪ್ರಾರ್ಥಿಸುವ ಭಕ್ತಾದಿಗಳು.

ವರದಿ : ಕುಯ್ಯಮುಡಿ ಸುನಿಲ್.

ಕೊಡಗು ಸಂಗಾತಿಯನ್ನು ಕೊಂಡು ಓದಿರಿ.

ಈಶಾನ್ಯದಲ್ಲಿ ಹೋದರೆ ಜಾಗ- ಮನೆಯು ತುಂಬುವುದು ದರಿದ್ರವಾಗ.

ಫಯಾಜ್‌ನ ಸಾಹಸ ಗಾಥೆ



ಈತ ಹುಟ್ಟಿದ್ದು ಗೋಣಿಕೊಪ್ಪಲಿನಲ್ಲಿ. ಕಿತ್ತು ತಿನ್ನುವ ಬಡತನ, ಬದುಕಿನ ಇನ್ನೊಂದು ಮುಖವನ್ನು ಆತನಿಗೆ ಪರಿಚಯ ಮಾಡಿಕೊಟ್ಟಿದೆ. ಬಡತನ ಎಷ್ಟೆಂದರೆ, ತುತ್ತಿಗೂ ಗತಿಯಿಲ್ಲದೆ ತಾಯಿ ಭತ್ತದ ಗಿರಣಿಯಲ್ಲಿ ಹೊಟ್ಟನ್ನು ಆರಿಸಿ, ಅದರಲ್ಲಿರುವ ನುಚ್ಚು ಗಂಜಿ ಮಾಡಿ ಕುಡಿಸಿದ್ದಿದೆ. ಒಂದು ರೊಟ್ಟಿಯನ್ನು ನಾಲ್ವರು ಹಂಚಿ ತಿಂದಿದ್ದಿದೆ.

ಹಾಗಂತ ಸ್ವಾಭಿಮಾನಕ್ಕೆ ಯಾವುದೇ ಕುತ್ತಿಲ್ಲ. ಚಿಕ್ಕವನಿದ್ದಾಗಲೇ ಬಸ್ ಸ್ಟ್ಯಾಂಡ್‌ನಲ್ಲಿ ಕೂಲಿ ಮಾಡಿ, ದುಡಿಯುತ್ತಾ ಹೊಟ್ಟೆ ಹೊರೆದ ಈತ ಈಗ 350 ಚಿತ್ರಗಳಲ್ಲಿ ಸಾಹಸ ಕಲಾವಿದರಾಗಿ ಅಭಿನಯಿಸಿದ ಫಯಾಜ್, ಬಿಡುಗಡೆಯಾಗಲಿರುವ ಭಾವಭಾಮೈದ ಅವರು ಸಾಹಸ ಕಲಾವಿದನಾಗಿ ಅಭಿನಯಿಸಿದ 350ನೇ ಚಿತ್ರ.

ಗೋಣಿಕೊಪ್ಪಲಿನಲ್ಲಿ ಹುಟ್ಟಿ ಬೆಳೆದ ಫಯಾಜ್, ಅಲ್ಲಿಂದ ಸಾಹಸ ಕಲಾವಿದನಾಗುವವರೆಗಿನ ಯಾತ್ರೆಯುದ್ದಕ್ಕೂ ಬಡತನದ್ದೇ ಕಾರುಬಾರು. ಆದರೂ ಅವರಿಗೆ ಸಿಕ್ಕಿದ ಪ್ರೋತ್ಸಾಹ ಮರೆಯುವಂತಾದ್ದಲ್ಲ. ತನಗೆ ಚಿಕ್ಕವನಿದ್ದಾಗ ನೆರವಾದ ಕರಾಟೆ ಮಾಸ್ಟರ್, ಕೊಡಗಿನ ಅರುಣ್ ಮಾಚಯ್ಯನವರ ಹೆಸರು ಹೇಳುವಾಗ ಫಯಾಜ್ ಕಣ್ಣಲ್ಲೇ ಕೃತಜ್ಞತೆಯಭಾವ ನೋಡಬಹುದು. ಸಿನಿಮಾದಲ್ಲಿ ಹೆಚ್ಚು ಅವಕಾಶ ನೀಡಿದ ಥ್ರಿಲ್ಲರ್ ಮಂಜು ಹೆಸರೂ ಅಷ್ಟೆ.

ಕೊಡಗಿನಿಂದ ಬೆಂಗಳೂರಿಗೆ ಬಂದ ಫಯಾಜ್ ಬಂದದ್ದು ವೆಲ್ಡಿಂಗ್ ಕೆಲಸಕ್ಕೆ. ಆದರೆ ಒಲವು ಸಿನಿಮಾದತ್ತ. ಜನರೇಟರ್ ವ್ಯಾನ್ ಹೋಗುತ್ತಿದ್ದರೆ, ಅದರ ಹಿಂದೇಯೇ ಓಡಿ ಚಿತ್ರೀಕರಣ ತಾಣ ಸೇರಿ, ಅವಕಾಶಕ್ಕಾಗಿ ಸಂಬಂಧಪಟ್ಟವರನ್ನು ಬೇಡಿದ್ದಿದೆ. ಇವರ ಉತ್ಸಾಹಕ್ಕೆ ಬೇರೊಂದು ಕವಲಾದದ್ದು ವಿನೋದ ಆಳ್ವ ಅವರ ಸಲಹೆ. ಸಾಹಸ ಕಲಾವಿದರ ತರಬೇತಿಗೆ ಸೇರಲು ಸಲಹೆ ದೊರೆತದ್ದೇ ತಡ, ಹಾಸನ ರಘು ಅವರ ಗರಡಿಗೆ ಸೇರಿದರು. ತರಬೇತಿ ನೀಡಿದ್ದಷ್ಟೇ ಅಲ್ಲ, ಹಾಸನ ರಘು ಅವರು ಸಾಹಸ, ಸಂಯೋಜಿಸಿದ ಪ್ರೀತಿಯೇ ನನ್ನ ದೈವ ಚಿತ್ರದಲ್ಲಿ ಸಾಹಸ ಕಲಾವಿದನಾಗಿ ಅಭಿನಯಿಸಿದರು.

ಅದರಿಂದಾಚೆ ಹಿಂದಿರುಗಿ ನೋಡಲಿಲ್ಲ ಫಯಾಜ್. ಎಂತಹ ಸಾಹಸ ದೃಶ್ಯಗಳಿಗಾದರೂ ಸೈ ಎನಿಸಿಕೊಂಡರು. ಕನ್ನಡವಷ್ಟೇ ಅಲ್ಲ ತೆಲುಗು, ತಮಿಳು, ಹಿಂದಿ ಚಿತ್ರಗಳಲ್ಲೂ ಸಾಹಸ ಕಲಾವಿದರಾಗಿ ಅಭಿನಯಿಸಿರುವ ಫಯಾಜ್‌ಗೆ ಸಾಹಸ ದೃಶ್ಯಗಳಲ್ಲಿ ತಲೆಯೊಡೆದದ್ದಿದೆ, ಕೈ ಮುರಿದದ್ದಿದೆ. ರಕ್ತನಾಳ ಕತ್ತರಿಸಿಕೊಂಡದ್ದಿದೆ. ಆದರೆ ಅವಾವುವೂ ಅವರ ಸಾಹಸಕ್ಕೆ ಅಡ್ಡಿಯಾಗಲಿಲ್ಲ.

ಇದೀಗ ಸಾಹಸ ನಿರ್ದೇಶಕರಿಗೆ ಸಹಾಯಕರಾಗಿಯೂ ಕೆಲಸ ಮಾಡುತ್ತಿರುವ ಫಯಾಜ್ ಹಲವು ದೂರದರ್ಶನ ಸರಣಿಗಳಲ್ಲಿ ಅಭಿನಯಿಸುತ್ತಿದ್ದಾರೆ.

ಸಾಹಸ ನಿರ್ದೇಶನ ಮಾಡಬೇಕು ಹಾಗೂ ಆ ಚಿತ್ರದಲ್ಲಿ ಪ್ರಮುಖ ಪಾತ್ರಧಾರಿಯಾಗಿ ಅಭಿನಯಿಸಬೇಕು ಎನ್ನುವ ಹಂಬಲದ ಫಯಾಜ್‌ಗೆ ಈಗ ಇರುವ ಹಂಬಲವೆಂದರೆ, ಬಡವರಿಗೆ ತನ್ನಿಂದಾದಷ್ಟು ನೆರವಾಗುವುದು. ತನ್ನ ಮಗಳನ್ನು ವೈದ್ಯಳನ್ನಾಗಿಸಿ ಬಡವರ ಸೇವೆ ಮಾಡುವಂತೆ ಮಾಡುವುದು. ನನಗೆ ಅವಕಾಶ ಕೊಟ್ಟವರು, ಹಸಿವಾದಾಗ ಅನ್ನವಿಟ್ಟವರು, ಈ ಸ್ಥಿತಿಗೆ ತಂದ ಗುರುಗಳು, ಪ್ರೋತ್ಸಾಹ ನೀಡಿದ ಕನ್ನಡ ಕಲಾಭಿಮಾನಿಗಳು ಎಲ್ಲರಿಗೂ ನಾನು ನಿತ್ಯ ಕೃತಜ್ಞನಾಗಿರುತ್ತೇನೆ ಎನ್ನುತ್ತಾ ಫಯಾಜ್ ನಟನಾಗುವ, ಸಾಹಸ ನಿರ್ದೇಶಕನಾಗುವ ಕನಸು ಕಾಣುತ್ತಿದ್ದಾರೆ.

– ಸಂಗಾತಿ.

ಕೊಡಗು ಸಂಗಾತಿ ಯುವಕ ಪ್ರೇಮಿಗೆ ನನ್ನದೊಂದು ಚಿಕ್ಕ ಕಿವಿಮಾತು.

"ನೀವು ಸುಡುವ ಸಿಗರೇಟು ನಿಮ್ಮನ್ನು ಸುಡದೇ"?
ಸಿಗರೇಟು ಸುಡುವುದು ನಿಮಗೊಂದು ಫ್ಯಾಶನ್ನೇ? ಇದು ನಿಮ್ಮ ಗಂಡಸುತನದ, ವೀರತ್ವದ ಸಂಕೇತವೆಂದು ತಿಳಿದಿದ್ದೀರಾ? ಮೂಡ್ ಇದ್ದಾಗ or ಮೂಡ್ ಇಲ್ಲದಾಗ ಹೀಗೆ ನೆಪವೊಡ್ಡಿ ಅವುಗಳನ್ನು ಸೇದುವ ಚಟ ನಿಮಗಿದೆಯೆ? ಹಾಗಾದರೆ ನೀವು ಮೂರ್ಖರೇ ಸರಿ. ಮನುಷ್ಯನಿಗೆ ಇದೊಂದು ಅನಿವಾರ್ಯ ವಸ್ತುವೇ ಅಲ್ಲ. ಇದೊಂದು ಆರ್ಜಿತ ಕಾಯಿಲೆಯೇ ಎನ್ನಬಹುದು. ಒಬ್ಬರಿಂದ ಮಕ್ಕಳಿಗೂ ಈ ಚಟ ಹರಡಬಹುದು!
ಏನಿದ್ದರೂ ಹಣ ಮಾಡುವವರ ಗೀಳಿಗೆ ನೀವು ಬಲಿಯಾಗಿದ್ದೀರಿ ಎಂಬುದು ನಿಮಗೆ ತಿಳಿದಿದೆಯೇ? ಅವರಿಗೆ ಈ ಸಿಗರೇಟುಗಳು ತಮ್ಮ ಬೊಕ್ಕಸ ತುಂಬುವ ಮಾಯಾಕಡ್ಡಿಗಳು. ಹೊಸ ಹೊಸ ಹೆಸರುಗಳು ಆಕರ್ಷಕ ಪ್ಯಾಕಿಂಗ್ ಎಲ್ಲವೂ ನಿಮ್ಮನ್ನು ಮರಳು ಮಾಡುವ ಮಾಯಾಜಾಲಗಳೇ! ಎಚ್ಚರವಿರಲಿ ನೀವು ಕಳೆದುಕೊಳ್ಳುತ್ತಿರುವುದು ಕೇವಲ ಹಣ ಮಾತ್ರವಲ್ಲ ಅದರ ಜೊತೆಗೆ ಎಂದೆಂದೂ ಹಿಂದೆ ದೊರೆಯದ ನಿಮ್ಮ ಅಮೂಲ್ಯ, ಆರೋಗ್ಯಪೂರ್ಣ ಶ್ವಾಸಕೋಶಗಳನ್ನು ಸೇರಿವೆ!
"ಎಚ್ಚರಿಕೆ"

– ಇತಿ ತಮ್ಮ ಓದುಗಾರ್ತಿ
– ಕೊಟ್ಟಕೇರಿಯನ ಆರ್. ಉಷಾ, ಬಲಮುರಿ

ಪಶ್ಚಿಮಕ್ಕಿಂತಲೂ ಪೂರ್ವದಲ್ಲಿ ಹೆಚ್ಚು ಖಾಲಿ ಜಾಗ - ಗಂಡಸಿಗೆ ಕೀರ್ತಿ ಹೆಚ್ಚುವುದಾಗ.

ಮೇರಿ ಮರ್ಡರ್ ಮಿಸ್ಟ್ರಿ

ಗಪ್ಪುತ ಹೇಳ್ರೇ ಮಡಿಕೇರಿ ಜನ್‌ರಿಗೆಲ್ಲಾ ಒಂದುತರ್‍ದ ತಲೆಬೇನೆ. ಅವನ ಒರ್ಪ್ ಬುದ್ಧಿ ಯಾರಿಗೆ ಹಿಡ್ಸಿತಿಲ್ಲೆ. ಕಂಡಕಂಡವುಕೆ ಬೈಯದು ಹೊಡೆಯದು ಅವಂಗೆ ಮಾಮೂಲು. ಸುತ್ತ ಮುತ್ತ ಇದ್ದ ಬೆಲೆಬಾಳುವ ಮರಗಳ್‌ನೆಲ್ಲ ಕಡ್‌ದ್ ಮಾರಿ ತನ್ನ ಜೀವನ ಸಾಗ್‌ಸ್‌ತಿತ್ತ್. ಬರ್‍ತಾ ಬರ್‍ತಾ ಮರಗ ಕಮ್ಮಿ ಯಾಕಂಡ್ ಬಂದೊ. ಅದಲ್ಲದೆ ಪೋಲಿಸ್, ಫಾರೆಸ್ಟ್ ಆಫೀಸರ್‌ಗಳ ಕಾಟ ಸ್ವಲ್ಪ ಜಾಸ್ತಿ ಆತ್. ಹಿಂಗೆಲ್ಲ ಆಕಾಕನ ಗಪ್ಪುಗೆ ತೊಂದರೆಗ ಎದುರಾದೊ. ಅಂವ ಸುಲಬಲಿ ದುಡ್ಡು ಮಾಡುವ ಬೇರೆ ದಾರಿಗಳ್‌ನ ಗ್ಯಾನ ಮಾಡ್ತ್. ಗಪ್ಪುಗೆ ವ್ಯವಹಾರ ಜ್ಞಾನ ಲಾಯ್ಕ ಇತ್ತ್. ಅವಂಗೆ ಒಂದು ಐಡಿಯ ಹೊಳ್ದೇ ಬುಡ್ತ್. ಸೀದ ಮನೆಗೆ ಹೋಗಿ ಹೆಣ್ಣ್‌ಗೆ ಹೇಳ್ತ್. "ಮೇರಿ, ನಾಳೆ ಬೆಳ್‌ಗೆ ಹತ್ತ್ ಗಂಟೆಗೆ ಎಲ್.ಐ.ಸಿ. ಆಫೀಸ್ ಕಡೆ ಸ್ವಲ್ಪ ಹೋಗಿ ಬರ್‌ನ ಆತಾ?" ಗಪ್ಪು ಕ್ರಿಶ್ಚಿಯನ್ ಗೂಡೆನ ಮದುವೆ ಆಗಿತ್ತ್. ಮೇರಿ ಗಪ್ಪು ಹೇಳ್ದ ಮಾತಿಗೆ ಎದ್‌ರ್ ಮಾತಾಡ್‌ದೇ ಇಲ್ಲೆ. ಒಂದ್ ಸರ್ತಿ ಹಂಗೆ ಮಾತಾಡಿ ಒಂದು ವಾರ ಆಸ್ಪತ್ರೇಲಿ ಮಲಗಿತ್ತ್. ಸರಿ, ಬೆಳ್‌ಗೆ ಇಬ್ಬರೂ ಹೊರ್‌ಟೊ. ಮೇರಿಗೆ ತುಂಬ ಆಶ್ಚರ್ಯ ಆದ ಸಂಗತಿತ ಹೇಳ್‌ರೆ, ಅವಳ ಹೆಸ್‌ರ್‌ಲಿ ಗಪ್ಪು ಇಪ್ಪತ್ತೈದ್ ಲಕ್ಷ ರೂಪಾಯಿಯ ಎಲ್.ಐ.ಸಿ. ಪಾಲಿಸಿ ಮಾಡ್‌ಸಿತ್ತ್!

ಅಲ್ಲಿಂದ ಸಾಧಾರ್‌ಣ ಒಂದು ತಿಂಗ ಗಪ್ಪು ಮೇರಿಗೆ ಹೊಡಿಯದೆ, ಬಡಿಯದೆ, ಎಲ್ಲಾ ಮದ್ಯ ಜಂಬರಗಳಿಗೆ ಕರ್‌ಕಂಡ್ ಹೋತಿತ್ತ್. ಒಂದು ದಿನ ಗಪ್ಪು ಬೆಳ್‌ಗೆ ಏಳ್ ಗಂಟೆಗೆ ಬೊಬ್ಬೆ ಹೊಡ್‌ಕಂಡ್ ಗಾಬ್ರಿಲಿ ಪೋಲಿಸ್ ಸ್ಟೇಶನ್ ಕಡೆ-ಓಡ್ತ್. ಅತ್ತ್‌ಕಂಡ್ ಇನ್‌ಸ್ಪೆಕ್ಟರ್‌ಗೆ ಹೇಳ್ತ್, "ಇನ್‌ಸ್ಪೆಕ್ಟರ್ ಸಾಹೇಬರೇ, ನನ್ನ ಹೆಣ್ಣ್‌ನ ಯಾರೋ ಕೊಲೆ ಮಾಡಿ ಮನೆ ಗೇಟ್ ಹತ್ರ ಬಿಸಾಕಿಬುಟ್ಟೊ,ಳೋ!!!" ಸರಿ, ಇನ್‌ಸ್ಪೆಕ್ಟರ್ ಕಂಪ್ಲೇಂಟ್ ಬರ್‌ಕಂಡತ್ತ್. ಸುಮಾರ್ ಎರ್‌ಡ್ ತಿಂಗ ಇನ್ವೆಸ್ಟಿಗೇಷನ್ ಆದಮ್ಯಾಲೆ ಕೋರ್ಟ್‌ಲಿ ಮೂರು ಜನ್‌ರ ಮ್ಯಾಲೆ ಚಾರ್ಜ್‌ಶೀಟ್ ಫೈಲ್ ಆತ್. ಗಪ್ಪುನ ದುರಾದೃಷ್ಟಕ್ಕೆ ಆರೋಪಿಗಳ ಪಟ್ಟೀಲಿ ಅವನ ಹೆಸ್‌ರೂ ಇತ್ತ್. ದಿನ ಕಳ್‌ದಂಗೆ ಕೇಸ್ ಏವಿಡೆಂಸ್‌ಗೆ ಬಾತ್ತ್. ಒಂದು ದಿನ ಗಪ್ಪುನ ಸರ್‌ದಿ ಬಂದೇ ಬುಡ್ತ್ತ್. ಪಬ್ಲಿಕ್ ಪ್ರಾಸಿಕ್ಯೂಟರ್ ಗಪ್ಪುಗೆ ಕೆಲವ್ ಪ್ರಶ್ನೆಗಳ್‌ನ ಕೇಳ್ದೊ. ಅದ್‌ಕೆ ಗಪ್ಪು ಹಿಂಗೆ ಉತ್ತರಿಸಿತ್ತ್.

"ನಿನ್ನ ಹೆಸರ್?"

"ಗಪ್ಪು"

"ವಯಸ್ಸ್"

"ಇಪ್ಪತ್ತೊಂಬತ್ತ್"

"ಮದುವೆ ಆಗಿ ಎಸ್ಟ್ ವರ್ಷ ಆತ್?"

"ಎರಡ್"

"ಮೇರಿ ಕೊಲೆ ನಡ್‌ದ ರಾತ್ರಿ ಮನೆಲಿ ಯಾರ್‍ಯಾರಿದ್ದೊ?"

" ನಾನ್ ಮತ್ತೆ ಮೇರಿ ಇಬ್ಬರೆ"

"ನೀವು ಎಸ್ಟ್ ಗಂಟೆಗೆ ಮಲಗಿದ್ದ್?"

"ಸುಮಾರ್ ಹತ್ತ್‌ಗಂಟೆಗೆ"

"ಮೇರಿ ಕೊಲೆ ಆವ್‌ಟುತ್ತ ಹೆಂಗೆ ಮತ್ತೆ ಎಷ್ಟ್ ಗಂಟೆಗೆ ಗೊತ್ತಾದ್?"

"ಬೆಳ್‌ಗೆ ಸುಮಾರ್ ಆರ್‌ವರೆ ಗಂಟೆಗೆ ಪಕ್ಕದಮನೆ ಇಬ್ರಾಹಿಂ ಬಂದ್ ಬಾಗ್‌ಲ್ ತಟ್ಟ್‌ಕಾಕನೇ ಗೊತ್ತಾದ್"

"ಇಬ್ರಾಹಿಂ ಬಾಗ್‌ಲ್ ತಟ್ಟ್‌ಕಾಕನ ಒಳೆಗೆಂದ ಬೋಲ್ಟ್ ಹಾಕಂಡಿತ್ತಾ?"

" ಹೌದು"

"ಮೇರಿ ಶರೀರ ನೀನ್ ನೋಡ್ತಾಕನ ಎಲ್ಲಿ ಬಿದ್ದಿತ್ತ್?"

"ನಮ್ಮ ಮನೆ ಅಂಗಳಲಿ ಗೇಟ್ ಹತ್ರ ಬಿದ್ದಿತ್ತ್"

ಅಲ್ಲಿಗೆ ಗಪ್ಪುನ ಕತೆ ಮುಕ್ತ್. ಅಂವ ಒಂದು ಸಣ್ಣ ತಪ್ಪು ಮಾಡಿತ್ತ್. ರಾತ್ರಿ ಮೇರಿನ ಕೊಂದ ಮ್ಯಾಲೆ ಹೊರಗೆ ಅಂಗಳಲಿ ಹಾಕಿ ಸೀದ ಮನೆ ಒಳಗೆ ಬಂದ್ ಬೋಲ್ಟ್ ಹಾಕಿ ಮಲಗಿತ್ತ್! ಬೇರೆ ಸಾಕ್ಷಾಧಾರಗಸ ಇದ್ದ ಕಾರಣ ಗಪ್ಪು ಮೇರಿ ಕೊಲೆಗೆ ಕಾರಣತ ಧೃಡಪಟ್ಟಿತ್ತ್. ಗಪ್ಪುಗೆ ಹತ್ತ್ ವರ್ಷ ಕಠಿಣ ಸಜೆ ಆತ್. ಗಪ್ಪುಗೆ ಅತ್ತ ಮರ ಕಡಿಯಕ್ಕೆ ಸ್ವಾತಂತ್ರ್ಯನೂ ಇಲ್ಲೆ ಇತ್ತ ಮೇರಿನ ಹೆಸ್‌ರ್‌ಲಿ ಮಾಡ್ಸಿದ ಎಲ್.ಐ.ಸಿ. ಪಾಲಿಸಿ ಹಣ ಪಡೆಯುವ ಹಕ್ಕ್‌ನೂ ಇಲ್ಲೆ!!!

ಅದ್‌ಕೇ ಹೇಳ್ದು ಮೋಸ ಮಾಡುದು ಕೂಡಾ ಒಂದ್ ವಿದ್ಯೆ. ಆ ವಿದ್ಯೆನ ಸರಿಯಾಗಿ ಕಲ್ತ್‌ಕಂಡ್ರೆ ಮಾತ್ರ ಆ ಕೆಲಸಕ್ಕೆ ಇಳಿಯೋಕುತಾ!

— ಪಿ.ಯು. ಪ್ರದೀಪ್. ಮೈಸೂರು.

ಅನುಭವ ಬೇಕ್ - II

ನಮ್ಮ ಮಕ್ಕ ವಳ್ಳದಾಗಿರಕುತ ಪ್ರತಿಯೊಬ್ಬ ಅಪ್ಪ ಅವ್ವನ ಆಸೆ, ಈ ಬಯಕೆಗೆ ವಳ್ಳ ಬೋದನೆ ಕೊಟ್ಟ್ ನಮ್ಮ ಮಕ್ಕಳ ಉತ್ತಮ ರೀತಿಲಿ ಬೆಳಸಿಕೆ ಸಾದ್ಯ ಆದುಲೆತಾದರೆ ಇನ್ನೊಬ್ಬ ಮಾಡುವ ಬೋಧನೆಲಿ ಎಷ್ಟ್ ಪ್ರಯೋಜನ ಆದು? ಇದರ ಬೇರೆಯಾಗಿ ವಿವರಿಸುವ ಅವಶ್ಯಕತೆ ಇಲ್ಲೆ. ಮತ್ತೆ ಈ ವಿಚಾರಲಿ ದೊಡ್ಡ ದೊಡ್ಡ ಭಾಷಣ ಬಿಗ್ದ್ ಮಾತ್ ಮಾತ್‌ಲಿ ಉಪದೇಶ ಮಾಡುದರಲ್ಲಿ ಪ್ರಯೋಜನ ಇಲ್ಲೆ. ಅವರವರ ಅನುಭವಲಿ ಅವರವರ ಜೀವನನ ತಿದ್ದ ಕಂಬೋಕು. ಹಂಗೇತೇಳಿ ನೀತಿ, ಭೋದನೆಗಳ ಅವಶ್ಯ ಬೇಡತ್ತೇಲಿ ಅಲ್ಲ. ನೀತಿ, ಭೋದನೆ ಪುರಾಣ, ಪುಣ್ಯ ಕಥೆಗೆಲ್ಲಾ ಅನುಭವದಿಂದ ಬಂದದ್ ಆಗುಟ್ಟು. ಈ ಅನುಭವಲಿ ಲಾಭ ಉಟ್ಟು. ಇದರ ಲಾಭ ನಮಿಗೆ ಆಕು. ನಾವು ಈ ಅನುಭ'ವನ ನಮ್ಮ ನಮ್ಮ ಜೀವನಲಿ ಅಳವಡಿಸಿಕಂಬೋಕು. ಅನುಭವಲಿ ಕಲ್ತ್‌ಕಂಡ್, ಮನುಷ್ಯ ತಾನ್ ತಾನಾಗಿಯೇ ಉತ್ತಮ ಮನುಷ್ಯನಾಗಿ ಬೆಳಿಯೋಕು.

ಕೊಡವ ಭಾಷೆಲಿ : ಚೇಂದ್ರಿಮಾಡ ಮುತ್ತಪ್ಪ

ಅರೆಭಾಷೆಗೆ : ಪಟ್ಟಡ ಪ್ರಭಾಕರ.

ಉತ್ತರಕ್ಕಿಂತಲೂ ದಕ್ಷಿಣದಲ್ಲಿ ಹೆಚ್ಚು ಖಾಲಿಜಾಗ- ಎಲ್ಲಾ ಅನರ್ಥಗಳಿಗೂ ಮೂಲ.

ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜನ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಯಿ - **35**

ಮದ್ವೆ ಮನೆಲಿ ಚಪ್ಪರ ಊಟಕ್ಕೆ ಮೊದಲನೆ ಪಂಕ್ತಿಗೆ ಜನ ಎದ್ದ್ ಹೋಗಿದ್ದೊ ಅಷ್ಟೆ. ಅಷ್ಟೊತ್ತಿಗೆ ಗೇಟ್ ಹತ್ರ ಒಂದ್ ಕಪ್ಪು ಎಂಬಾಸಿಡರ್ ಕಾರ್ ಬಂದ್ ನಿಂತತ್. ಅದರ ಒಳಗಿಂದ 5-6 ಜನ ಗೆಸ್ಟ್‌ಗ ಕೆಳಗೆ ಇಳ್ದೊ. ಇದರ ನೋಡ್ದ ಬೋಪಜ್ಜ ಮತ್ತೆ ಮಹೇಂದ್ರಪಾಲ್ ಪುನಃ ಆ ಕಾರ್‌ನ ಹತ್ರ ಹೋಗಿ ಇವು ಕೂಡಾ ಗಂಡನ ಕಡೆ ನೆಂಟ್ರ್‌ಗತ ತಿಳ್ಕಂಡ್ ಆಹಾ!! ಬನ್ನಿ ಬನ್ನಿ ನಮಸ್ಕಾರ ತಾ ವಿಶ್ ಮಾಡಿ ಮದ್ವೆ ಚಪ್ಪರದ ಕಡೆಗೆ ಕರ್ಕ್ಂಡ್ ಬಂದ್ ಒಂದ್ ಟೇಬಲ್ ಸುತ್ತಾ ಕುರ್ಚಿಲಿ ಕೂರ್ಸಿದೊ. ಆಗ ಒಳಗಡೇಂದ ಬಂದ, ಅಜ್ಜಿಕ, ಅಕ್ಕಂದಿರು, ಕೆಲವು ಹೆಣ್ಣ್‌ಗೂಡೆಗ ಸಹ ಇವರ ಹತ್ರಬಂದ್ ಬಂದ ಈ ಅಪರಿಚಿತ ನೆಂಟ್ರ್‌ಗಳಿಗೆ ಕೈ ಮುಗ್ದ್ ವಂದಿಸಿ ಮರ್ಯಾದೆ ಕೊಟ್ಟ್ ಸಂತೋಷಲಿ ಯೋಗಕ್ಷೇಮನ ವಿಚಾರ್ಸಿಕಂಡ್ ಹೋದೊ.

ಜನರ ಮನ್ಸ್‌ಲಿ ಏನೊಂದೂ ಕಲ್ಮಶ ಇಲ್ಲದ ಈ ಜನ. ಮನ್ಸ್‌ಲಿ ಕೇಡ್‌ನೇ ಬಯಸಿಕಂಡ್ ಇವರ ಮಂಜ ರಾಜುನ ಬಲಿತಕಂಬಕೆ ಬಂದಂತಹ ಕ್ರೂರಿ ಆಗಂತುಕರ್ ತಾ ಗೊತ್ತಿಲ್ಲದ ಈ ಅಮಾಯಕ ಜನ ಇವರ ಹಾರ್ದಿಕ ಸ್ವಾಗತನ ಕಂಡ್ ಇವು ಇವರ ಮನ್ಸಲೇ ಕುಯುಕ್ತಿಯ ಸೇಡಿನ ನಗೆ ಆಡಿಕಂಡ್ ಕಣ್ಣ್‌ಲೇ ಅಲ್ಲಿ ಸುತ್ತೆಲ್ಲಾ ತಮಿಗೆ ಬೇಕಾಗಿದ್ದ Mr. ರಾಜುನ ಹುಡುಕಾಡಿದೊ. ಆಗ ಮಿಸ್ಟರ್ ಮಹೇಂದ್ರಪಾಲ್ ಬಂದ್ ತನ್ನ ಪರಿಚಯನ ಮಾಡಿಕಂಡತ್. ನಾನ್ Mr. ರಾಜುನ ಬೆಸ್ಟ್ ಫ್ರೆಂಡ್ ಮಹೇಂದ್ರ ಪಾಲ್. ನಂಗೆ ನಿಮ್ಮ ಪರಿಚಯ ಆತ್‌ಲ್ಲೆ ತ್ತಾ ಒಬ್ಬೊಬ್ಬರ ಕೈ ಹಿಡ್ದ್ ಸ್ವಲ್ಪ ಜೋರಾಗಿ ಅವರ ಕೈನ ಹಿಚುಕಿ ಬೇನೆ ಆಗುವಂಗೆ ಶೇಖ್‌ಹ್ಯಾಡ್ ಮಾಡ್ತ್. ಆಗ ಆ ಮೈಸೂರು ಕೇಡಿಗ (ಗೆಸ್ಟ್‌ಗ) ಮುಖನ ಹುಳಿ ಮಾಡಿಕಂಡ್ ಹೌದು ಹೌದು ನಾವೂ ಕೂಡಾ ಮಿ|| ರಾಜುಗೆ ತುಂಬಾ ಹತ್ರದವ್ರು. ಮತ್ತೆ ತುಂಬಾ ಬೇಕಾದವ್ರು. ಅದಕ್ಕೇ ನಾವು ಅಂವನ ತಂಗೆ ಮದ್ವೆಗೆ ತಪ್ಪಿಸಿಕಣದೆ ಬಂದೊಳೊ. ತಾ ಹೇಳಿ ಎಲ್ಲಿ Mr. ರಾಜು ಕಾಂಬೊದಿಲೆಲ್ಲಾ ತಾ ಕೇಳ್ದೊ. ಈಗ ಮಹೇಂದ್ರ ಪಾಲ್‌ಗೆ ಈ ಅಗಂತುಕ ಗೆಸ್ಟ್‌ಗಳ ಮರ್ಮ ಅರ್ಥ ಆತ್. ಆದ್ರೂ ಮುಖಲಿ ನಗೆ ತಂದ್ ಕಂಡ್ ಹಾಂ! ನೀವು ಏನೂ ಬೇಜಾರಾಗ್ ಬೇಡಿ. ಆ ನನ್ನ ಫ್ರೆಂಡ್ Mr. ರಾಜು ಇನ್ನೂ ತನ್ನ ತಂಗೆನ ಮದ್ವೆ ಗೋಸ್ಕರ ಬಂದ್ ಇಲ್ಲಿಗೆ ತಲಪಿತಿಲ್ಲೆ. ಆದ್ರೇ ಅಂವ ಖಂಡಿತಾ ಬಂದೇ ಬಂದದೆ. ಆದ್ರೇ ನೀವೆಲ್ಲಾ ಅಂವಂಗೆ ತುಂಬಾ ಬೇಕಾದ ಬೆಸ್ಟ್ ಫ್ರೆಂಡ್ಸ್‌ಗ ಆಗಿದ್ದುದರಿಂದ ದಯವಿಟ್ಟು, ನೀವು ಏನೂ ಬೇಜಾರು ಮಾಡಿಕೊಂಬೋದು ಬೇಡ. ನಿಮಿಗೆ ನಾನ್ ಯಾವ ಕೊರತೆ ಆಗದಂಗೆ ಅವನಷ್ಟೇ ಪ್ರೀತಿ ವಿಶ್ವಾಸಲಿ, ಮತ್ತೆ ಇಲ್ಲಿನ ಪದ್ದತಿ ಪ್ರಕಾರ ನೋಡಿಕಂಡನೆ, ತಾ ಹೇಳಿ ಒಬ್ಬೊಬ್ಬರಿಗೂ ಮೊದ್ಲ್ ಒಂದೊಂದ್ Classic King ಸಿಗರೇಟ್‌ನ ಆಫರ್ ಮಾಡ್ತ್. ಅವರ ಒಬ್ಬೊಬ್ಬರ ತುಟಿಗೂ ತನ್ನ ಲೈಟರ್‌ಂದ ಬೆಂಕಿ ತಗುಲಿಸಿ ಕೊಡುತಾ ಏಯ್ ಚಾಮಿ ಬಾರ್‍ರಾ ಇಲ್ಲಿ, ಹೋಗಿ ತಂಗೆ ಶೋಭಂಗೆ ಹೇಳಿ ಎರಡ್ ಟ್ರೇ ತುಂಬಾ ಫ್ರೈಡ್ ಚುಟ್ಟ್, ಮತ್ತೆ ಇನ್ನೊಂದರಲ್ಲಿ ಚಿಕನ್, ಹಂಗೇ, ಮೂರು ಫುಲ್ ಬಾಟ್ಲ್ Old Monk Wiskyನ ಕಳ್ಸಿಕೊಡಿಕೆ ಹೇಳ್ ತಾ ಹೇಳ್ತ್. ತಂಗೆ ಶೋಭ ಮತ್ತೆ ಅವಳ ಫ್ರೆಂಡ್ಸ್‌ಗ ಶಿಲ್ಪಾ, ಮತೆ ರಾಣಿ ಗೂಡೆಗ ಎರಡ್ ಬಾಟ್ಲ್ Old Monk ವಿಸ್ಕಿನ ಹಿಡ್ಕಂಡ್ ಎರಡ್ ಸ್ಟೀಲ್ ಟ್ರೇ ತುಂಬಾ ಚುಟ್ಟ್, ಹೊರ್ದ್‌ದರ ಕೋಳಿ ಪೀಸ್ (Chicken fry)ನ ತಂದ್ ಟೇಬಲ್ ಮೇಲೆ ಮಡಗಿದೋ. Mr. ಮಹೇಂದ್ರಪಾಲ್ ಈ ಆರುಜನ ಮೈಸೂರ್‌ಂದ ಬಂದ ಗೆಸ್ಟ್‌ಗಳೊಟ್ಟಿಗೆ ತುಂಬಾ ಆತ್ಮೀಯ ಆಗಿ ಮಾತಾಡಿ ಕಂಡ್ ಅವುಕೆ ಇಷ್ಟ ಆಗುವಂಗೆ ಈ ಇಂಪೋರ್ಟೆಡ್ ವಿಸ್ಕಿನ ಗ್ಲಾಸ್‌ಗಳಿಗೆ ಬಗ್ಗ್‌ಸಿ ಕೊಟ್ಟ್ ಎಲ್ಲವರ ಮದ್ಯೆ ತಾನೂ ಕೂಡಾ ಚೀಯರ್ಸ್‌ತಾ ಹೇಳಿಕಂಡ್ ಎಲ್ಲವರಂತೆ ತಾನೂ ವಿಸ್ಕಿನ ಶಿಪ್ ಮಾಡಿಕಂಡ್, ಅವರಂಗೆ ತಾನೂ ಸಿಗರೇಟ್‌ನ ಸೇದಿಕಂಡ್ ಹೊಗೆಬುಡ್ತಿತ್. ಹಂಗೇ ಮತಾಡ್‌ತಾ ಈ ದೂರಂದ ಬಂದಿದ್ದ ಗೆಸ್ಟ್‌ಗಳ ಮನಸ್ಸ್‌ನ ಇಂಗಿತನ ಒಂದೊಂದೇ ಕೆದಕಿ ತಿಳ್‌ಕಂಬತಿತ್ತ್. ಅಷ್ಟೊತ್ತಿಗೆ ಬೋಪಜ್ಜ ಬಂದ್ ಊರವರ ನೆಂಟ್ರ್‌ಗ ಎಲ್ಲಾ ಎಲ್ಲವರ್ನ ಊಟಕ್ಕೆ ಏಳಿತ್ತೇಳಿ ಕೇಳಿಕಂಡೊ. ಆಗ ತುಂಬಾ ಜನ ಎದ್ದ್ ಚಪ್ಪರದ ಕೆಳಗೆ ಊಟಮಾಡಿಕೆ ಎದ್ದ್ ಹೋಗಿ ಕುದ್ದ್ ಕಂಡೊ.

ಆಗ ಮಿ|| ಮಹೇಂದ್ರಪಾಲ್ ಈ ಗೆಸ್ಟ್‌ಗಳಿಗೆ ಹೇಳ್ತ್ ನಾವೆಲ್ಲಾ ಆಮೇಲೆ ಆರಾಂಲಿ ಊಟಕೆ ಕುದ್ದ್ ಕಂಬೋಣ. ಈಗ ನಮ್ಮದ್ ಈ ಪಾರ್ಟಿ ಸಾಗಲಿತಾ ಅವರ್ನೆಲ್ಲಾ ಅಲ್ಲೆ ಕೂರ್ಸಿಕಂಡ್ ಒಂದೊಂದೇ ಮಾತಿಗೆ ಇಂವ ಸುರುಮಾಡ್ತ್. ನನ್ನ ಫ್ರೆಂಡ್ Mr. ರಾಜು ತುಂಬಾ ಒಳ್ಳೆ ಮನ್ಸ. ಅಂವ ಇನ್ನೂ ಇಲ್ಲಿಗೆ ಬಂದ್ ತಲಪಿತಿಲ್ಲೆ. ತನ್ನ ತಂಗೆನ ಮದ್ವೆಗೆ ವರದಕ್ಷಿಣೆ ಹಣನ ಕೊಡಿಕೆ ಇವನ ಹತ್ರ ಇತ್ತ್‌ಲೆ. ಅದ್‌ರಂದ ಆ ಹಣನ ಹೊಂದಿಸಿಕಂಡ್ ಬನ್ನೆತ್ತೇಳಿ ಮನೆ ಬುಟ್ಟ್ ಹೋದಂವ ಅದೇನೋ ಕಾರಣದಿಂದ ವಾಪಾಸ್ಸ್ ಬಾಕೆ ಆತ್‌ಲ್ಲೆ. ಇಲ್ದೇ ಇದ್ದಿದ್ರೆ ಅಂವ ಈಗ ನಿಮ್ಮ

ಕಳ್ದ ಸಂಚಿಕೆಂದ ....

ರಾಜು ಮಂಜ ತನ್ನ ಕಾಸಾ ದೋಸ್ತ್ Mr. ಮಹೇಂದ್ರಪಾಲ್‌ನ ಹತ್ರ, ತನ್ನ ಅವಸ್ತೆನ ಎಲ್ಲಾ ಹೇಳಿ, ತಂಗೆ ಶೋಭಳ ಮದ್ವೆಗಿರುವ ದುಡ್ಡ್‌ನ, ಚಿನ್ನದ ಒಡವೆ, ಬಟ್ಟೆ ಬರೆಗಳ ಕಳ್ಸಿ ಕೊಟ್ಟಿತ್. ಅಲ್ಲಿ ಮನೆಲಿ ಮದ್ವೆ ಜಂಬಾರದ ಎಲ್ಲಾ ಕೆಲ್ಸಗಳ ಜವಾಬ್ದಾರಿ ತಕಂಡ್ ನಡ್ಸಿಕೆ ಹೇಳಿತ್. ಮದ್ವೆ ದಿನದ ಚಪ್ಪರದ ದಿನದ ಕೆಲ್ಸಗಳೆಲ್ಲಾ ಅಚ್ಚುಕಟ್ಟಾಗಿ ನೆರವೇರ್ಸಿತ್. ಸುತ್ತ್ ಮುತ್ತ ಇದ್ದ ನೆಂಟರ್‌ಗ, ಗಂಡ್‌ನ ಕಡೆವೆಲ್ಲಾ ಮದ್ವೆ ಮನೆಗೆ ಬಂದ್ ಆಗಿತ್. ....

ಮುಂದಕೆ ....

ಪೂರ್ವಕ್ಕಿಂತಲೂ ಪಶ್ಚಿಮದಲ್ಲಿ ಹೆಚ್ಚು ಖಾಲಿ ಜಾಗ- ಗಂಡಸಿನ ಯೋಗ್ಯತೆ ಕರಗುವುದಾಗ.

ಜೊತೆ ಕಂಪೆನಿ ಕೊಡಿಕೆ ಇಲ್ಲೇ ಇರ್ತ್‌ತ್. ಅಂವಂಗೆ ತನ್ನ ತಂಗೆ ಮೇಲೆ ಬಹಳ ಆಸೆ ಉಟ್ಟು, ಅದ್ರಂದ ಅಂವ ಎಲ್ಲಿ ಇದ್ರೂ ಇಲ್ಲಿಗೆ ಬಂದೇ ಬಂದದೆ ಅಂವಂಗೆ ಎಷ್ಟ್ ತೊಂದ್ರೆ ಇದ್ರೂ ಅದರ ನಿಭಾಯಿಸಿಕಂಡ್ ಬಂದದೆ. ಅಂವಂಗೆ ಎಂಥಾ ಬಲ್ಯಾಡ್ಯರೂ ಅಡ್ಡಿ ಬರ್ಪಂಗೆ ಇಲ್ಲೆ. ಅಂವಂಗೆ ಇರ್ಪ ತಾಕತ್, ಅಂವಂಗೆ ಇರ್ಪ ಶಕ್ತಿನ ಮೈಸೂರ್‌ಲಿ ಕೆಲವು ರೌಡಿಗಳಿಗೆ ಸ್ವಲ್ಪ ಪರಿಚಯ ಮಾಡಿರೊಕ್ಕು ಕಂಡದೆ. ಅಂವ ಒಳ್ಳೆವಕೆ ಮಾತ್ರ ತುಂಬಾ ಒಳ್ಳೆಂವ. ಆದ್ರೇ ಕೆಟ್ಟವು ಭ್ರಷ್ಟಚಾರಿ ಜನ ತಾ ಅಂವಂಗೆ ಗೊತ್ತಾಗಿ ಹೋದ್ರೆ ಅಂತವರ ಮುಗ್ಸೇ ಬುಟ್ಟದ್ದೆ. ನಾನೂ ಅಂವನೂ ನೇಶನಲ್ ಕರಾಟೆ ಟೀಂಲಿ ವರ್ಕ್ ಮಾಡುತಿದ್ದೊ. ನಾವಿಬ್ಬರೂ ಒಟ್ಟಿಗೆ ಮನ್ಸ್ ಮಾಡಿ ಒಂದ್ ಸರ್ತಿ ನಮ್ಮ ಮಾರ್ಷಲ್ ಆರ್ಟ್‌ನ ಎಕ್ಷನ್‌ಗೆ ಸುರುಮಾಡಿರೆ ಈ ಇಡೀ ಮದ್ವೆಮನೆ ಜನನ ಬರೀ10 ನಿಮಿಷಕೆ ಹೊಡ್ದ್ ಅಡ್ಡ ಬೀಳ್ಸೀ ಹೋಗಿದ್ದವೆ. ಆದ್ರೇ ನಮಿಗೆaction ನ ತೋರ್ಸಿಕೆ ಸರಿಯಾದ ಒಂದ್ ಅವಕಾಶಕೋಸ್ಕರ ಕಾಯುತಾ ಒಳೊ. ನೋಡಿ ನೀವೇ ಬೇಕಾದ್ರೇ ನನ್ನ ರಟ್ಟೆನ ನನ್ನ ಮಸ್ಸಲ್ ಈ ಕರಾಟೆ ಸ್ಟೈಲ್‌ನ ಕಲ್ತ ಮೇಲೆ ಎಷ್ಟ್‌ಗಟ್ಟಿ ಆಗುಟ್ಟು, ತಾ ಹೇಳಿ ತನ್ನ ತೋಳುನ ಬಟ್ಟೆ ಮಡಚಿ ಎತ್ತಿ ಹಿಡ್ದ್ ಮುಷ್ಠಿ ಬಿಗ್ದ್ ಆ 6 ಜನಕ್ಕೂ ತೋರ್ಸಿತ್. ಹಾ! ಅಬ್ಬಾ ಅವನ ಒಂದ್ ಕೈ ರಟ್ಟೆನ ಹಿಡ್ದ್ ನೋಡ್ದೊ. ಅಂವನ ರಟ್ಟೆ ಮಸ್ಸಲ್ಸ್ ಒಳ್ಳೆ ಮರದ ಬೇರು ಗಳಂಗೆ ದಪ್ಪ ದಪ್ಪ ಆಗಿ ಗಟ್ಟಿಯಾಗಿ ಕಂಡತ್. ಒಬ್ಬ ಅದರ ಬೆರಳ್‌ಂದ ಮಿಡಿಕಿ ನೋಡ್ತ್. ಅದ್ ಮಾಂಸದ ಮಸ್ಸಲ್ಸ್ ಅಲ್ಲ ಒಳ್ಳೆ ಫೈಬರ್ ಮೋಲ್ಡೆಡ್ ಮಸ್ಸಲ್ಸ್‌ಗ. ಇದರ ನೋಡ್ದ ಆ ಮೈಸೂರ್‌ಂದ ಬಂದ ರೌಡಿಗಳ ಎದೆಲಿ ಸ್ವಲ್ಪ ಪುಕ್ಕುಲು ತನ ಹುಟ್ಟಿ ಕಂಡತ್ ಈ ಮೈಸೂರ್‌ನ ಜನ ಏನಿದ್ದರೂ ಬರೀ ಕೋಣಗಳಂಗೆ ಮೈ ಬೆಳ್ಸಿಕಂಡ್ ಒಂದ್ ½ ಕಿಲೋಮೀಟರ್ ಓಡಿಕ್ಕೂ ಆಗದಂತವು. ದಪ್ಪದಪ್ಪ ಕೆಂಗಣ್ಣಿನ ಬುಟ್ಟಕಂಡ್, ಅಗಲ ಆದ ಬಾಯಿಂದ ದೊಡ್ಡ ಅಲ್ಸಿಸಿಯನ್ ನಾಯಿತರ ಗಂಟಲ್‌ನ ಮಾಡಿಕಂಡ್ ಮಾತೆತ್ತಿರೆ ಮಚ್ಚು ಲಾಂಗುತ್ತೇಳಿ ಬೆದ್ರಸಿಕಂಡ್ ಅಮಾಯಕ ಬಡ ಜನರ ಸುಲಿಗೆ ಮಾಡಿಕಂಡ್ ಬದುಕುತ್ತಿರುವ ಜನ. ಇವರಲೆಲ್ಲಾ ಪ್ರೀತಿ, ವಿಶ್ವಾಸ, ಮನಷ್ಯತ್ವ ಮಾನವೀಯತೆ ಏನೇನೂ ಇಲ್ಲೆ. ತಲೆಲಿ ಒಳ್ಳೆ ಬುದ್ದಿನೂ ಇರ್ದುಲೆತಾ ಈ ಮೈಸೂರು ಜನ ಮನ್ಸ್‌ಲೆ ಗ್ಯಾನ ಮಾಡಿಕಂಡೊ. ಹಿಂಗೆಲ್ಲಾ ಮಾತಾಡಿಕಂಡೇ ಎಲ್ಲಾ ಒಟ್ಟಿಗೆ ಸೇರಿಕಂಡ್ ತಿಂದ್, ಕುಡ್ದ್, ಬಹಳ ಖುಷೀಂದ ಈ ಊರುನ ಜನರ ಪ್ರೀತಿಯ ಸತ್ಕಾರನ ಗೇನ ಮಾಡಿಕಂಬೊತಿದ್ದೊ. ಆಗ ಮೊದಲ ಪಂಕ್ತಿ ಊಟನ ಮುಗ್ಸಿಕಂಡ ಊರುಜನ ತಿರುಗಿ ವಾಪಾಸ್ ಹೋಕಾಕನ ಮಹೆಂದ್ರಪಾಲ್‌ಗೂ ಈ ಮೈಸೂರು ಗೆಸ್ಟ್‌ಗಳಿಗೂ ವಿಶ್‌ಮಾಡಿ ಕಂಡ್ ಹೊರಡುತಿದ್ದೊ. ಕೆಲವು ಹುಡುಗರ ಗುಂಪುಗ ವಾದ್ಯ. ಬೇಂಡ್ ಸೆಟ್ಟ್‌ನ ಒಟ್ಟಿಗೆ ಖುಷೀಲಿ ಕುಣ್ತ್ ಹಾಕಿಕೆ ಡ್ಯಾನ್ಸ್ ಮಾಡಿಕೆ ಶುರುಮಾಡ್ದೊ. ಆಗ ಈ ಮೈಸೂರು ಗೆಸ್ಟ್‌ಗಳಲ್ಲಿ ಇದ್ದ ಪೈಲ್‌ವಾನ್ ವುಲ್ಲಾ ಬಕ್ಷ್, ಸೆಕೆಂಡ್ಸ್ ಸೇಲ್ಸ್ ಮಾಡ್ವ ಅಸ್ಪರ್ ಶಾಬು, ಹೇಳ್ದೊ. ಈಗ ನಮಿಗೆ ಇಲ್ಲಿ ಕುಡ್ದ್ ತಿಂದದ್ದೇ ಹೆಚ್ಚಿಗೆ ಆಗಿ ಹೋಗುಟ್ಟು. ಆದ್ರಿಂದ ಸ್ವಲ್ಪ ಊಟನ ಇಲ್ಲಿಗೇತಂದ್ ಬಡ್ಸಿ ಬುಡಿಕೆ ಹೇಳಿ ತಾ ಮಹೇಂದ್ರ ಪಾಲ್‌ಗೆ ಹೇಳ್ದೊ. ಆತ್. ನಿಮಿಗೆ ಹೆಂಗೆ ಆರಾಂ ಕಂಡದೆ. ಹಂಗೇ ನಾನ್ ಮಾಡಿನೆ ತಾ ಹೇಳಿ ಅಲ್ಲೇ ಪಕ್ಕಲಿ ನಿಂತಿದ್ದ ಚೋಮುಣಿ ಹೈದನ ಕರ್ದ್ ಈ ನೆಂಟರಿಗೆ ಸ್ವಲ್ಪ. ಇಲ್ಲಿಗೆ ಊಟನ ಸಪ್ಲೈಮಾಡಿಕೆ ಹೇಳ್ತ್. ಆಗ ಕೆಲವು ಮನೆ ಹೆಣ್ಣ್‌ಮಕ್ಕ ಈ ಮೈಸೂರು ಗೆಸ್ಟ್‌ಗ ಕುದ್ದಲ್ಲಿಗೆ ಊಟನ, ಮಾಂಸಸಾರ್‌ನ ತಂದ್ ತಂದ್ ಪ್ರೀತಿ ಬಾವಲಿ ಬಡ್ಸಿಕೊಟ್ಟೊ. ಈ ಜನ ಕಾಣದ ನಾಯಿ ಕಡುಬು ತಿಂದಂಗೆ ಒಂದೊಂದು ಕೇಜಿ ಹಂದಿ ಗೈಪ್‌ನ ಹಾಕ್ಸಿಕಂಡ್ ಅದರ ಮೇಲೆ ಚಿಕನ್ ಪ್ರೈನೂ ಹಾಕ್ಸಿಕಂಡ್ ಒಳ್ಳೆಲಾಯಕ್‌ಲಿ ಬಾಯಲಿ ಬರುವಷ್ಟರ ಮಟ್ಟಿಗೆ ಕುಡ್ದ್‌ಕಂಡ್ ತಿಂದೊ. ಸನ್ಯಾಸಿ ವೇಶಧಾರಿ ಕರಿಬಸವಯ್ಯ ಮತ್ತೆ ಲಾರಿ ಡ್ರೈವರ್ ಹನೀಫ್ ಶಾಬ್‌ಗೆ ಕುಡ್ದ್‌ದ್ ಲೋಡ್ ಜಾಸ್ತಿ ಆಗಿ ಅವು ಕುದ್ದಲ್ಲೇ ಬಗ್ಗ್‌ತ್ತೇಳಿ ಕಾರಿಕೆ ಶುರುಮಾಡ್ದೊ. ತಿಂದದೆಲ್ಲಾ ಒಂದ್ ಘಳಿಗೆಲಿ ಹೊಟ್ಟೆಂದ ವಾಪಾಸ್ ಬಾತ್. ಆದ್ರೂ ಈ ಮನೆ ಜನ ಬೈಜಾರು ಮಾಡಿಕಣದೆ ಇರ್‌ಲಿ, ಇರ್‌ಲಿ ಬುಡಿ ಅಯ್ಯೋಪಾಪ ತಾ ಹೇಳಿಕಂಡ್ ಕುಡ್ದ್ ಬಿದ್ದವರ ಎತ್ತಿ ಬೇರೆಕಡೆಲಿ ಸರಿಯಾಗಿ ಕುರ್ದಿಸಿ ಅವರ ಮೊಖನ, ಕೈಕಾಲ್‌ಗಳ ಕಾರಿಕಂಡ್ ಬಿದ್ದಿದ್ದ ಹೇಸಿಗೆನ ತೊಳ್ದ್ ಕ್ಲೀನ್ ಮಾಡಿ ಕೊಟ್ಟೊ. ಆಗ Mr. ಮಹೇಂದ್ರ ಪಾಲ್ ಅಲ್ಲೆ ಎಲ್ಲವಕೂ ಚಾಪೆಗಳ ತಂದ್ ಹಾಸಿ ಒಬ್ಬೊಬ್ಬರಿಗೂ ತಲೆ ದಿಂಬ್‌ಗಳ ಕೊಟ್ಟ್. ಆರಾಂ ಆಗಿ ನೆಟ್ಟಂಗೆ ಮಲ್ಗ್‌ಸಿತ್. ಈ ಮೈಸೂರ್‌ಂದ ಬಂದಿದ್ದ un-wanted guest ಗ ಕಣ್ಣ್‌ನೂ ಬುಡಿಕೆ ಬೊತ್ತದೆ ಮಾತುನೂ ಆಡಿಕೆ ಬೊತ್ತದೆ ನೆಟ್ಟನೆಟ್ಟಂಗೆ ಬಿದ್ದ್ ಹೋಗಿ ಹಂಗೆ ಹಂಗೇ ಗೇನ ತಪ್ಪಿದಂಗೆ ಮಲ್ಕಂಡ್ ಬುಟ್ಟೊ. Mr. ಮಹೇಂದ್ರ ಪಾಲ್ ಈ ಗೆಸ್ಟ್‌ಗಳ ಸುಧಾರ್ಸಿ ಆಕ್ಯಾಕನ ಮೂರು ಪಂಕ್ತಿದ್ ಊಟ ಮುಗ್ದಿತ್. ಈಗ ಮದುಮಗಳಿಗೂ, ಮದುಮಗಂಗೆ ಶಾಸ್ತ್ರ ಮಾಡಿಕೆ ಶುರುಮಾಡ್ತಿದ್ದೊ. ಹಂಗಾಗಿ ಈಗ ಕೆಲವು ಜನಗ ಗಂಡ್‌ನ ಕಡೆಗೂ, ಕೆಲವು ಜನ ಹೆಣ್ಣ್‌ನ ಕಡೆಗೂ ಬೇರೆ ಬೇರೆ ಗುಂಪು ಆಗಿ ಸೇರಿಕಂಡೊ. ಮೊದ್ಲ್ ಸೋದರ ಮಾಂವ ನೆಲ್ಲಕ್ಕಿ ಮುಂದೆ ಬಂದ್ ಮದುಮಗಳಿಗೆ ಕಾಸ್‌ತಾಳಿ ಕಟ್ಟುವ ಶಾಸ್ತ್ರಕ್ಕೆ ಬೋಪಜ್ಜ ಬಂದ್ ಊರವರ, ನೆಂಟ್ರ್‌ಗಳ ಪದ್ದತಿ ಪ್ರಕಾರ ಕರ್‍ದೋ. ಆಗ ಅಲ್ಲಿಗೆ ಹೆಣ್ಣ್ ಜನ, ಗೂಡೆಗ, ಅಕ್ಕಂದಿರ್. ಅತ್ತಿಗೆಂದಿರ್, ಅಜ್ಜಿಕ ಹಿಂಗೆ ಎಲ್ಲಾ ಬಂದ್ ಸೇರಿಕಂಡೊ. ಈ ಹೆಣ್ಣ್ ಜನ ಸೇರ್ದಕಡೆ ಕೆಲವು ಸ್ವಲ್ಪ ಡೊಸ್ ಆದ ಹೈದಂಗ ತಾವೂ ಇವರೊಟ್ಟಿಗೆ ಶಾಸ್ತ್ರ ಮಾಡುವವರಂಗೆ ಮದ್ಯೆ ಸೇರಿಕಂಡೊ. ಆಗ ಮೇಲೆಮನೆ ಅಮ್ಮವಜ್ಜಿ ಒಂದ್ ಸರ್ತಿ ಜೋರಾಗಿ ಬಾಯಿತೆಕ್ತ್ ಯಾರ್‌ನೇ ಇಲ್ಲಿ ಹೈದಂಗ ಕಳ್ಳ್ ಕುಡ್ಕಂಡ್ ಹೆಂಗ್ಸರ್ ಮದ್ಯೆ ತೂರಾಡ್ದು? ಗಂಡ್ ಜನಿಕೆ ಏನ್‌ಕೆಲ್ಸ ನಡಿಯೆನಿ ಆಚೆತಾ ಹೇಳಿಕಾಕನ ಅಲ್ಲಿ ತಮಾಷೆ ಮಾಡಿಕಂಡಿದ್ದ ಹುಡುಗರ ಗುಂಪು ಮೆಲ್ಲಂಗೆ ಅಲ್ಲಿಂದ ಜಾಗ ಖಾಲಿ ಮಾಡಿ ಮದು ಮಂಜಂಗೆ ಎಣ್ಣೆ ಅರಶಿನ ಶಾಸ್ತ್ರ ಮುಗ್ದ್ ಮದುರಂಗಿ ಶಾಸ್ತ್ರ ಮಾಡುತಿದ್ದ ಜಾಗಕೆ ಹೋಗಿ ಸೇರಿಕಂಡೊ.

ಉತ್ತರದಲ್ಲಿ ದಕ್ಷಿಣಕ್ಕಿಂತಲೂ ಜಾಗ ಜ್ಯಾಸ್ತಿ ಖಾಲಿ - ಸಿರಿ, ಸುದತಿಗೆ ಸುಖದ ಜೋಕಾಲಿ.

ಈ ಗುಂಪಿಗೆ ನೇಪಾಳಿ ಫ್ರೆಂಡ್ Mr. ಮಹೇಂದ್ರ ಪಾಲೇ ನಾಯಕ ಈ ಗುಂಪು ಅಲ್ಲಿಗೆ ಹೋಗಿ ನೋಡಿಕಾಕನ ಅಲ್ಲಿ ಮದುವೆ ಗಂಡ್‌ನ ಶರಟ್‌ನ ಬಿಚ್ಚಿ ಅವರ ಕಡೆ ಅತ್ತಿಗೆ ನಾದಿನಗ ಎಲ್ಲಾ ಸೇರಿಕಂಡ್ ಮದರಂಗಿ ಶಾಸ್ತ್ರ ಮಾಡುತಿರ್ದರ ನೋಡಿ ನಗೆ ಆಡಿಕಂಡ್ ತಮಾಷೆ ಮಾಡಿಕೆ ಶುರು ಮಾಡ್ರೊ. ಎರ್‍ರ್ರಾ ಬಾಬು ನಮ್ಮ ಈ ಹೊಸ ಗಂಡ್ ನಮ್ಮ ಫಿಲ್ಮಂ ಸ್ಟಾರ್ ಗೋವಿಂದನಂಗೆ ಕಂಡೆದಲ್ರಾ ? ತಾ ಕೇಳ್ತ್. ಹೌದ್ರಾ? ನಿಂಗೆ ಹಂಗೆ ಕಂಡದ್ಯಾ? ನಂಗೆ ನಮ್ಮ ಕಾಮೆಡಿಯನ್ ಉಮೇಶ್‌ನ ತರ ಕಂಡದಲ್ಲಾ? ಅವರ ಮುಖ ಒಳ್ಳೆ ಹನುಮಂತನ ಮುಖ ದಂಗೆ ಕಂಡದಲ್ಲಾ, ಬಾವಾತ್ತೇಳಿ ನಗೆ ಆಡ್ತ್. ಏಯ್ ಹಂಗೆ ಹೇಳ್‌ಬ್ಯಾಡ್ರ ನಮ್ಮ ಹೊಸ ಬಾವಂಗೆ, ಇವುತ್ತೇಳ್ರೆ ಏನ್? ಇವರ ಸ್ಟೇಟಸ್ ಏನ್ ಇವರ ಸ್ಟೇಟಸ್ ನಮ್ಮ ಸ್ಟೇಟಿಗೇ ಪಸ್ಟ್. ಇವು ಬ್ಯಾಂಕಲಿ ದೊಡ್ಡ ಕ್ಯಾಷಿಯರ್ ಆಗೋಳ ಗಡ್ರಾ?!! ಹೌದಾ?!! ಮತ್ತೆ ಇವುಕೆ ಒಂದ್ ಲಕ್ಷ ರೂಪಾಯಿ ವರದಕ್ಷಿಣೆ ಬೇಕ್ ತ್ತಾ ಕೇಳಿ ಕಂಡೊ ಗಡ! ಇವು ಬ್ಯಾಂಕ್‌ಲಿ ಕ್ಯಾಷಿಯರ್ ತ್ತೇಳ್ದ ಮೇಲೆ ಮೆಲ್ಲಂಗೆ ಎರಡ್ ಐನೂರರ ಕಂತೆನ ಜೋಬೊಳಗೆ ಇಳ್ಸಿ ಕಂಡಿದ್ರೂ ಆಗಿ ಹೋತಿತಲ್ಲಾ ? ಇವುಯಾಕೆ ಒಂದ್ ಲಕ್ಷನೇ ಕೇಳ್ರೊ? ಓ ಅದಾ? ನಿಂಗೆ ಸಂಗತಿ ಗೊತ್ತಿಲೆ ಕಂಡದೆರಾ ಇವರ ಬೆಲೆನ ಇವರ ಅವ್ವ, ಅಪ್ಪ ಸೇರಿಕಂಡ್ ಕಳ್ದವಾರ ನಿಗಂಟ್ ಮಾಡ್ರೊ ಗಡ ಹೀ.. ಹೀ.. ಹೀ.. ಇಷ್ಟ್‌ದೊಡ್ಡ ನಮ್ಮ ಈ ಹೊಸ ಬಾವನ ಬೆಲೆ ಬರೇ ಒಂದ್ ಲಕ್ಷ ಛೇ ಛೇ ಇದೆಂಥಾ ಜುಜುಬಿ ಬೆಲೆರ್‍ರ್ರಾ ಬಾವಾ ಇವರ್ದ್? ನಮ್ಮ ನಾರಾಯಣ ಬಟ್ಟ್‌ನ ಮಂಜ ಅದೇ ಮಡಿಕೇರಿಲಿ ಲಕ್ಷ್ಮಿ ನಿವಾಸ್ ಹೊಟೇಲ್‌ಲಿ ಸಪ್ಲೈಯರ್‌ನ ಗೊತ್ತುಟಲ್ಲಾ? ಹಾಂ! ಹಾಂ! ಗೊತ್ತುಟು. ಆ ಹೈದಂಗೆ ಮೊನ್ನೆ ಸುಳ್ಯದ ಮಾವನ ಮನೆವು ಒಂದೂವರೆ ಲಕ್ಷಕೆ ಮಾಡಿಕಂಡೊ ಗಡ. ಛೇ! ಛೇ! ಈ ಬಾವಂಗೆ ಐದ್ ಲಕ್ಷನ್ನಾದ್ರೂ ಬೆಲೆ ಕಟ್ಟ್‌ಕಾಗಿತ್. ಆಗ ಬೋಜಿಬಾವ ಬಂದವು ಬಹಳ ಬೇಜಾರ್ ಮಾಡಿಕಂಡ್. ಅಯ್ಯೋ ಪಾಪ ನಮ್ಮ ತಂಗೆ ಶೋಭಂಗೆ ಇಷ್ಟ್ ಸಿಲ್ಲೀ ರೇಟ್‌ನ ಗಂಡನ ಕೊಂಡಕಂಬ ಕಾಗದಿತ್ತ. ಏನು ಬಾವಂದಿರೆ? ನೀವು ಬೇಜಾರಾದು ಬೇಡ ನಿಮ್ಮ ಬೆಲೆ ಬರೇ ಒಂದೇ ಲಕ್ಷನಾ? ಅಷ್ಟೊತ್ತಿಗೆ ಇನ್ನೊಬ್ಬ ಶಾಮಿತ್ತೇಳೊ ಅಣ್ಣ ಆಯ್ಯೋ ನಿಮಿಗೆಲ್ಲಾ ಒಂದ್ ಲಕ್ಷತ್ತೇಳಿರೆ ಅದ್ ಸಣ್ಣ್ ಎಮೌಂಟ್ ತಾ ಕಂಡದಲ್ಲಾ? ಆ ಒಂದೇ ಲಕ್ಷ ಹಣ ನಮ್ಮ ರಾಜಣ್ಣನ ಕೈಲಿದ್ದಿದ್ರೆ ಅಂವ ಯಾಕೆ ಈಗ ಹೊರಗೆ ಓಡಿಹೋಕಿತ್? ಅಂದ್ ಆ ಒಂದೇ ಲಕ್ಷ ಹಣನ ಹೆಂಗಾದ್ರೂ ಮಾಡಿ ಸಂಪಾದನೆ ಮಾಡಿಕಂಡೇ ಬನ್ನೆತ್ತೇಳಿ ಮನೆಬುಟ್ಟ್ ರಾತ್ರೋ ರಾತ್ರಿ ಹೋದಂವ ಇನ್ನೊ ತಿರ್ಗಿ ಮನೆಗೆ ಬಾತ್ಲೆ. ಈ ಒಂದ್ ಲಕ್ಷಕೋಸ್ಕರ ಇಂದ್ ನಮ್ಮ ಶೋಭ ಅವಳ ಅಣ್ಣನ ಕಳ್ಕಂಡತ್. ಈಗ ಇವುಕೆ ಒಂದ್ ಲಕ್ಷ ಹಣನೂ ಇಲ್ಲೆ ನಮ್ಮ ಬೋಪಜ್ಜಂಗೆ ಮಂಜನೂ ಇಲ್ಲೆ. ಆ ಹೈದ ಎಲ್ಲಿ ಹೋಗಿ ಪೋಲಿಸರ ಕೈಗೆ ಸಿಕ್ಕಿಹಾಕಂಡ್ ಆಮೇಲೆ ಬಳ್ಳಾರಿ ಜೈಲಿಗೆ ಹೋತೋ? ಏನೊಂದೂ ಗೊತಾತ್‌ಲೆ. ಓ ! ಹಂಗಾ! ಅದೇ ನೆನ್ನೆ ದಿನ ನಾನ್ ಪೇಪರ್‌ಲ್ಲಿ ಅಂವನ ಪೊಟೋನ ನೋಡಿದ್ದೆ. Mr. ರಾಜುನ ಹುಡುಕಿ ಕೊಟ್ಟವಕೆ ಒಂದ್ ಸಾವಿರ ಬಹುಮಾನ ಕೊಟ್ಟನೆತಾ ನಮ್ಮ ಬೋಪಜ್ಜ ಮಾಂವ ಪೇಪರ್‌ಲಿ ಹಾಕಿಸಿದ್ರೂ. ಹೌದು ಹೌದು ನಾವೂ ಕೂಡಾ ಪೇಪರ್‌ಲಿ ನೋಡ್ರೊ. ಹಂಗೂ ಹಿಂಗೂ ನಮ್ಮ ಈ ಬಾವನ ಕಾಲು ದೆಸೆಂದ ನಮ್ಮ ಒಳ್ಳೆ ಸ್ನೇಹಿತನ ಕಳ್ಕಂಡಂಗೆ ಆತ್ ತಾ ಶಾಬು ಹೈದ ಮರ್ಗ್ಗಿಕೆ ಸುರು ಮಾಡ್ತ್. ಇನ್ನ್ ನಮ್ಮ ಶೋಭ ಗೂಡೆನ ಇವು ಹೆಂಗೆ ಸಾಕಿವೋ ಆ ದೇವರಿಗೇ ಗೊತ್‌ತಾ ಮರ್ಗ್ವತ್.

ಆಗ ಇನ್ನೊಬ್ಬ ಹೇಳ್ತ್ ಆಹಾ! ಅದೆಲ್ಲಾ ಆಕಿಲ್ಲೆ ನಮ್ಮ ಶೋಭಂಗೆ ಒಂದ್ ಸಾಸುವೆಯಷ್ಟ್ ತೊಂದರೆ ಕೊಡ್ಲಿ ನೋಡ್ ಈ ನಮ್ಮ ಹೀರೋ. ಆಮೇಲೆ ನೋಡಿಕಣಿ ಅದರ ಕಥೆನಾ ಇನ್ನ್ ಮುಂದೆ ಯಾವ ಭೋಳಿ ಮಂಜನೂ ಕೂಡಾ ವರದಕ್ಷಿಣೆ ತೇಳ್ದರ ಉಸ್‌ರನ ಕೂಡಾ ಎತ್ತದಂಗೆ ಮಾಡಿ ಬುಟ್ಟನೆ. ನಾನ್ ಎಂತಂವ ತಾ ಇನ್ನೂ ಕೆಲವುಕೆ ಗೊತ್ತ್‌ಲೆ ಕಂಡದೆ ತಾ ಹೂಂಕರಿಸಿತ್.

ಇದನೆಲ್ಲಾ ಕೇಳ್ಸಿಕಂಡ್ ಹೆಣ್ಣ್ ಮಕ್ಕಳ ಕೈಯಿಂದ ಅಂಗೈಗೆ ಮದರಂಗಿ ಚಿತ್ರನ ಬುಡ್ಸಿಕಂಬತಿದ್ದ ಈ ಗಂಡಿಗೆ ನಾಚಿಕೆ ಆಗಿ ಮುಖನ ಮೇಲೆ ಎತ್ತಿಕೆ ಬೊತ್ತದಂಗೆ ಆಗಿ ಹೋಗಿತ್. ಈ ರಂಪಾಟನ ತಿಳ್ಕಂಡ ಬೋಪಜ್ಜ ಮಾಂವ ಓಡಿಬಾತ್. ಎಂತದ್ನೇ ಮಕ್ಳೇ ನಿಮ್ದ್ ತಮಾಷೆ ಪಾಪ ಆ ಮದುವಣ್ಣನ ತಲೆನ ಕೆಳಗೆ ಹಾಕಿಸಿಬುಟ್ರೋಳರಿ. ನಿಮ್‌ಗೆಲ್ಲಾ ಇವು ಹೊಸ ಬಾವತ್ತೇಳುವ ಅಭಿಮಾನನೇ ಇಲ್ಲೆನಾ? ತ್ತೇಳಿ ರೇಗಿಕಂಡೊ.

ಆಗ ಈ ಹೈದಂಗ ಒಟ್ಟಿಗೆ ಮಾವಂಗೆ ತಿರ್‍ಗಿ ಹೇಳ್ರೊ. ಮಾವಾ ನಮಿಗೆ ನಮ್ಮ ಬಾವತ್ತೇಳುವ ಒಳ್ಳೆ ಅಭಿಮಾನ ಖಂಡಿತಾ ಉಟ್ಟು. ಆದ್ರೇ ಮಾತ್ರ ಹಿಂಗೆ ಇವುಕೆ ನಮ್ಮ ಚಿನ್ನದಂತಹ ಗೂಡೆನೂ ಬೇಕ್, ಜೊತೆಗೆ ಒಂದ್ ಲಕ್ಷ ರೂಪಾಯಿ ವರದಕ್ಷಿಣೆನೂ ಬೇಕ್‌ತಾ ಕೇಳ್ವೆ ಅಲ್ಲಾ? ಇವುಕೆ ಹೆಣ್ಣ್‌ನ ಸಾಕುವ ಯೋಗ್ಯತೆ ಇಲ್ಲೆನಾ? ಹೇಳಿ. ಅವು ಹೇಳಲಿ ಕಟ್ಟಿಕಂಡ ಹೆಣ್ಣ್‌ನ ಸಾಕುವಂತ ಶಕ್ತಿ ಇಲ್ಲೆತಾ. ಆಗ ನಾವು ಅವುಕೆ ಒಂದ್ ಲಕ್ಷಕೆ ಬದಲಾಗಿ ಎರಡ್ ಲಕ್ಷನ ಕೊಟ್ಟವೆ. ಇಲ್ಲೇ ತ್ತೇಳಿರೆ, ನಾನ್ ಕಟ್ಟಿಕಂಡ ಹೆಣ್ಣ್‌ನ ಸಾಕುವಂತಹ ತಾಕತ್ ನಂಗೆ ಉಟ್ಟು. ನಿಮ್ಮ ಒಂದ್ ಲಕ್ಷ ಹಣ ನಂಗೆ ಬೇಕಾಗಿಲ್ಲೆ ತಾ ಎದೆ ತಟ್ಟಿ ಧೈರ್ಯಲಿ ಹೇಳಲಿ. ಆಗ ನಾವು ನಮ್ಮ ಈ ಬಾವನ ಮೇಲೆ ಪ್ರೀತಿ, ಅಭಿಮಾನ ಎಲ್ಲಾ ಒಟ್ಟಿಗೇ ಬಂದದೆ. ಇದ್ ನಿಜತಾನೆ? ಹೇಳಿ ನನ್ನ ಪ್ರೆಂಡ್ಸ್‌ಗ ಏನ್ ಹೇಳಿರೆ? ತಾ ಬಾಬು ಬಾವ ಜೋರಾಗಿ ಕರ್ದ್ ಕೇಳ್ತ್.

ಆಗ Mr. ಮಹೇಂದ್ರ ಪಾಲ್ ಈ ಪ್ರೆಂಡ್ಸ್‌ಗಳಿಗೆಲ್ಲಾ ಕೈಮೂಗ್ದ್ ಕೇಳಿಕಂಡತ್. ಈಗ ನೀವೆಲ್ಲಾ ಸ್ವಲ್ಪ ಶಾಂತಿಂದ ಇರೋಕು. ಪಾಪ ನಮ್ಮ ಬಾವ ಈಗ ನಾಚಿಕೆ ಮತ್ತೆ ಅವಮಾನಂದ ಭೂಮಿಮಟ್ಟಕೆ ಇಳ್ದ್ ಹೋಗೋಳೊ. ನಮ್ಮ ಬಾವ ಅಂತಿಂತವಲ್ಲಾ ಏನೋ ಪಾಪ ಅವರ ಅಪ್ಪ ಅಮ್ಮಂಗೆ ಸ್ವಲ್ಪ ಹಣದ ಮೇಲೆ ಆಸೆ ಅಷ್ಟೇ.

ಹಿಂದಿನ ಕಾಲದಂಗಲ್ಲಲ್ಲಾ ಈಗ? ಆ ಕಾಲದಲ್ಲಾಗಿದ್ರ ಕನ್ಯಾ ಋಣತ್ತೇಳಿ ಹೆಣ್ಣ್‌ನ ಹೆತ್ತವಕೆ ವದು ದಕ್ಷಿಣೆ ಕೊಟ್ಟ್ ಋಣ ಭಾರನ ಕಳ್ಕಂಡ್ ಮದುವೆ ಮಾಡಿಕಂಬಂತಹ ಸಂಸ್ಕೃತಿ

ಈಶಾನ್ಯದಲ್ಲಿ ಜಾಗ ಖಾಲಿ ಇಲ್ಲದ ಗೇಹ (ಮನೆ) - ಉಸಿರುನಿಂತ ದೇಹ.

ಆ ಕಾಲಲಿ ಇತ್. ಆದ್ರೆ ಈಗ ಕನ್ಯಾ ಋಣ ಹೋಗಲಿ ಆ ಋಣದ ಪಾಪದ ಮೇಲೆ ಕಡ್ಡಾಯವಾಗಿ ವರದಕ್ಷಿಣೆ ಕೇಳಿ ಹಿಂಗೆ ಶೋಷಣೆ ಮಾಡ್ವಂತಹ ಈ ಕ್ರಮ ಗಂಡ ಅಲ್ಲದ ತಲೆಹಿಡುಕ ಷಂಡರಿಗೆ ಯೋಗ್ಯವಾಗಿರತಕ್ಕಂತಹ ಈ ಕ್ರಮನ ರೂಢಿಗೆ ತಂದಂತಹ ಎಂತಹ ಸ್ವಾರ್ತ ನೀಚಗ ನಾವುಗ ತ್ತೇಳ್ದರ ಸ್ವಲ್ಪ ಗ್ನಾನಮಾಡಿ ನೋಡಿಕಂಬೋಕು ಅಲ್ಲರಾ ಬಾವಾ? ನೀವೆಸ್ ಹೇಳ್ರೆ ನಮ್ಮ ಈ ಬಾವನ ವಿಚಾರಲಿ ತಾ ಅಲ್ಲಿ ಸೇರಿದ್ದ ಸಕಲ ಜನರಿಗೆ ಒಂದ್ ಸವಾಲ್‌ನಂತಹ ಪ್ರಶ್ನೆನ ಮಹೇಂದ್ರ ಪಾಲ್ ಕೇಳ್ತ್.

ಹೋಗ್ಲಿ ಬಿಡಿ. ಪಾಪ ನಮ್ಮ ಬಾವ ನಾಳೆ ತಲೆ ಎತ್ತಿ ನಿಂತ್ ನಮ್ಮ ತಂಗೆನ ಕುತ್ತಿಗೆಗೆ ತಾಳಿ ಕಟ್ಟೊಕಲ್ಲಾ? ಈಗ ನಾವೆಲ್ಲಾ ಇರ್‍ವ ವಿಚಾರನ ಅವರ ಎದ್‌ರಿಗೆ ಮಾತಾಡಿ ಅವರ ಮನ್ಸ್‌ನ ಕೆಡ್ಸಿಬುಟ್ಟದಕ್ಕೆ ನಮ್ಮದ್ ತಪ್ಪಾತ್ ತಾ ಕೇಳಿಕಂಡವೆ ತಾ ಕೈಮುಗ್ದ್ ಕೆಲವು ಬಾವಂದಿರ್ ಒಟ್ಟಿಗೆ ಕ್ಷಮಾಪಣೆನ ಕೇಳಿಕಂಡೊ. ಆಗ ಅಲ್ಲಿದ್ದ ಇನ್ನೂ ಕೆಲವು ಹೈದಂಗ ನಗೆ ಆಡಿಕಂಡ್ " ಶೋಬಾನೆ ಶೋಬಾನೇ ಸೊಳ್ಳೊಟ್ಟೇ ನಮ್ಮ ಬಾವನ ಹೊಟ್ಟೇ ಡೊಳೊಟ್ಟೇ ಇದರ ತಿಳ್ಕಣದೇ ನಾನ್ ಕೆಟ್ಟೆ ತಾ ಹಾಡಿಕಂಡ್ ಅಲ್ಲಿಂದ ಮೆಲ್ಲಂಗೆ ಜಾಗ ಖಾಲಿ ಮಾಡ್ದೊ. ಆದ್ರೇ ಮದುಮಂಜ ಮೋಹನ್‌ಗೆ ತನ್ನ ಅಪ್ಪ ಅಮ್ಮನ ಮೇಲೆ ಬಹಳ ಸಿಟ್ಟ್ ಬಂದ್ ಬುಟ್ಟಿತ್. ನಾನ್ ಇವರ ಕೈಯಿಂದ ವರದಕ್ಷಿಣೆನ ತಕ್ಕೊಂಬಂವ ತಾ ತಿಳ್ಕಂಡ್ ನನ್ನ ಎಷ್ಟೊಂದು ಹೀನ ಮಟ್ಟಲಿ ಹಿಯಾಳ್ಸಿ ಬುಟ್ಟೊ. ಅದೂ ನನ್ನ ಸುತ್ತಾ ಸೇರಿಕಂಡಿದ್ದ ನನ್ನ ಅತ್ತಿಗೆ ನಾದಿನಿಕರಮುಂದೆ. ನನ್ನ ತಲೆ ತಗ್ಗಿಸಿಕಂಬಕೆ ಮಾಡಿಬುಟ್ಟೊಲ್ಲಾ? ಇವು ಕೊಡ್ವ ಕೇವಲ ಒಂದ್ ಲಕ್ಷ ರೂಪಾಯಿ ಹಣಕ್ಕೋಸ್ಕರ ನನ್ನ ಪೌರಷತ್ವ, ನನ್ನ ಸ್ಥಾನಮಾನನ ಅತೀ ಕೀಳ್ ಮಟ್ಟಕೆ ಹೋಲಿಸಿ ಬುಟ್ಟೊಲ್ಲಾ? ನಾನ್ ಇವರ ಮಗಳ ಮದ್ವೆ ಆಗಿ ಇವರ ಪ್ರೀತಿಯ ಅಳಿಯ ಆಗಿ ಈ ಮನೆಯವರ ವಿಶ್ವಾಸನ ಗಳಿಸಿಕಂಡ್ ಒಬ್ಬ ಯೋಗ್ಯನಾದ ಮರ್ಯಾದಸ್ತರಾದ ನೆಂಟ್ರ್‌ಗ ತಾ ಹೇಳ್ಸಿಕಂಬಕೆ ಆಸೆಪಡ್ತಿದ್ದ ನಂಗೆ ಈಗ ಇವರ ಹೃದಯಲಿ ಹಣಕ್ಕೆ ಆಸೆಪಡ್ವ ಅಲ್ಪನಾಗಿ ಬುಟ್ಟೆ. ಹಣಕ್ಕೋಸ್ಕರ ನಾನ್ ಮಾನ ಮರ್ಯಾದೆ ಇಲ್ಲದ ಬಂಡನಾಗಿ ಬುಟ್ಟೆಲ್ಲಾ ನನ್ನಿಂದ ಇವರ ಒಬ್ಬನೇ ಒಬ್ಬ ಮಂಜನೂ ಕೈತಪ್ಪಿಹೋಗುವ ಹಂಗೆ ಮಾಡಿಬುಟ್ಟೆಲ್ಲಾ ಛೇ ಛೇ!! ನಾನ್ ಖಂಡಿತ ಈ ಮನೆಯವರ ಪ್ರೀತಿ ವಿಶ್ವಾಸನ ಗಳಿಸಿಕಂಬೋಕು ನಾನ್ ಒಳ್ಳೆ ಆದರ್ಶ ವ್ಯಕ್ತಿ ತಾ ಇವರ ಬಾಯಿಂದಲೇ ಹೇಳ್ಸಿಕಂಬೋಕು ಆದ್ದರಿಂದ ನಾನ್ ಈಗ ನನ್ನ ಅಪ್ಪ ಅಂವಂಗೆ ನಿಷ್ಟುರನಾದ್ರೂ ಚಿಂತೆ ಇಲ್ಲೆ. ಇವು ನಂಗೆ ಕೊಡ್ವ ಒಂದ್ ಲಕ್ಷ ರೂಪಾಯಿ ವರದಕ್ಷಿಣೆನ ಬೇಡತಾ ತಿರಸ್ಕಾರ ಮಾಡೋಕು ತಾ ನಿರ್ಧಾರ ಮಾಡಿಕಂಡ್ ಹಂಗೇ ಬೆಳಗ್ಗಿನ ಜಾವಲಿ ಸ್ವಲ್ಪ ಮಾತ್ರ ನಿದ್ರೆ ಮಾಡ್ತ್.

ಮದ್ವೆ ಶಾಸ್ತ್ರ ಎಲ್ಲಾ ನಡೀತಾ ಉಟ್ಟು. ಆದ್ರೇ (ಈ ಕಿಲಾಡಿ ರಾಜು ವೇಷಮರೆಸಿಕಂಡ್ ಇಲ್ಲೇ ಎಲ್ಲಾದ್ರೂ ಇರ್ದುಕಂಡದೆ)

— ಮುಂದುವರ್ದದೆ.

ಕೂಡುಬೇಟೆ

ಒಮ್ಮೆ ಊರವೆಲ್ಲ ಸೇರಿಕಂಡ್ ಬೇಟೆಯಾಡಕುತ್ತೇಳಿ ಕಾಡಿಗೆ ಹೊರ್‌ಟ್ಟೊ. ನಾನೆ ಅವರೊಟ್ಟಿಗೆ ನಮ್ಮ ಟಾಮಿ ಮತ್ತೆ ಟೈಗರ್‌ನಾಯಿಗಳ ಕರ್‌ಕಂಡ್ ಹೊರ್‌ಟೆ. ಹಿಂಗೆ ಬೇಟೆಯಾಡವು ಒಂದ್ ಜಾಗಲಿ ಕುದ್ದ್ ಆದರ್‌ಲಿ ಒಬ್ಬ ಹಿರಿಯಂವ ಎದ್ದ್ ನಿತ್ತ್ ನಾವು ಹಿಂಗೆ ಎಲ್ಲವು ಸೇರಿ ಬೇಟೆಯಾಡಕುತ್ತೇಳಿ ಹೊರ್‌ಟೊಳೊ. ಹಿಂಗೆ ನಾವು ಹೊರ್‌ಟ ಯಾರಿಗೂ ತೊಂದರೆಯಾಗದಂಗೆ, ಬೇಟೆಯಾದರೆ ನಮ್ಮ ದೆವ್ವಕ್ಕೆ ಎಡೆ ಹಾಕುವೆತ್ತೇಳಿ ಹೇಳಿಕಂಡ್ ಎಲ್ಲವು ಎದ್ದ್ ಹೊರ್‌ಟೊ.

ಕೆಲವು ಕೋವಿ ತಂದವು ಬಿಲ್ಲ್ ನಿಲ್ಲಿಕೆ ತ್ತೇಳಿ ಪ್ರಾಣಿಗ ಅತ್ತ ಮುಂದೆ ದಾಟದಂಗೆ ಕಾಡಿಗೆ ಸುತ್ತ ನಿತ್ತವೆ. ಇನ್ ನಾವು ನಾಯಿಗಳ ಈ ಕಡೇಂದ ಕರ್‌ಕಂಡ್ ಚೂ ಕೂಡಿಸಿಕಂಡ್ ಬಿಲ್ಲ್ ನಿತ್ತಲ್ಲಿಗೆ ಎತ್ತಿರು ಒಂದು ಹಕ್ಕಿ ಕೂಡ ಸಿಕ್ಕಿತ್‌ಲೆ. ಇದೆ ತರ ಎಲ್ಲಾ ಕಾಡ್ ಸುತ್ತಿ ಆತ್. ಅಲ್ಲಿ ಸಹ ಎಂಥದು ಸಿಕ್ಕಿತ್‌ಲೆ. ಇನ್ ಹೊಟ್ಟೆ ಹಸ್ದವು ವಾಚ್ ತೆಗೆದ್ ಗಂಟೆ ನೋಡವೆ. ಗಂಟೆ 3¼ ಆವುಟು. ಇನ್ನ್ ಎಂಥ ಮಾಡುದುತ್ತೇಳಿ ಎಲ್ಲವು ನೀರ್ ಇರುವಲ್ಲಿ ಕುದ್ದ್ ತಂದ ಬುತ್ತಿನ ತಿಂದೊ.

ಇನ್ ಬಾಕಿ ಒಂದ್ ಕಾಡ್ ಇತ್ತ್. ಅದರ್ನ ಸುತ್ತಿಬುಡೊನೊತ್ತೇಳಿ ಬಿಲ್ಲ್ ನಿಲ್ಲವು ಮೊದಲು ಹೋದೊ. ಅದ್ ಬರೀ ಕಮಿನಿಷ್ಟ್ ಕಾಡ್. ಅದರ್‌ಂದ ನುಗ್ಗಿಕ್ಕೂ ಕಷ್ಟ ಆಗಿತ್. ಹೆಂಗಾರ್ ಮಾಡಿ ನಾಯಿಗಳ ಚೂ ಕೂಡ್ಸಿಕಂಡ್ ನುಗ್ಗಿದೊ. ನಮ್ಮ ನಾಯಿಗಂತೂ ಚೂ ಕೂಡ್ಸಿದಂಗೆ ನುಗ್ಗಿಕಂಡ್ ಹೋಗೆ ಬುಟ್ಟೊ. ಇನ್ ಅರ್ಧ ಕಾಡ್‌ಗೆ ತಲೆಪುಕಾಕನ ಗುಂಡ್ ಕೇಳ್ತ್. ಗುಂಡು ಹೊಡೆದ ರಾಂಪಣ್ಣ ಕ್ಯಾಮ ಬಿತ್‌ತ ಎಲವರ್ನ ಕರ್‌ತ್. ನಾವೆಲ್ಲ ಖುಷೀಲಿ ಓಡ್‌ದೊ. ಹೋಗಿ ಸತ್ತ ಕ್ಯಾಮನ ನೋಡ್‌ರೆ ಅದ್ ನನ್ನ ಟೈಗರ್ ನಾಯಿ ಆಗಿತ್.

ರಾಂಪಣ್ಣ ಕಮಿನಿಷ್ಟ್ ಗಿಡ ಸೇರೆಂದ ಕಂಡ್‌ತಲ. ಹಂಗೆ ಗುಂಡು ಹೊಡ್‌ದ್ ಬುಟ್ಟೆತ್ತೇಳಿ ನನ್ನ ಸಮಾಧಾನ ಮಾಡ್ದೆ. ನಂಗಂತು ಸತ್ತ ನಾಯಿನ ನೋಡಿಕಂಡ್ ಕಣ್ಣಿಂದ ನೀರ್ ಉಕ್ಕಿ ಬಾತ್. ಇನ್ನ್ ಎಂಥ ಹೇಳಿಕಾದೆ. ಇನ್‌ಮುಂದೆ ಕಾಡ್‌ಬೇಟೆಗೆ ನಾಯಿಗಳ ಕರ್‌ಕಂಡ್ ಹೊಲೆತ್ತೇಳಿ ಸತ್ತ ನಾಯಿನ ಗುಂಡಿಗೆ ಹಾಕಿ. ಬೇಟೆಯಾಗದ ಸಿಟ್ಟ್‌ಲಿ ನಾಯಿ ಸತ್ತ ಬೇಜಾರ್‌ಲಿ ಎಲ್ಲವು ರಾಂಪಣ್ಣಂಗೆ ಬೈಕಂಡ್ ಮನೆ ಕಡೆ ಹೆಜ್ಜೆ ಹಾಕಿದೊ.

— ಬಿರುಮಣ್ಣನ ಕೆ. ಪ್ರವೀಣ, ಮದೆನಾಡು.

ನಿಧನ

ಕಗ್ಗೋಡ್ಲು ನಿವಾಸಿ ಮಾಜಿ ಎಂ. ಎಲ್.ಎ. ಶ್ರೀ ದಂಬೆಕೋಡಿ ಮಾದಪ್ಪನವರ ಧರ್ಮಪತ್ನಿ ಮೀನಾಕ್ಷಿಯವರು ದಿನಾಂಕ 22-7-2001 ನಿಧನರಾದರು. ಇವರಿಗೆ 47 ವರ್ಷ ಪ್ರಾಯವಾಗಿತ್ತು. ಅಲ್ಲದೆ ಪತಿ, ಒಂದು ಗಂಡು ಒಂದು ಹೆಣ್ಣು ಮಕ್ಕಳಲ್ಲದೆ ಅಪಾರ ಬಂದು ವರ್ಗವನ್ನು ಅಗಲಿದ್ದಾರೆ.

ಹೆದ್‌ರಿಕೆ

ರಾಜು ಸಣ್ಣವನಾಗಿರಕನ ಬಾಳ ಹೆದರಿಕೆ ಇತ್. ರಾತ್ರಿ ಎಲ್ಲಾರ್ ಮನೆ ಬುಟ್ಟ್, ಹೊರಗೆ ಹೋಕುತಾದರೆ ಜೊತೆಗೆ ಒಬ್ಬ ಬೇಕೆ ಬೇಕ್. ರಾತ್ರಿ ಉಚ್ಚೆ ಹೊಯ್ಯಕೆ ಹೋಕುತಾದರೆ ಅವ್ವ ಜೊತೆಲೇ ಬೇಕು. ಅಪ್ಪನ ಕೈಂದ ರಾಜುಗೆ ಅವ್ವಗೆ ಬೈಗಳ ತಿಂದ್ ತಿಂದ್ ಮಾಮೂಲಿ ಆಗೋಗಿತ್ತ್. "ನೀನ್ ಒಂದು ಗಂಡ್ ಹೈದನ ಹಿಂಗೆ ಆದರೆ ನೀನ್ ಎಲ್ಲಾವರ ಮುಂದೆ ಬದುಕುದು ಹೆಂಗೆ, ನನ್ನ ಮಾನ ಮರ್ಯ್ಯಾದೆ ಎಲ್ಲಾ ತೆಗ್‌ದಿಯತಾ ಬಯ್ಯತ್ತಿದ್ದೊ." ಹಿಂಗೆ ಸುಮಾರ್ ಹತ್ತನೆ ಕ್ಲಾಸ್‌ವರೇಗೆ ನಡದತ್. ಮತ್ತೆ ಪಿ.ಯು.ಸಿ.ಗೆ ಮೂರ್ನಾಡ್‌ಗೆ ಕಾಲೇಜ್ ಹೋಕೆ ಸುರು ಮಾಡತ ಅಲ್ಲಿಂದ ರಾಜುಗೆ ಸ್ವಲ್ಪ ಧೈರ್ಯ ಬಾತ್. ಅಂತು ಎಲ್ಲಾ ಹೆದರಿಕೆ ಹೋಗಿತ್‌ಲೆ.

ರಾಜು ಗೆ ಮೂರ್ನಾಡ್ ಕಾಲೇಜ್‌ಗೆ ಹೋಗಿ ಬಾಕೆ 5+5=10ಕಿ. ಮೀ. ಆದೆ. ಹೋಗಿ ಬಾಕೆ ಒಂದು ಸೈಕಲ್ ಬೇಕುತ ಅಪ್ಪನ ಹತ್ರ ಹಟ ಹಿಡತ್ತ್. ಇದಕೆ ಅಪ್ಪ, ಒಂದು ಷರತ್ ಹಾಕಿತ್. ನೀನ್ Iಪಿ.ಯು.ಸಿ. ಲಿ ಪಾಸಾದರೆ ಮಾತ್ರ ಸೈಕಲ್ ತೆಗದ್ ಕೊಟ್ಟನೇತ ಹೇಳತ್. ರಾಜ ಹೆಂಗಲ್ಲಾ ಓದಿI ಪಿ.ಯು.ಸಿ. ಪಾಸ್ ಮಾಡತ್. ಅಪ್ಪ, ಒಂದು ಹಳೆ ಸೈಕಲ್ ತೆಗದ್ ಕೊಟ್ಟತ್. ಸೈಕಲ್ ತೆಗದ ಮೇಲೆ ಕಾಲೇಜ್ ಬುಟ್ಟಂಗೆ ಕ್ರಿಕೆಟ್, ಹಾಕಿ, ಆಡಿ ಮನೆಗೆ ಬಾಕಾಕನ ಯಾಗೋಳು ತಡ ಆತಿತ್.

ಒಂದು ದಿನ ಸುಮಾರು 7-30 ಗಂಟೆ ಅಂದಾಜಿಗೆ ಮೂರ್ನಾಡ್‌ಂದ ಸೈಕಲ್‌ಲಿ ಹೊರಟತ್. ಮಾಮೂಲಿ ದಿನಾ ಬರುವ ದಾರಿ ಆದರಂದ ಸ್ವಲ್ಪ ಕತ್ತಲಾದರು ಅಂದಾಜ್ ಮೇಲೆ ಮನೆಗೆ ಬಂದ್ ಬುಡ್‌ತಿತ್ತ್. ಈ ದಿನ ಮಾತ್ರ ಸ್ವಲ್ಪ ಹೆಚ್ಚ್ ಕತ್ತಲಾಗಿತ್ತ್. ಮೂರ್ನಾಡ್‌ಂದ ಹೊರಟ್ ಮುತ್ತಾರ್ಮುಡಿ ಕೈಕಂಬ ಹತ್ತರ ವರೆಗೆ ಮೈನ್ ರೋಡ್ ದಾಟಿ ಉಳುವಾರ ಮನೆಗಾಗಿ ಬಾಕಾಕನ ಕುತ್ತ ಮರಡ ಕಾಕನ ರಾಜುಗೆ ಸ್ವಲ್ಪ ಹೆದರಕೆ ಆತ್. ಹೆಂಗೆಲ್ಲಾ ಬಂಡ ಧೈರ್ಯ ಮಾಡಿಕಂಡ್ ಹೊಗತಾ ಇತ್ತ್. ಅಲ್ಲಿ ಮುತ್ತಾರ್ಮುಡಿ ಹೊಳೆಗೆ ಆಗಾ ಒಂದು ಸಣ್ಣ ಕಾಲು ಸೇತುವೆ ಇತ್ತ್. ಈಗ ದೊಡ್ಡ ಸೇತುವೆ ಆವುಟು. ಸೇತುವೆ ದಾಟಿದಂಗೆ ರಸ್ತೆ ಬದಿಲಿ ರಾಜುಗೆ ಒಂದು ಬೆಂಕಿ ಗುಡ್ಡೆ ಕಾಣುತ್ತಾ ಉಟ್ಟು. ತುಂಬಾ ಕೆಂಡನು ಕಂಡದೆ. ಚಳಿಗಾಲ ಆದರಿಂದ ಸ್ವಲ್ಪ ಚಳಿಕಾಸಿಕಣತ ಗ್ಯಾನ ಮಾಡತ್. ಯಾರೋ ತೋಟ ಮಾಡಿಕೆ ಕಾಡು ಸುಡತ ಒಳೊತ ಗ್ಯಾನ ಮಾಡತ್. ಹತ್ತ್‌ರ್ ಬಂದ್ ನೋಡಿಕಾಕನ ತುಂಬಾ ಕೆಂಡ ಕಂಡದೆ. ಯಾಕೊ ಒಂದು ತರಹ ಮಾಂಸ ಸುಟ್ಟ ವಾಸನೆ ಬರುತ್ತಾ ಇತ್ತ್. ಸರಿಯಾಗಿ ರಾಜು ಬೆಂಕಿಗುಡ್ಡೆ ನೋಡ್‌ದೆ, ಮನುಷ್ಯನ ತಲೆ ಕೈಕಾಲು ಅರ್ದ ಬೆಂದ್ ಹೋಗಿ ನೋಡಿಕೆ ವಿಕಾರ ಆಗಿತ್ತ್. ರಾಜುಗೆ ಗುಡುಗು ಸಿಡಲ್ ಒಟ್ಟಿಗೆ ಹೊಡದಂಗೆ ಆತ್. ಅವನ ಸರಿರಲಿ ಎಲ್ಲತ್ತೊ ಬೆವರು ಗೊತ್ತುಲೆ ಮೈ ಎಲ್ಲಾ ಚಂಡಿ ಆಗಿ ಹೊತ್. ಉಚ್ಚೆದಾಟಿದಂಗೆ ಆತ್. ಆಗ ರಾಜುಗೆ ಉಳುವಾರ ಮನೆಲಿ ಅಂದ್ ಒಂದು ಅಜ್ಜಿ ತೀರಿ ಹೋದ ಗ್ಯಾನ ಬಾತ್. ಕೈಕಾಲ್ ಎಲ್ಲಾ ನಡಗಿ ಕಂಡ್ ಸೈಕಲ್ ಹತ್ತಿ ಹೊರಡಕು ತೇಳಿ ಸೈಕಲ್ ಮೊದಲೇ ಕೈಯಿಂದ ಜಾರಿ ಬಿದ್ದೊಗುಟು. ಕಣ್ಣ್ ಎಲ್ಲಾ ಕತ್ತಲಾಗಿ ಹೊವುಟು. ಅಲ್ಲಿಂದ ಇದ್ದ ಧೈರ್ಯನ ಎಲ್ಲಾ ತಂದ್ ಕಂಡ್ ಎಲ್ಲಾ ದೇವರನ ಗ್ಯಾನ ಮಾಡಿ ಸುರ್ಕುಳಿ ಕಡೆ ನೋಡ್ತ್? ಕೈಕಾಲು ತಲೆ ಅರ್ಧ ಬೆಂದ ಮಾಂಸ ಎಲ್ಲಾ ಕಾಣತಾ ಇತ್ತ್. ಹಳೆ ಅಜ್ಜಂದರ್ ಹೇಳದ ಹಂಗೆ ಸುರ್ಕುಳಿ ಸುತ್ತ ರಾತ್ರಿ ದೆವ್ವ ಕುಣಿದದೆತ ನೋಡ್ತ್, ಯಾವುದು ಕಾಂಬಲೆ, ಅಲ್ಲಿಂದ ಹೆಂಗಾರ್ ಮಾಡಿ ಬಿದ್ದ ಸೈಕಲ್‌ನ ಎತ್ತಿ ಸೈಕಲ್ ಹತ್ತಿರೆ ಹತ್ತ್‌ಕೇ ಆತ್‌ಲೆ. ರಾಜುನ ಪಾಡ್ ಹೇಳುದೆ ಬೇಡ. ಸೈಕಲ್‌ನ ಹಂಗೆನೆ ತಳ್ಳಿಕಂಡ್ ಓಡಿಕಂಡ್ ಹೋಗಿ ಕಲ್ಲುಮುಟ್ಲು ಮನೆ ಹತ್ತರ ಬಾತ್. ಅಂದ್ ಸಾವು ಆದ ಕಾರಣ ಎಲ್ಲಾ 7 ಗಂಟೆಗೆ ಮನೆ ಹುಕ್ಕಿ ಕೊಂಬರೆ ಸೇರಿ ಮಲಿಗೊಳೊ. ನಾಯಿಗ ಮಾತ್ರ ಬೊಗಳಿಕಂಡ್ ರಾಜುನ ಹತ್ರ ಬಂದೊ. ಸುರ್ಕುಳಿಲಿ ದೆವ್ವನೇ ಇಲ್ಲದ ಮೇಲೆ ಈ ನಾಯಿಗೆ ಹೆದರ್‌ದೆನಾ ರಾಜು. ಸೀದಾ ಕಷ್ಟಲಿ ರಾತ್ರಿ 8-30 ಗಂಟೆಗೆ ಮನೆ ಸೇರತ್.

ಮನೆಗೆ ಬಂದ ರಾಜು ಅವ್ವಂಗೆ ನಡೆದ ಎಲ್ಲಾ ವಿಷಯ ತಿಳಿಸಿತ್. ಅವ್ವ ರಾಜುಗೆ ಬೈಕಂಡ್ ಗಾಳಿ ಸೊಪ್ಪ್, ಬೆಳ್ಳುಳ್ಳಿ, ನರ್ವಿಷಸೊಪ್ಪು ಎಲ್ಲಾ ಗುದ್ದಿ ಮೈಕೈಗೆಲ್ಲಾ ತಿಕ್ಕಿತ್. ಅಕ್ಕಿ ತಲೆ ಸುತ್ತು ತಂದ್ ಹೊರಗೆ ಬಿಸಾಡ್ತ್. ರಾತ್ರಿ ಊಟಮಾಡಿ ಮಲಗಿದ ಮೇಲೆ ಅದೇ ಕನಸ್, ಸುರ್ಕುಳಿ, ಬೆಂಕಿ, ಹೆಣ ಕಾಣತ ಇತ್ತ್.

ಬೆಳಿಗ್ಗೆ ಎದ್ದಾ ಮೇಲೆ ರಾಜು ಗ್ಯಾನ ಮಾಡ್ತ್. ದೆವ್ವ ಪೀಡೆ, ಪಿಶಾಚಿ ಎಲ್ಲಾ ಹಿರಿಯವು ಜನರನ ಹೆದರಿಸಿಕೆ ಮಾಡ್ದ ಪ್ಲಾನ್‌ತ. ಅಂದನ ದಿನಂದ ರಾತ್ರಿ ಎಲ್ಲಿ ಬೇಕಾದರೂ ಹೋಗಿ ಬಾಕೆ ಸುರು ಮಾಡ್ತ್. ಹೆಂಗುಟ್ಟು, ಹೆದರಿಕೆ ಬುಟ್ಟದ್.

ನೈಜ ಘಟನೆ. ಹೆಸರು ಮಾತ್ರ ಕಾಲ್ಪನಿಕ

– ಬರಹ : **ಕೊಂಪುಳೀರ ಗಣೇಶ್ ಬೋಪಯ್ಯ, ಐಕೋಳ.**

RESERVATION OF SEATS IN EDUCATIONAL INSTITUTIONS

Reservation of seats in professional colleges for Ex-servicemen and serving personnel granted by Govt. of Karnataka

2.5% of available seats in polytechnics and 20 seats in TCH and 15 seats in B.Ed., are reserved for the children of serving Ex- Servicemen 70 and 50 seats each (total 120) in favour of children of serving personnel and Ex servicemen are reserved in Engineering courses. 6 seats in MBBS, 2 seats in BDS are reserved for serving and ex-servicemen respectively. 2.5 % in agricultural Universities and ITIs are also reserved for the wards of ex-service men.

Auth : CET Brochure of Govt. of Karnataka.

ದಕ್ಷಿಣದ ಸರಹದ್ದಿನ ಮೇಲೆ ಮಾಡಿದ ನಿರ್ಮಾಣ - ಬೋಗಭಾಗ್ಯಗಳ ನಿತ್ಯಕಲ್ಯಾಣ.

ನಾಣೆದ್ ನಾಟಕ

ಆ ರಾತ್ರಿ ಊರೆಲ್ಲಾ ಮಲಗಿದ ಮ್ಯಾಲೆ ಇದ್ದಕ್ಕಿದ್ದಂಗೆ ನಾಯಿಗಳ ಬೊಗಳಾಟ ಜೋರಾತ್. ಸೀಗಡಿ ಮೀನ್ ಸಾರ್ ಮತ್ತೆ ಚರ್ಮೆ ಸೊಪ್ಪುದ್ ಪಲ್ಯದ ಘಮ್ಮತ್ತ್‌ನ ಊಟ ಮುಗ್ಸಿ ಉಬ್ಬೆ ಹುಯ್ಯುಕೆತೇಳಿ ಅಂಗಳಕೆ ಬಂದ ಮಂದಪ್ಪಜ್ಜ, 'ಇದ್ಯಾಕೆ ಸುಟ್ಟೆ, ನಾಯಿಗ ಹಿಂಗೆ ಬೊಗುಳಾಡ್ದು'ತ್ತೇಳಿ ನೋಡ್‌ಕಾಕನ, ಯಾಲಕ್ಕಿ ಗೂಡ್‌ನ ಹತ್ರ ಯಾರೋ ನಿತ್ತಿರುವಂಗೆ ಕಂಡತ್. ಅಜ್ಜ "ಏಯ್ , ಯಾರ್‌ರಾ ಅದ್?" ತೇಳಿ ಕೂಗಿತ್. ಅಷ್ಟೊತ್ತಿಗೆ ಅಲ್ಲಿ ನಿತ್ತಿದ್ದಂವ ಬೆಚ್ಚಿಬಿದ್ದ್ ಜಗ್ಲಿಂದ ಕೆಳಗೆ ಹಾರಿ ಓಡಿಕೆ ಶುರುಮಾಡ್ತ್. ತಕ್ಷಣ ಮಂದಪ್ಪಜ್ಜ "ಕಳ್ಳಾ...ಕಳ್ಳಾ" ತೇಳಿ ಕಿರ್ಚಿತ್. ಓಡ್ತಾ ಇದ್ದ ವ್ಯಕ್ತಿಗೆ ಕತ್ತಲೆಲಿ ಸರಿ ಕಣ್ಣ್ ಕಾಂಬದೆ, ಅಂಗಳಲಿ ಗುತ್ತಿ ಎಡ್‌ಗಿ ಹೊಣ್‌ಕಿ ನೆಲಕೆ ಬೀತ್. ಅಂವ ಸುದಾರಿಸಿಕಂಡ್ ಮತ್ತೆ ಎದ್ದ್ ಓಡಿಕೆ ನೋಡುವಷ್ಟರ್ಲಿ ಮಂದಪ್ಪಜ್ಜನ ಇಬ್ಬರ್ ಮಜ್ಜಂದ್ರ್ ಓಡಿ ಬಂದ್ ಅಂವನ ಮೇಲೆ ಹಾರಿ ಮುಖಕ್ಕೆ ಗುದ್ದಿ ಸೊಂಟಕ್ಕೆ ಒದ್ದ್ ಸೊಯೆ ಹೋಗುವಂಗೆ ಮಾಡಿಬುಟ್ರೊ. ಹತ್ರಲೇ ಇದ್ದ ಆಳ್‌ಗಳ ಲೈನ್‌ಂದ ಒಂದ್ ಗೂಡೆ ಲ್ಯಾಂಪ್ ಹಿಡ್ಕಂಡ್ ಬಾತ್. ಲ್ಯಾಂಪ್‌ನ ಬೆಳ್‌ಕ್‌ಲಿ ಕೆಳಗೆ ಬಿದ್ದಂವನ ಮುಖ ಲಾಯಕಲಿ ಕಂಡತ್, ಅಂವ ಅದೇ ಊರ್‌ನ ನಾಣಿ." ಇಷ್ಟ್ ದಿನ ಯಾಲಕ್ಕೆ ಕದ್ದ್‌ಕಂಡ್ ಹೋತಿದ್ದದ್ ನೀನೇನಾ ಲೋಫರ್ ಬಡ್ಡೀ ಮಜ್ಜ"ತೇಳಿ ಬೈದ್ ನಾಣಿಗೆ ಇನ್ನೂ ಎರ್ಡ್ ಮಡ್‌ಗಿದೊ. " ಏ ಯಾರ್‌ನೆ ಒಳಗೆ, ಪೋಲೀಸ್‌ಗೆ ಪೋನ್ ಮಾಡಿನ್‌ತ ಕೂಗಿ ಹೇಳ್ತ್ ಮಂದಪ್ಪಜ್ಜ. ಹತ್ತ್ ನಿಮಿಷದೊಳಗೆ ಪೋಲೀಸ್ ಬಂದ್, ಮಾಲ್ ಸಮೇತ ಸಿಕ್ಕಿ ಬಿದ್ದ ನಾಣಿನ ಎಳ್ಕಂಡ್ ಹೋಗಿ ಲಾಕಪ್‌ಗೆ ಹಾಕಿದೊ.

ನಾಣಿ ಬಾರೀ ಹುಷಾರ್ ಮರಿ. ಪಾಪ, ಯಾಕೋ ಅವನ ಟೈಂ ಸರಿಯಿತ್ಲೆ. ಅಂವ ಹಿಂಗೇ ಹತ್ತಾರ್ ಕಳ್ಳತನಗಳ್ನ ಮಾಡಿದ್ರೂನೂ ಯಾಗೋಳು ಸಿಕ್ಕಿಬಿದ್ದಂವ ಅಲ್ಲ. ಈ ಸರ್ತಿ ಅವನ ಅದೃಷ್ಟ ಕೈಕೊಟ್ಟಿತ್ತ್. ನಾಣಿ ಇಂತದ್ನ ಕದ್ದತ್ಲೆತ ಇಲ್ಲೆ. ನೆರೆಮನೆಯವರ ಕೋಳಿಂದ ಹಿಡ್ದ್ ನೆಂಟ್ರ ಮನೇದ್ ಚಿನ್ನದವರೆಗೆ, ಯಾವುದನ್ನೂ ಉಳ್ಸಿದಂವ ಅಲ್ಲ. ಊರ್ ದೇವರ ವಿಗ್ರಹಕ್ಕೆ ಅಲಂಕಾರ ಮಾಡಿದ್ದ ಆಭರಣಗಳ್ನೇ ಕದ್ದ್ ಮಾರಿಬುಟ್ಟಿತ್ತ್.

ಇದೆಲ್ಲಾ ಸುಮಾರ್ ಜನ್ರಿಗೆ ಗೊತ್ತಾಗಿದ್ರೂ ಕೂಡ ಯಾವ ಸಾಕ್ಷಿ ಇಲ್ಲದೆ ಅಂವನ ಏನೂ ಮಾಡಿಕ್ಕಾಗಿತ್ಲೆ. ಜನ ಹಲ್ಲ್ ಕಚ್ಚಿಕಂಡ್ ಸುಮ್ಮನೇ ಇದ್ರೊ.

ಮಂದಪ್ಪಜ್ಜನ ಮನೆಯವು ಸ್ವಲ್ಪ ದೊಡ್ಡ ಕುಳ. ಆದ್ರಂದ ಈ ಸರ್ತಿ ಜಡ್ಜ್ ಅಂವಂಗೆ10 ತಿಂಗ ಜೈಲ್ ವಾಸತೇಳಿ ತೀರ್ಪು ಕೊಡುವಂಗೆ ಆತ್. ಆ ತೀರ್ಪುನ ಕೇಳಿ ನಾಣೆದ್ ಹೆಣ್ಣ್‌ನ ಗೋಳ್ ನೋಡಿಕಾತ್ಲೆ. ನಾಣಿ ಕದ್ದಾದರೂ ಮನೆಗೆ ಎಂತಾರ್ ತಂದ್ ಹಾಕ್‌ತಿತ್ತ್. ನಾಣೆದ್ ಹೆಣ್ಣ್ ಸುಮಾರ್ ಸಲ ಕದಿಯದ್ನ ಬುಟ್ಟುಬುಡಿತ ಹೇಳಿ ಹೇಳಿ ಸಾಕಾಗಿತ್ತ್. ನಮಿಗೆ ಕದಿವ ಕೆಲ್ಸ ರಕ್ತಗತ ಆಗಿಬುಟ್ಟದ್ರಂದ ಅಂವ ಯಾರ ಮಾತಿಗೂ ಬದಲಾವಣೆ ಆಗುವಂಗೆ ಕಾಂಬತಿತ್ಲೆ. ಅಂವಂಗೆ ಒಂದ್ ಸಣ್ಣ ಕೂಸ್ ಬೇರೆ ಇತ್ತ್. ಈಗ ಅವಿಬ್ಬರ್ ತಿಂಬಕೆ ಎಂತ ಮಾಡುವೆ ತೇಳ್ದೇ ಸಮಸ್ಯೆಯಾಗಿತ್ತ್.

ನಾಣೆದ್ ಹೆಣ್ಣ್ ಚಲಗಾರ್ತಿ. ಅವ್ಳು ಧೃತಿಗೆಟ್ಟಿತ್ಲೆ. ನಾಣಿಗೆ ಇದ್ದ ಒಂದೇ ಆಸ್ತಿತೇಳಿರೆ ಸ್ವಲ್ಪ ಹಡ್ಲ್ ಬಿದ್ದ ಗದ್ದೆ. ಊರವರ ಕೈಕಾಲ್ ಹಿಡ್ದಾದರೂ ಆ ಬಂಜರ್‌ಬಿದ್ದ ಗದ್ದೆನ ಹೂಡ್ಸಿ ಪಸಲು ತೆಗಿಯಕುತ ನಿರ್ಧಾರ ಮಾಡಿ, ಅದರ ಬಗ್ಗೆ ಜೈಲ್‌ಲಿದ್ದ ನಾಣಿಗೆ ಅವ್ಳು ಒಂದ್ ಕಾಗದ ಬರ್ತ್. ಕೂಡ್ಲೆ ನಾಣಿ ಅವ್ಳಿಗೆ ಒಂದ್ ಪತ್ರ ಬರ್ತ್." ಹಂಗೇಂತಾರ್ ಮಾಡಿಕೆ ಹೋಗ್‌ಬ್ಯಾಡ. ನಮ್ಮ ಗದ್ದೆ ಹತ್ರ ಯಾರ್ನೂ ಹೋಕೆ ಬುಡ್‌ಬೇಡ ಆ ಗದ್ದೆಲೇ ನಾನ್ ಕದ್ದ್ ತಂದ ಕೋವಿ ಮತ್ತೆ ಚಿನ್ನ ಎಲ್ಲ ಅಡ್‌ಗಿಸಿಟ್ಟಿರ್ದು". ದುರದೃಷ್ಟವಶಾತ್, ಖೈದಿಗ ಬರಿವ ಎಲ್ಲಾ ಪತ್ರಗಳ್ನ ಜೈಲ್‌ನವು ಓದಿಬುಟ್ಟ್, ಮತ್ತೆ ಕಳ್ಸಿಕೊಡ್‌ದರ್‌ಂದ ಜೈಲರ್‌ಗೆ ನಾಣೆದ್ ರಹಸ್ಯ ಗೊತ್ತಾಗಿಹೋತ್.


ಮಾರನೇ ದಿನನೇ ಜೈಲರ್, ಆವನ ಜನರ್ನ ಕರ್ಕಂಡ್ ಹೋಗಿ ನಾಣೆದ್ ಗದ್ದೆನ ಕೆತ್ತಿ ಹೂಣೆಟ್ಟ ಮಾಲ್‌ಗಾಗಿ ಹುಟುಕಾಟ ಶುರುಮಾಡ್ತ್. ಅಡಿಗಿಸಿ ಇಟ್ಟ ಮಾಲ್ ನಮ್ಮದೆತ ಹೇಳಿ ತಕಂಡ್ ಬುಡಕ್‌ತ ಗ್ಯಾನ ಮಾಡಿ ಊರ್‌ನ ಕೆಲವು ಆಸೆ ಬುರುಕರ್ ಆವರ ಕೆಲ್ಸನ ಬುಟ್ಟ್, ಪೋಲೀಸ್‌ಗಳೊಟ್ಟಿಗೆ ಎಳ್ಳಿಕೆ ಕೂಡಿಕೊಂಡೊ. ನಾಣೆದ್ ಹೆಣ್ಣ್ ಆವರ್ನ ತಡಿಯಕೆ ಎಷ್ಟ್ ಪ್ರಯತ್ನ ಪಟ್ಟರೂ ಸಾಧ್ಯ ಆತ್‌ಲೆ. ಬೆಳಿಗ್ಗೆಂದ ಸಾಯಂಕಾಲದ ವರೆಗೆ ಕೆತ್ತಿರೂನೂ ಗದ್ದೆಲಿ ಒಂದ್ ಪುಡಿಗಾಸೂ ಸಿಕ್ಕಿತ್ಲೆ. ಪೋಲೀಸ್ ಮತ್ತೆ ಊರ್‌ನ ಜನ ನಾಣೆನ ಬೈಕಂಡ್ ವಾಪಸ್ ಹೋದೊ.

ನಾಣೆದ್ ಹೆಣ್ಣ್ ಮಾರನೆ ದಿನ ಬೆಳಿಗ್ಗೇನೇ ಬಸ್ ಹತ್ತಿ ಜೈಲ್‌ಗೆ ಹೋಗಿ ನಾಣಿನ ಬೇಟಿ ಮಾಡಿ ಮರ್ಸ್ಕಂಡ್ ನಡ್ದ ಕತೇನ ಹೇಳ್ತ್. ಆಗ ನಾಣಿ ಜೋರಾಗಿ ನೆಗಾಡಿಕಂಡ್" ನೀನೇನ್ ಬೇಜಾರ ಮಾಡಿಕಬೇಡ. ನೀನ್ ಊರ್‌ನ ಜನ್ರನ್ನ ಹೂಡಿಕೆ ಸಹಾಯಮಾಡಿತ ಕೈಕಾಲ್ ಹಿಡ್ದ್ ಕರ್ದಿದ್ದರೂ ಒಬ್ಬನೂ ಬರ್ತಿತ್ತ್‌ಲೆ. ನಂಗೆ ಅದ್ ಇಷ್ಟನೂ ಇಲ್ಲೆ. ನಾನ್ ಬೇಕ್‌ತ ಹಿಂಗೆ ಪ್ಲಾನ್ ಮಾಡ್ದೆ. ಪೋಲೀಸ್‌ಗ ನಮ್ಮ ಬಂಜರ್ ಗದ್ದೆನ ಇಡೀದಿನ ಲಾಯ್ಕಲಿ ಕೆತ್ತಿ ಹಾಕೊಳೊ. ಈಗ ನೀನ್ ಯಾರ ಸಹಾಯನೂ ಕೇಳದೆ ಧೈರ್ಯಲಿ ಬಿತ್ತನೆ ಕೆಲ್ಸ ಶುರುಮಾಡ್" ತೇಳಿ ಹೇಳ್ತ್. ನಾಣೆದ್ ಹೆಣ್ಣ್ ತನ್ನ ಗಂಡನ ಬುದ್ದಿವಂತಿಕೆಗೆ ಮಾರ್‌ಹೋಗಿ ಬುಟ್ಟ, ಬಾಯಿ ಬುಟ್ಟಂಗೇ ನಿತ್ತ್‌ಕಂಡ್ ಬುಟ್ಟಿತ್.

ಸಾರಾಂಶ : ಅಪಾಯ ಬಾಕನ ಉಪಾಯ ಬೇಕು.

— ಎಡಿಕೇರಿ ಸುಧರ್ಶನ್, ಬೆಂಗಳೂರು.

ಪಶ್ಚಿಮ ಸರಹದ್ದಿನ ಮೇಲೆ ಮಾಡಿದ ನಿರ್ಮಾಣ - ಗಂಡಸಿನ ಕೀರ್ತಿಯ ತಾಣ.



ಶ್ರೀ ಪ್ರಮೋದ್ ಪದ್ಮನಾಭನ್, ಬಿ.ಇ.ಕೆಮ್. ಮತ್ತು
ಚೆಟ್ಟಿಮಾಡ ಭಾರತಿ ಜನಾರ್ಧನ್, ಬಿ.ಎ.

ವಿದೇಶ ಪ್ರಯಾಣಕ್ಕೆ ಶುಭ ಹಾರೈಕೆ

ವಿವಾಹ ದಿನಾಂಕ : 7-5-2001

ನೀವುಗಳು ದಿನಾಂಕ 7-5-2001ರಲ್ಲಿ ಬಾಳ ಸಂಗಾತಿಗಳಾಗಿ ಇದೀಗ ತಾನೆ ವಿದೇಶ ಪ್ರಯಾಣ ಮಾಡಿರುವ ನೀವುಗಳ ಹೊಸ ಜೀವನವು ಸುಖ ಸಮೃದ್ಧಿಯಾಗಿ ಯಾವತ್ತು ಚೇತೋಹಾರಿಯಾಗಿರಲೆಂದು ಶುಭವನ್ನು ಹಾರೈಸುವ

ಹೂಟ್‌ಗಳ್ಳಿ ಯಿಂದ :
ಚೆಟ್ಟಿಮಾಡ ಜನಾರ್ಧನ, ಮೈಸೂರು,
ತಾಯಿ : ಚೋಂದಮ್ಮ ಮತ್ತು
ಸಹೋದರಿಯಾದ : ಸವಿತಾ, ಶಶಿ ರೇಖಾ, ಪವಿತ್ರ

ಅಭಿನಂದನೆಗಳು

ಕುಮಾರಿ ವೈಶಾಲಿ



ಮೂಲತಃ ಕೊಡಗು ಜಿಲ್ಲೆಯ ಹೊದ್ದೂರು ಗ್ರಾಮದ ನಿವಾಸಿಯಾಗಿರುವ ಚೆಟ್ಟಿಮಾಡ ರಘುನಾಥ್ ಹಾಗೂ ಪುಷ್ಪ ದಂಪತಿಯ ಪುತ್ರಿ ಕುಮಾರಿ 'ವೈಶಾಲಿ' ಅವರು ಈ ಬಾರಿಯ ಪದವಿ ತರಗತಿಯ ವಿಜ್ಞಾನ ವಿಭಾಗದಲ್ಲಿ 1500ರಲ್ಲಿ 1244ರಷ್ಟು ಅಂಕ ಪಡೆದು (ಅಂದರೆ 82%) ಸುಳ್ಯ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಇವರು ಸುಳ್ಯದ ನೆಹರು ಸ್ಮಾರಕ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದಾರೆ. ಇವರಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

ಇವಳ ಉಜ್ವಲ ಭವಿಷ್ಯಕ್ಕೆ ಶುಭವನ್ನು ಕೋರುವ ಯಿಂದ : ದಾದ : ಕರ್ಣಯ್ಯನ ಕುಂಞಪ್ಪ. ದಾದಿಮ್ಮ : ನೀಲಮ್ಮ ಹಾಗೂ ಮಾವಂದಿರು ಮತ್ತು ಅತ್ತೆಯರು, ಚೆಟ್ಟಳ್ಳಿ, ಕೊಡಗು. ☎ : 08272 - 32648

ಮುದ್ದುಮಕ್ಕಳ ಅಪ್ಪ - ಅವ್ವಂದರಿಗೊಂದ್ ಶುಭ ಸುದ್ದಿ

ನೀವ್ ನಿಮ್ಮ ಮುದ್ದ್ ಮಕ್ಕಳ ಶುಭಾಶಯನ ಈ ರೀತಿ ಕೋರಕ್ಕ್. ಕೂಸುನ ಹೆಸ್ರ್, ಅಪ್ಪ, ಅವ್ವನ ಹೆಸ್ರ್ ಕೂಸ್‌ನ ಭಾವಚಿತ್ರ, ಹುಟ್ಟಿದ ತಾರೀಖ್, ಕೂಸ್‌ನ ಗೋತ್ರ, ಇಂತ ಎಲ್ಲಾ ವಿವರ್‌ ಪ್ರತಿ ತಿಂಗಳ 20ರ ಒಳಗಡೆ ಸಂಗಾತಿ ಆಫೀಸ್‌ಗೆ ತಲ್ಪಿಸಿರೆ ಖಂಡಿತ ನಾವ್ ಪ್ರಕಟಿಸುವೆ. ಆದ್ರೆ ನಿಮ್ಮ ಮುದ್ದ್ ಕೂಸ್‌ನ ಪ್ರಾಯ ಐದ್‌ಮೀರಿಕ್ಕಾದ್. ಮತ್ತೆ ನಮ್ಮ ಪ್ರಕಟಣೆಗೆ ದುಡ್ಡ್ ಬರೀ 200/- ರೂಪಾಯಿ ಮಾತ್ರ ತಪ್ಪದೆ ಕಳ್ಸಿ ಸಹಕರಿಸಿ.

ವಿಳಾಸ : ವ್ಯವಸ್ಥಾಪಕ, ಕೊಡಗ್ ಸಂಗಾತಿ, ಪಾಕ್ಷಿಕ ಪತ್ರಿಕೆ,
ಮೈಸೂರು, ☎ : 0821 - 516771

ನಾಲ್ಕನೇ ವರ್ಷದ ಚಿರಸ್ಮರಣೆ

ದಿ|| ಪಟ್ಟಡ ನಂಜುಂಡ



ಜನನ : 20-3-1913
ಮರಣ : 4-8-1997

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳೇ ಸಂದರು ನಿಮ್ಮ ನೆನಪುಗಳು, ನೀವು ನೀಡಿದ ಮಾರ್ಗದರ್ಶನವು ನಮಗಳಿಗೆ ಅನುದಿನವು ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಆ ಪರಮಾತ್ಮನು ಸದಾ ಚಿರಶಾಂತಿಯನ್ನು ಕರುಣಿಸಲಿ ಎಂದು ಕುಲದೈವ ಶ್ರೀವೆಂಕಟರಮಣನನ್ನು ಪ್ರಾರ್ಥಿಸುವ

ಪತ್ನಿ : ಪಟ್ಟಡ ಸೀತಮ್ಮ,
ಮಗ : ಜಯರಾಮ್, ಸೊಸೆ : ಪೂವಮ್ಮ,
ಮತ್ತು ಮೊಮ್ಮಕ್ಕಳಾದ : ದಿವ್ಯ, ದೀಪಕ್, ಉಷಾ, ಮೈಸೂರು.
ಪ್ರಕಟಣೆ : ಪಟ್ಟಡ ಜಯರಾಮ್,

Reg. No. KA/SK/MYS-88 Registered : 10-01-96 TCI Kar. 09592

"ಚೆಲುವನಾಡ ಐಸಿರಿ" - ಧಾರವಾಹಿ



ಅಮ್ಮಾಜೀರ ಪೊನ್ನಪ್ಪ ದಂಪತಿಗಳು



ಸಂದೇಶ್ ನಾಗರಾಜ್ ಜೊತೆ ನಿರ್ಮಾಪಕ ಅಮ್ಮಾಜೀರ ಪೊನ್ನಪ್ಪ ಮತ್ತು ನಿರ್ದೇಶಕ ಕರ್ಣೇಯ್ಯನ ಸುನಿಲ್

ಅಮ್ಮಾಜೀರ ಪೊನ್ನಪ್ಪನವರ ಪೊನಿಧ್ವನಿ ಕಂಬೈನ್ಸ್ ಲಾಂಛನದ 10 ಕುಟುಂಬ ಹದಿನೆಂಟು ಗೋತ್ರದ ಅರೆಭಾಷಿಕ ಗೌಡ ಜನಾಂಗದ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ "ಚೆಲುವನಾಡ ಐಸಿರಿ" ಎಂಬ 26 ಕಂತುಗಳ ಧಾರವಾಹಿಯಾಗಿ ದೂರದರ್ಶನದ "ಚಂದನ ಚಾನೆಲ್" ಪ್ರತಿ ಬುಧವಾರ ಸಂಜೆ 7-30 ಗಂಟೆಯಿಂದ 8-00 ಗಂಟೆತನ್ಕ ಬಿತ್ತರಿಸಲಿದೆ. ಈಗಾಗಲೇ 6 ಕಂತಿನ ಧಾರವಾಹಿಯು ಪ್ರಚುರಗೊಂಡಿದೆ. ವೀಕ್ಷಿಸಿ ಹಾಗೂ ಆನಂದಿಸಿ.

ನಿರ್ಮಾಪಕ ಮತ್ತು ಸಾಹಿತ್ಯ : ಅಮ್ಮಾಜೀರ ಪೊನ್ನಪ್ಪ

ನಿರ್ದೇಶಕ : ಕರ್ಣೇಯ್ಯನ ಸುನಿಲ್

ತೃತೀಯ ವಾರ್ಷಿಕ ಪುಣ್ಯ ಸ್ಮರಣೆ



ದಿ|| ಪಾಣತ್ತಲೆ ಗಣಪತಿ ಸೋಮಪ್ಪ

ಜನನ : 16-9-1942 *ಮರಣ* : 14-8-1998

ನೀವು ನಮ್ಮನ್ನಗಲಿ ಮೂರು ವರ್ಷ ಕಳೆದರೂ ನಿಮ್ಮ ಸವಿನೆನಪು, ಪ್ರೀತಿ ವಾತ್ಸಲ್ಯ ಹಾಗೂ ಆದರ್ಶ ಗುಣಗಳು ಅಚ್ಚಳಿಯದೆ ಉಳಿದು ನಿತ್ಯವೂ ಪ್ರತಿಧ್ವನಿಸುತ್ತಿರುವ ನಿಮ್ಮ ಹಿತ ನುಡಿಗಳು ಆಗಿಂದಾಗ್ಗೆ ಮರು ಕಳಿಸುತ್ತಿದ್ದು ನಮ್ಮ ಕಣ್ಣಂಚಿನಲ್ಲಿ ಕಂಬನಿ ಮಿಂಚಿ ಹರಿದು ನಿಮ್ಮ ಅಗಲಿಕೆಯ ನೋವನ್ನು ತರುತಿದೆ.

ನಿಮ್ಮ ನಿಷ್ಕಲ್ಮಶ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಅನುದಿನವೂ ಪ್ರಾರ್ಥಿಸುತ್ತಿರುವೆವು.

ದುಃಖ ತಪ್ತ ಪತ್ನಿ : ಕಮಲಾಕ್ಷಿ, *ಮಕ್ಕಳು* : ಕವಿತ, ಸವಿತ, ರೋಶನ್ (ರಾಜ)

ಅಳಿಯ : ಹರೀಶ್, *ಮೊಮ್ಮಗ* : ಕೃತಿಕ್ (ಸೋನು) *ಹಾಗೂ ಅಪಾರ ಬಂಧು ಬಳಗದವರು.*

Kodagu Sangathi Kannada Fortnightly Edited, Published Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.